ಅದನ್ನಾದರೂ ತಾವು ನಮಗೆ ಹೇಳಬೇಕಲ್ಲಾ? ಯಾವ Secretary ವರದಿಯನ್ನು ಮಂಡಿಸುತ್ತಾರೆಂದು ನಾವು ನೋಡುತ್ತಿದ್ದೆವು, ಇಬ್ಬರು Secretaryಗಳು ನಿಮ್ಮ ಕೆಳಗಡೆ ಕುಳಿತಿದ್ದಾರೆ. ಏನು ಉದ್ದೇಶ? ಏನು ಕೆಲಸಗಳನ್ನು ನಿರ್ವಹಣೆ ಮಾಡುತ್ತಾರೆ? ಅದನ್ನೂ ನಮಗೆ ಸ್ವಲ್ಪ ಹೇಳಿ, ನಾನು ಅವರಿಗೆ ಕರಸ್‌ಪಾಂಡೆನ್ಸ್ ಮಾಡಲು ಬೇಕಾಗುತ್ತದಲ್ಲಾ?

ಮಾನ್ಯ ಸದಸ್ಯರೊಬ್ಬರು: ಹೊಸ ಹುದ್ದೆ ಸೃಷ್ಟಿಯಾಗಿದೆಯೋ? ಏನೊ? ಅಂತ.

ಶ್ರೀ ವಾಟಾಳ್ ನಾಗರಾಜ್: ಏತಕ್ಕೆ ನೇಮಕ ಮಾಡಿದಿರಿ? ಅದರ ಉದ್ದೇಶಗಳೇನು? ಅದು ಸದನಕ್ಕೆ ಗೊತ್ತಾಗಿಲ್ಲ, ಅದಕ್ಕೋಸ್ಕರ ತಾವು ಸದನಕ್ಕೆ ತಿಳಿಸಬೇಕು.

ಅಧ್ಯಕ್ಷರು: ಅದನ್ನು ಸೂಕ್ತ ಸಮಯದಲ್ಲಿ ಹೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಪ್ರಸ್ತಾವನೆ ಮಾಡಿಸಿ.

3. ಘನತೆವೆತ್ತ ರಾಷ್ಟ್ರಪತಿಯವರು ದಿನಾಂಕ 20.11.2005ರಂದು ವಿಧಾನ ಮಂಡಲದ ಉಭಯ ಸದನಗಳ ಸದಸ್ಯರುಗಳನ್ನು ಉದ್ದೇಶಿಸಿ ಮಾಡಿದ ಭಾಷಣದ ಮೇಲೆ ಚರ್ಚೆ

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಯವರು): ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯವು ಸುವರ್ಣ ಮಹೋತ್ಸವವನ್ನು ಆಚರಿಸುತ್ತಿದ್ದು, "ಸುವರ್ಣ ಮಹೋತ್ಸವ' ಸಮಾರಂಭದ ಅಂಗವಾಗಿ ಕರ್ನಾಟಕ ವಿಧಾನ ಮಂಡಲದ ವಿಶೇಷ ಮಂಡಳಿಯ ಹಾಗೂ ಕರ್ನಾಟಕ ಸರ್ಕಾರದ ಕೋರಿಕೆಯ ಮೇರೆಗೆ ಘನತೆವೆತ್ತ ಭಾರತದ ರಾಷ್ಟ್ರಪತಿಯವರು, ದಿನಾಂಕ 20ನೇ ನವೆಂಬರ್ 2005ರಂದು ವಿಧಾನಮಂಡಲದ ಸದಸ್ಯರನ್ನುದ್ದೇಶಿಸಿ ಭಾಷಣ ಮಾಡಿರುತ್ತಾರೆ. ಘನತೆವೆತ್ತ ರಾಷ್ಟ್ರಪತಿಯವರು ತಮ್ಮ ಭಾಷಣದಲ್ಲಿ ಮುಂದಿನ ದಶಕದೊಳಗಾಗಿ ಕರ್ನಾಟಕ ರಾಜ್ಯವನ್ನು ಅಭಿವೃದ್ಧಿ ರಾಜ್ಯವನ್ನಾಗಿ ಪರಿವರ್ತಿಸುವ ದೃಷ್ಟಿಯಿಂದ ಮಹತ್ವದ ಹನ್ನೊಂದು ಅಭಿವೃದ್ಧಿ ಸೂತ್ರಗಳನ್ನು ಸೂಚಿಸಿರುತ್ತಾರೆ. ಈ ಸದನವು ಘನತೆವೆತ್ತ ರಾಷ್ಟ್ರಪತಿಯವರು ಸೂಚಿಸಿದ ಹನ್ನೊಂದು ಅಭಿವೃದ್ಧಿ ಸೂತ್ರಗಳನ್ನು ಪರಿಗಣನೆಗೆ ತೆಗೆದುಕೊಂಡು ಅಭಿವೃದ್ಧಿ ಸಾಧಿಸಲು ಶ್ರಮಿಸುವುದಾಗಿ ಹಾಗೂ ಈ ಸೂತ್ರಗಳನ್ನು ದಯಪಾಲಿಸಿದ ಘನತೆವೆತ್ತ ರಾಷ್ಟ್ರಪತಿಗಳಿಗೆ ವಿಧಾನ ಮಂಡಲದ ಸದಸ್ಯರು ಹಾಗೂ ಸರ್ಕಾರ ತಮ್ಮ ಕೃತಜ್ಞತೆಯನ್ನು ಅರ್ಪಿಸುತ್ತದೆ ಎಂದು ತಿಳಿಸಲು ಸನ್ಮಾನ್ಯ ಸಭಾಧ್ಯಕ್ಷರನ್ನು ಕೋರುವಂತೆ ಈ ಸದನವು ನಿರ್ಣಯಿಸುತ್ತದೆ".

ಅಧ್ಯಕ್ಷರು: ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿ.

†ಶ್ರೀ ಎನ್. ಧರ್ಮ್‌ಸಿಂಗ್ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಈ ದಿನ ಸಭಾನಾಯಕರು ಏನು ನಮ್ಮೆದುರು ಈ ರಾಷ್ಟ್ರದ ರಾಷ್ಟ್ರಪತಿಯವರು ಮಾಡಿದಂಥ ಭಾಷಣದ ಬಗ್ಗೆ ಕೃತಜ್ಞತೆ ಸಲ್ಲಿಸಲು ಪ್ರಸ್ತಾಪಿಸಿದ್ದಾರೆ, ಅದರ ಬಗ್ಗೆ ಎರಡು ಮಾತಿಲ್ಲ. ನಾವೂ ಕೂಡ ಈ ರಾಷ್ಟ್ರದ ರಾಷ್ಟ್ರಪತಿಯವರು ಪ್ರಪ್ರಥಮಬಾರಿಗೆ, ಜಂಟಿ ಅಧಿವೇಶನಕ್ಕೆ ಭಾಷಣ ನೀಡುವ ಪ್ರಸ್ತಾಪ ಬಂದಾಗ ನಾನು ಆಗ ಮುಖ್ಯಮಂತ್ರಿಯಾಗಿದ್ದೆ ತಾವು ಸಭಾಧ್ಯಕ್ಷರಾಗಿದ್ದಿರಿ, ವಿಧಾನ ಪರಿಷತ್ತಿನ ಸಭಾಪತಿಯವರು ರಾಷ್ಟ್ರಪತಿಯವರ ಹತ್ತಿರ ಹೋಗಿ ಕರ್ನಾಟಕ ರಾಜ್ಯದಲ್ಲಿ "ಸುವರ್ಣ ಕರ್ನಾಟಕ" ಅದ್ದೂರಿ ಸಮಾರಂಭ ಆಚರಿಸತಕ್ಕ ಕಾಲದಲ್ಲಿ, ಈ ರಾಜ್ಯಕ್ಕೆ ಸೇವೆ ಸಲ್ಲಿಸಿದ್ದ ಮತ್ತು ಕನ್ನಡ ನಾಡಿನ ನಮ್ಮ ಸಂಸದರು ಮತ್ತು ಶಾಸಕರುಗಳನ್ನು ಉದ್ದೇಶಿಸಿ ಮಾತನಾಡಬೇಕೆಂದು ರಾಷ್ಟ್ರಪತಿಯವರನ್ನು ಆಹ್ವಾನಿಸಲು ಯೋಚಿಸಿ, ನನ್ನನ್ನೂ ಬರಹೇಳಿ, ನನಗೆ ಒಂದು ಪತ್ರವನ್ನೂ ತಾವು ಬರೆದಿದ್ದಿರಿ. ಆದರೆ ಬೇರೆ ಕಾರಣದಿಂದ ನಾನು ಆ ದಿನ ಬರಲು ಆಗಲಿಲ್ಲ, ತಾವೆಲ್ಲರೂ ಹೋಗಿದ್ದಿರಿ. ಕರ್ನಾಟಕದ ಬಗ್ಗೆ, ಕರ್ನಾಟಕದ ಜನತೆಯ ಬಗ್ಗೆ ಕರ್ನಾಟಕದ ಪರಂಪರೆ, ಇತಿಹಾಸ ಇವುಗಳ ಬಗ್ಗೆ ಬಹಳಷ್ಟು ಮಾಹಿತಿ, ರಾಷ್ಟ್ರಪತಿಯವರಿಗಿದೆ. ಅವರು ಪ್ರಪ್ರಥಮವಾಗಿ 1982ರಿಂದಲೂ ಒಬ್ಬ ಖ್ಯಾತ ವಿಜ್ಞಾನಿಯಾಗಿ ಕೆಲಸ ಕಾರ್ಯವನ್ನು ಮಾಡಿದ್ದಾರೆ. ಎಷ್ಟೋ ಸಲ ಕರ್ನಾಟಕ ರಾಜ್ಯಕ್ಕೆ ಬಂದಾಗ, ನಾನು ಅವರೂ ಸಮಾಲೋಚನೆ ಮಾಡತಕ್ಕ ಕಾಲದಲ್ಲಿ, ಪ್ರತಿಯೊಂದು ಘಟನೆಗಳ ಬಗ್ಗೆ ಕೂಡ ಪ್ರಸ್ತಾಪ ಮಾಡಿದ್ದೇವೆ. ಹೇಳತಕ್ಕ ತಾತ್ಪರ್ಯ ಇಷ್ಟೆ. ರಾಷ್ಟ್ರಪತಿಗಳು ಕರ್ನಾಟಕದ ಬಗ್ಗೆ ಹೆಚ್ಚಿನ ಗೌರವವಿರತಕ್ಕವರು, ಈ "ಸುವರ್ಣ ಕರ್ನಾಟಕ"ದ ಸಂದರ್ಭ ಎಲ್ಲಾ ಕನ್ನಡಿಗರಿಗೂ ಗೌರವ ತರತಕ್ಕದ್ದು. ಪ್ರಸ್ತುತ ಇರುವ, ಆಗಿನ ವಿರೋಧ ಪಕ್ಷದ ನಾಯಕರಾದ ಹಾಗೂ ಈಗಿನ ಉಪ ಮುಖ್ಯಮಂತ್ರಿಗಳಾದ ಮಾನ್ಯ ಯಡಿಯೂರಪ್ಪನವರು ಈ ಸ್ಥಾನದಲ್ಲಿದ್ದರು. ನಾನು ಮಾನ್ಯ ಕುಮಾರಸ್ವಾಮಿಯವರ ಜಾಗದಲ್ಲಿದ್ದೆ. ಆಗ ನಾವೆಲ್ಲರೂ ಕೂಡ ಇದಕ್ಕೆ ಸ್ವಾಗತವನ್ನು ಮಾಡಿದ್ದೇವೆ. ರಾಷ್ಟ್ರಪತಿಯವರು is a great

---

† ಈ ಭಾಷಣವು ಮಾನ್ಯ ವಿರೋಧ ಪಕ್ಷದ ನಾಯಕರಿಂದ ಪರಿಷ್ಕರಿಸಲ್ಪಟ್ಟಿದೆ.

Philosopher, ಅವರಿಗೆ ಈ ರಾಷ್ಟ್ರದ ಬಗ್ಗೆ ಏನು ವಿಜನ್ ಇದೆ, ಕಾನ್‌ಸೆಪ್ಟ್ ಇದೆ, ಇದು ಮಾತ್ರವಲ್ಲ ಅವರು ಕೇರಳ ವಿಧಾನಸಭೆಗೂ ಹೋಗಿ, ಅಲ್ಲಿನ ಸದಸ್ಯರುಗಳನ್ನು ಉದ್ದೇಶಿಸಿ ಮಾತನಾಡಿದ್ದಾರೆ. ಅಂಥ ಒಬ್ಬ ರಾಷ್ಟ್ರಪತಿಯವರು ಈ ಸದನಕ್ಕೆ ಬಂದು ನಮ್ಮೆಲ್ಲರನ್ನೂ ಉದ್ದೇಶಿಸಿ ಮಾತನಾಡಿದರು, ತಾವೂ ಕೂಡ ಆಗ ನಮ್ಮ ಪಕ್ಕದಲ್ಲಿದ್ದಿರಿ. ಇದೇರೀತಿ 1963ರಲ್ಲಿ ಅಂದಿನ ರಾಷ್ಟ್ರಪತಿಗಳಾಗಿದ್ದ ಡಾ: ರಾಧಾಕೃಷ್ಣನ್‌ರವರೂ ಕೂಡ, ಈ ಸದನಕ್ಕೆ ಬಂದು ಸದನವನ್ನು ಉದ್ದೇಶಿಸಿ ಮಾತನಾಡಿ ಹೋಗಿದ್ದಾರೆ. ಇದಕ್ಕೆ ದೊಡ್ಡ ಪರಂಪರೆ ಇದೆ. ನಾವು ಈಗಾಗಲೇ Business Advisory Committee ಯಲ್ಲಿ ಹೇಳಿದ್ದೇವೆ. ನಮ್ಮ ಪಕ್ಷದ ಅಧ್ಯಕ್ಷರಾದ ಖರ್ಗೆಯವರಾಗಲಿ, ಮಾನ್ಯ ರಮೇಶ್‌ಕುಮಾರ್‌ರವರಾಗಲಿ, ನಮ್ಮ ಶ್ರೀರಾಮರೆಡ್ಡಿಯವರು, ಮಾಧುಸ್ವಾಮಿ ಯವರು, ವಾಟಾಳ್‌ನಾಗರಾಜ್‌ರವರೂ, ಕೂಡ ರಾಷ್ಟ್ರಪತಿಯವರ 11 ಅಂಶಗಳ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರತಕ್ಕ ರೀತಿಯಲ್ಲಿ ಅಭಿಪ್ರಾಯ ಮಂಡಿಸಲು ಸಾಕಷ್ಟು ಕಾರ್ಯಕ್ರಮ ಹಾಕಿಕೊಂಡಿದ್ದಾರೆ. 20 ತಿಂಗಳ ಕಾಲದ ಅಂದಿನ ಸರ್ಕಾರ ನಮ್ಮ ಎರಡೂ ಪಕ್ಷಗಳ ಸರ್ಕಾರವೇನಿತ್ತು, ನಮ್ಮ ವಿಜನ್ ಏನಿತ್ತು, ರಾಜ್ಯದ ಬಗ್ಗೆ, ರಾಷ್ಟ್ರದಲ್ಲಿರತಕ್ಕ ರಾಜಕೀಯ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡಿದ್ದೇವೆ.

ಈಗ ರಾಷ್ಟ್ರಪತಿಗಳಿಗೆ ವಂದನೆ ಸಲ್ಲಿಸತಕ್ಕಂಥ ರೀತಿಯಲ್ಲಿ ಇವತ್ತು ಏನೇನು ಕಾರ್ಯಕ್ರಮ ಇಟ್ಟಿದ್ದಾರೆ ಈ ಬಗ್ಗೆ ಅನಿಸಿಕೆ ಏನಿದೆ ಅಂದರೆ, ಇದರ ಬಗ್ಗೆ ಬಹಳಷ್ಟು ಚರ್ಚೆಯನ್ನು ನಾವು ಮಾಡಬೇಕಾಗಿದೆ. ಈಗಾಗಲೇ ಆರ್ಟಿಕಲ್ 176ರ ಅಡಿಯಲ್ಲಿ ಮಾನ್ಯ ರಾಜ್ಯಪಾಲರು ಭಾಷಣ ಮಾಡಿದರು. ವಂದನಾ ನಿರ್ಣಯವನ್ನು ಅದರ ರೀತ್ಯಾ ಮಾಡಲೇಬೇಕು, that is mandatory for the House ಅನ್ನತಕ್ಕಂಥದ್ದನ್ನು ಹೇಳಿದ್ದೇವೆ. ಈ ರೀತಿಯಾದ ವಂದನಾ ನಿರ್ಣಯ ಮಾಡಬೇಕು, reject it or adopt it. ಏನಾದರೊಂದು ಮಾಡಬೇಕು. ನಾವು ಇದನ್ನೂ ಕೂಡ ರಾಜ್ಯಪಾಲರಿಗೆ ಹೇಳಿದ್ದೆವು, ಮತ್ತೊಮ್ಮೆ ಬಂದು ರಾಜ್ಯಪಾಲರ ಎರಡನೇ ಭಾಷಣ ಆಗಬಾರದು. ಆರ್ಟಿಕಲ್ 175(1)ರಲ್ಲಿ ಎಂದು. ತಾವು ತೀರ್ಪು ಕೊಟ್ಟಿದ್ದೀರಿ. ಅದು ಮುಗಿದ ಅಧ್ಯಾಯ. ನಾವೇನೂ ಈ ಸದನ ನಡೆಸಬಾರದು ಅನ್ನತಕ್ಕಂಥ ಅಭಿಪ್ರಾಯ ನಮ್ಮದು ಇಲ್ಲ. ಯಾವುದೇ ಸರ್ಕಾರ ಇರಲಿ, ಅದರ ಬಗ್ಗೆ ಮುಂದೆ ನಾವು ಹೇಳೋಣ, ಅದರ ಸಿದ್ಧಾಂತದ ಬಗ್ಗೆ. ಈ ರಾಷ್ಟ್ರದಲ್ಲಿ, ಏನು ನಮ್ಮ ಪರಂಪರೆ ಇದೆ, ಯಾವ ಸ್ವಾತಂತ್ರ್ಯಕ್ಕೋಸ್ಕರ ನಾವು

ಹೋರಾಟ ಮಾಡಿದ್ದೇವೆ, ಎಷ್ಟೆಷ್ಟು ಮಂದಿ ತಮ್ಮ ಜೀವವನ್ನು ಕೊಟ್ಟಿದ್ದಾರೆ, ಅದೆಲ್ಲಾ ನೆನಸಬೇಕಾಗುತ್ತದೆ. ಸಾಯತಕ್ಕಂಥ ಸಮಯ ತಮ್ಮ ಬಲಿದಾನ ಕೊಡತಕ್ಕಂಥ ಕಾಲದಲ್ಲಿ ಶ್ರೀ ಚಂದ್ರಶೇಖರ್, ಶ್ರೀ ಸುಖದೇವ್, ಶ್ರೀ ಗುರುದೇವ್ ಅವರುಗಳನ್ನು ಗಲ್ಲಿಗೆ ಹಾಕತಕ್ಕಂಥ ಸಮಯದಲ್ಲಿ ಅವರೇನು ಹೇಳಿದ್ದರು, ಅನ್ನತಕ್ಕಂಥದ್ದಕ್ಕೆ ನಾವು ಗಮನಕೊಡಬೇಕು. ದೇಶ ಸ್ವಾತಂತ್ರ್ಯವಾದ ಮೇಲೆ ಈ ದೇಶ ಸಾಮಾಜಿಕವಾಗಿ ಆರ್ಥಿಕವಾಗಿ ಸರಿಯಾದ ರೀತಿಯಲ್ಲಿ ನಡೆಯಬೇಕು ಅನ್ನತಕ್ಕಂಥದ್ದು, ಅವರ ವಿಚಾರ, ಅದೊಂದು ಮನೋಭಾವ. ನಾವು ಬೇರೆ ಬೇರೆ ವಿಚಾರಗಳೂ ಮತ್ತು ನೈತಿಕತೆ ಬಗ್ಗೆ, ಈ ರಾಷ್ಟ್ರದಲ್ಲಿ ಇರತಕ್ಕಂಥ ಬೇರೆ ಸಮಸ್ಯೆಗಳ ಬಗ್ಗೆ, ನಾನು ಮಾನ್ಯ ಯಡಿಯೂರಪ್ಪನವರಿಗೆ ನೆನಪು ಮಾಡಿಕೊಡತಕ್ಕದ್ದು ಅಗತ್ಯವಿಲ್ಲ. ಏಕೆಂದರೆ, ನಾನು ತಿಳಿದಂತೆ ಬಿ.ಜೆ.ಪಿ. ಪಕ್ಷ basically emotional party ಇವತ್ತು ದೇಶದಲ್ಲಿ ಇರತಕ್ಕಂಥ ಸಾಮಾಜಿಕ, ಆರ್ಥಿಕ ಪರಿವರ್ತನೆಗೆ ತರತಕ್ಕಂಥದ್ದಕ್ಕೆ ಅವರ ದೃಷ್ಟಿಕೋನವೇ ಬೇರೆ, ಅವರ political philosophy ಬೇರೆ, economic philosophy ಬೇರೆ. ರಾಷ್ಟ್ರಕ್ಕೆ ಯಾವಾಗಲೂ ಕೂಡ ಯಾವ ರೀತಿಯಾಗಿ ಪರಿಣಾಮ ಆಗುತ್ತದೆ. ಎನ್ನುವುದು ಮುಖ್ಯ. ಏಕೆ ನಾನು ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ, ಇವತ್ತು ರಾಷ್ಟ್ರಪತಿಯವರ vision ಏನಿದೆ, ಅವರ philosophy ಏನಿದೆ, ಕರ್ನಾಟಕ ರಾಜ್ಯ ಅನುಷ್ಠಾನಕ್ಕೆ ತರಬೇಕು ಅನ್ನತಕ್ಕಂಥ ರೀತಿಯಲ್ಲಿ ಅವರ ಕಳಕಳಿಯ ಮನವಿ, ಕೇವಲ ಈ ಸದನದ ಸದಸ್ಯರಿಗೆ ಮಾತ್ರ ಅಲ್ಲ, ಎಲ್ಲಾ ಮಾಜಿ ಸಂಸತ್ ಸದಸ್ಯರಿಗೆ ಎಲ್ಲಾ ಸಂಸದೀಯ ಪಟುಗಳಿಗೆ ಎಲ್ಲರನ್ನೂ ಕೂಡ ನಾವು ಆಹ್ವಾನಿಸಿದ್ದೆವು, ಎಲ್ಲಾರು ಬಂದು ಕುಳಿತಿದ್ದರು. ಕೇಳಿದ್ದಾರೆ. ಇದೊಂದು ದೊಡ್ಡ ಐತಿಹಾಸಿಕವಾದಂತಹ ಒಂದು ಭಾಷಣವನ್ನು ಈ ಸದನದಲ್ಲಿ ಅವರು ಮಾಡಿ ಹೋಗಿದ್ದಾರೆ. ರಾಜ್ಯಪಾಲರು ಭಾಷಣ ಮಾಡತಕ್ಕಂಥ ಕಾಲದಲ್ಲಿ ತಾವು ಅವಕಾಶ ಕೊಡಲಿಲ್ಲ. 19ನೇ ಜನವರಿಯಂದು ಬಂದು ಇಲ್ಲೇನು ಭಾಷಣ ಮಾಡಿದರು. ಆಗ ಅವರೇನು ಹೇಳಿದರು ನಮ್ಮ ರಾಷ್ಟ್ರಪತಿಗಳೂ ಕೂಡ ಈ ಸದನವನ್ನು ಉದ್ದೇಶಿಸಿ ಮಾತನಾಡಿದ್ದಾರೆ ಅನ್ನತಕ್ಕಂಥ ಮಾತನ್ನೂ ಕೂಡ ರಾಜ್ಯಪಾಲರು ಪ್ರಸ್ತಾಪ ಮಾಡಿದ್ದಾರೆ. ಅದರ ಬಗ್ಗೆ ಚರ್ಚೆ ಮಾಡತಕ್ಕಂಥ ಅವಕಾಶ ಕೂಡ ನಮಗೆ ಸಿಗಲಿಲ್ಲ. ಆಗಿನ ಸರ್ಕಾರದ ಮುಖ್ಯಮಂತ್ರಿಯಾದಾಗ ನಾವು plan discussionಗೆ ಹೋದೆವು. ಸಭಾಧ್ಯಕ್ಷತೆ, 2004ರ ಚುನಾವಣೆಯಾದ ಮೇಲೆ, ಕಾಂಗ್ರೆಸ್ ಪಕ್ಷ ಮತ್ತು ಜನತಾ ದಳ (ಎಸ್) ಪಕ್ಷ

ಸೇರಿ ಸರ್ಕಾರ ರಚನೆ ಮಾಡಿದೆವು. ಮಾನ್ಯ ಸಿದ್ದರಾಮಯ್ಯನವರು ಆಗ ಜನತಾ ದಳ (ಎಸ್)ನ ಅಧ್ಯಕ್ಷರಾಗಿದ್ದರು. ತಾವು ಕೂಡ ಚುನಾವಣೆಗೆ ಹೋದಂತಹ ಕಾಲದಲ್ಲಿ, ಸಿದ್ದರಾಮಯ್ಯನವರ ಅಧ್ಯಕ್ಷತೆಯ ಪಕ್ಷದಲ್ಲಿ ತಾವೂ ಹೋಗಿದ್ದಿರಿ. ಮಾಜಿ ಉಪ ಮುಖ್ಯಮಂತ್ರಿಗಳೂ ಪ್ರಸ್ತುತ ಸದಸ್ಯರೂ ಹಿರಿಯರಾದಂತಹ ಪ್ರಕಾಶ್‌ರವರು ಇಲ್ಲಿ ಇದ್ದಾರೆ, ಮಾನ್ಯ ಮಂಜುನಾಥ್‌ರವರು ಇದ್ದಾರೆ, ಸಿಂಧ್ಯಾರವರಿದ್ದಾರೆ, ಅವರೆಲ್ಲರೂ ಕೂಡ ಸರ್ಕಾರದ ಪಾಲುದಾರರು. ಅವರೆಲ್ಲರೂ ಕೂಡ ಸಾರಿ ಸಾರಿ ಹೇಳಿದ್ದಾರೆ, ಈ ರಾಷ್ಟ್ರದಲ್ಲಿ ಕೋಮುವಾದಿ ಭಾವನೆಗಳನ್ನು ಕೆರಳಿಸಿ ರಾಜ್ಯ ಮಾಡತಕ್ಕಂಥ ಕೆಲವು ಪಕ್ಷಗಳನ್ನೂ ದೂರ ಇಡತಕ್ಕಂಥ ರೀತಿಯಲ್ಲಿ ಮಾಡಬೇಕು ಎಂದು ನಾವು ಗಮನಿಸಬೇಕಾಗಿದೆ, ಸ್ಪಷ್ಟವಾದ ನೀತಿ ನಮ್ಮದಿದೆ ಇದಕ್ಕೆ ಆ ಎಲ್ಲಾ ವಿಚಾರಗಳೂ ಬಂದರೆ, ಮತ್ತೊಂದು ರಾಷ್ಟ್ರಪತಿ ಭಾಷಣದಲ್ಲಿ ಮಾಡತಕ್ಕದ್ದು ಅನುಚಿತ. ನೀವು ರಾಷ್ಟ್ರಪತಿಯವರಿಗೆ ಮತ್ತೊಂದು ರಾಷ್ಟ್ರಪತಿ ಭಾಷಣದಲ್ಲಿ ಮಾಡತಕ್ಕದ್ದು ಅನುಚಿತ. ನೀವು ರಾಷ್ಟ್ರಪತಿಯವರಿಗೆ ಧನ್ಯವಾದಗಳನ್ನು ಸಲ್ಲಿಸತಕ್ಕಂಥ ರೀತಿಯಲ್ಲಿ, ಮಾನ್ಯ ಸಭಾನಾಯಕರೂ, ಈ ದಿನದ ಮುಖ್ಯಮಂತ್ರಿಗಳಾದಂತಹ ಮಾನ್ಯ ಕುಮಾರಸ್ವಾಮಿಯವರು ಸೂಚಿಸಿದ್ದೀರಿ ನಾನು ಮೊನ್ನೆ ಈಗಾಗಲೇ ಹೇಳಿದ್ದೇನೆ. ಅತಿಶಯೋಕ್ತಿಯಿಂದ ಹೇಳತಕ್ಕಂಥ ಮನುಷ್ಯ ನಾನಲ್ಲ. ನನ್ನ ನಲವತ್ತು ವರ್ಷಗಳ ರಾಜಕಾರಣದ ಹಿನ್ನೆಲೆಯಲ್ಲಿ ಪ್ರಸ್ತುತ ರಾಜಕೀಯದ ಬಗ್ಗೆ ಹೇಳಲೇಬೇಕಾಗುತ್ತದೆ. ಪ್ರಪ್ರಥಮವಾಗಿ, ತಾವು ಅಧಿಕಾರಕ್ಕೆ ಬಂದು ಕುಳಿತಿದ್ದೀರಿ,

you are one of the fortunate Chief Ministers in the history of Karnataka. ಮೊಟ್ಟಮೊದಲನೆಯದಾಗಿ ಲೋಕಸಭಾ ಸದಸ್ಯರಾಗಿ, ನೀವು ಕೆಲಸ ಮಾಡಿದ್ದೀರಿ, ರಾಜ್ಯಕ್ಕೆ ಬಂದಿದ್ದೀರಿ, ಮುಖ್ಯಮಂತ್ರಿಗಳಾಗಿದ್ದೀರಿ. ರಾಜಕೀಯ ಕೂಡ, ಒಂದು ಚಕ್ರವಿದ್ದಂತೆ, ಇದರಲ್ಲಿ ಮೇಲೆ ಕೆಳಗೆ ಆಗುತ್ತದೆ. ಕೆಲ ಸಂದರ್ಭದಲ್ಲಿ ಯಾರಿಗಾದರೂ ಅವಕಾಶ ಸಿಗುತ್ತದೆ. ಇವತ್ತು ನಾನೇನು ಹೇಳುತ್ತಿದ್ದೇನೆ, ರಾಷ್ಟ್ರಪತಿಯವರು ತಮ್ಮ 11 ಅಂಶಗಳ ಸೂತ್ರವನ್ನು ನಮ್ಮ ರಾಜ್ಯಕ್ಕೆ ಕೊಟ್ಟಿದ್ದಾರೆ. ಅದನ್ನು ಅನುಷ್ಠಾನಕ್ಕೆ ತರತಕ್ಕಂಥ ರೀತಿಯಲ್ಲಿ, ಸ್ಪಷ್ಟವಾದಂತಹ ತಮ್ಮ ನೀತಿ ಏನಿದೆ? ತಮ್ಮ political philosophy ಏನಿದೆ? ಇವತ್ತು ತಮ್ಮದು "break away group" ಇವತ್ತು ಜನತಾ ದಳ (ಎಸ್)ದ ಸದಸ್ಯರು ತಾವಲ್ಲ, 18ನೇ ತಾರೀಖು ರಾಜಭವನಕ್ಕೆ ಹೋದಾಗ, ಆಗಲೇ ಮಾಜಿ ಪ್ರಧಾನ ಮಂತ್ರಿಗಳಾದ ಮಾನ್ಯ ದೇವೇಗೌಡರು ಹೇಳಿದ್ದಾರೆ. "he is not our

recognized leader," ಮತ್ತೆ ಅದೇ ಸಂದರ್ಭದಲ್ಲಿ 40 ಸದಸ್ಯರನ್ನೂ ಅಮಾನತ್ತು ಕೂಡ ಮಾಡಿದ್ದಾರೆ. ಸದ್ಯ ಬಜೆಟ್ ಮಂಡನೆ ಮಾಡುವುದಿದೆ, ಬಜೆಟ್ ಮಂಡನೆ ಬಂದಾಗ, ನಾವು ಹೇಳೋಣ. ನಾವು ಹೇಳತಕ್ಕಂಥದ್ದು ಅತಿಶಯೋಕ್ತಿಯಲ್ಲ. "This is not exaggeration. I am going to state what is the political situation prevailing in Karnataka State." ಏಕೆಂದರೆ, ಜನರ ಮನಸ್ಸಿನಲ್ಲಿ ಇರತಕ್ಕಂಥ ಅಭಿಪ್ರಾಯಗಳನ್ನು ವಿರೋಧ ಪಕ್ಷದ ನಾಯಕರುಗಳಾದ ನಾವೆಲ್ಲರೂ ಕೂಡ ಪ್ರಸ್ತಾಪ ಮಾಡಬೇಕಾಗುತ್ತದೆ. ತಾವು Common Minimum Programme ಮಾಡಿಲಿದ್ದೀರಿ, ಆ ವಿಚಾರಕ್ಕೆ ಮುಂದೆ ಬರೋಣ. ನಾನು ಹೇಳತಕ್ಕಂಥದ್ದು ಏನೆಂದರೆ, ರಾಷ್ಟ್ರಪತಿಗಳ 11 ಸೂತ್ರಗಳನ್ನು ಅನುಷ್ಠಾನಕ್ಕೆ ತರತಕ್ಕಂಥ ರೀತಿಯಲ್ಲಿ ರಾಜ್ಯ ಸರ್ಕಾರ ಮಾಡತಕ್ಕಂಥ ಕೆಲಸವೇನು? ಅವರು ಹೇಳಿದಾರೆ, ಅಲ್ಪಸಂಖ್ಯಾತರ ರಕ್ಷಣೆ ಮಾಡತಕ್ಕಂಥದ್ದು, ಮತ್ತು ಇತರ ಬಹಳಷ್ಟು ವಿಷಯಗಳನ್ನು ಕೂಡ ಪ್ರಸ್ತಾಪ ಮಾಡಿದ್ದಾರೆ. ನಾವು ಮುಖ್ಯಮಂತ್ರಿಯಾಗಿದ್ದಾಗ, ಮಾನ್ಯ ಮಾಂಟೇಕ್ ಸಿಂಗ್ ಅಹ್ಲುವಾಲಿಯಾ, "Planning Commission Deputy Chairman", ಅವರನ್ನೂ ಭೇಟಿಯಾದೆವು ನಮ್ಮದು 15460 ಕೋಟಿ ರೂಪಾಯಿಗಳ plan outlay ಇತ್ತು. ಅವರು ಏನು ಹೇಳಿದರು? ಆಗಲಿಲ್ಲ ನಮ್ಮ Chief Secretary ಮತ್ತು Principal Secretary ಗೌತಮ್ ಬಸು ಕೂಡ ಅಲ್ಲಿದ್ದರು, ಇವರು ಅಧಿಕೃತವಾಗಿ ಹೇಳಿದ್ದು ಏನೆಂದರೆ, "Karnataka is the only State in the country, wherein Social sector irrigation ಸೆಕ್ಟರ್ ಆಗಲಿ, ಪ್ರತಿಶತ 6ರ ಬಡ್ಡಿ ದರದಲ್ಲಿ ರೈತರ ಸಾಲ ಕೊಡತಕ್ಕಂಥ ಕಾಲದಲ್ಲಿ, ಬಡತನರೇಖೆಯ ಕೆಳಗಿನವರಿಗೆ 3 ರೂ.ಗೆ ಕೆ.ಜಿ. ಅಕ್ಕಿ ಕೊಡತಕ್ಕಂಥ ಕಾಲದಲ್ಲಿ, ನಾವೇನು "Common Minimum Programme formulate" ಮಾಡಿದ್ದೆವೋ ಇದೆಲ್ಲವನ್ನೂ "they appreciated" and they have given approval to an outlay of Rs.16,166 crores, that is the second largest in the Country. ಯು.ಪಿ. ಸರ್ಕಾರ ಆದಮೇಲೆ ಕರ್ನಾಟಕಕ್ಕೆ ಮಾತ್ರ ಜಾಸ್ತಿ ಸಿಗುತ್ತಿದೆ. Then we have requested ಮಾನ್ಯ ಮಾಂಟೇಕ್ ಸಿಂಗ್ ಅಹ್ಲುವಾಲಿಯಾ, ರಾಷ್ಟ್ರಪತಿಗಳು ಬಂದು ಭಾಷಣವೇನು ಮಾಡಿದ್ದಾರೆ. ಅದನ್ನು ಅನುಷ್ಠಾನಕ್ಕೆ ತರತಕ್ಕಂಥ ರೀತಿಯಲ್ಲಿ at least you have to provide Rs.75 crores ಎಂದು ಅವರು ಅದನ್ನು provide ಮಾಡಿದ್ದಾರೆ. ಅನುಷ್ಠಾನ

ಕೇವಲ ಭಾಷಣದ ಮೂಲಕ ಮಾತ್ರವಲ್ಲ, ರಾಷ್ಟ್ರಪತಿಗಳು ಬಂದು ಹೇಳಿದ ಮೇಲೆ, ಪ್ರಾಮಾಣಿಕವಾಗಿ ಅನುಷ್ಠಾನಕ್ಕೆ ತರತಕ್ಕಂಥ ರೀತಿಯಲ್ಲಿ, ಯಾವ ದಿಸೆಯಲ್ಲಿ ಮಾನ್ಯ ಕುಮಾರಸ್ವಾಮಿಯವರು ಈ ರಾಜ್ಯದ ಚುಕ್ಕಾಣಿ ಹಿಡಿದಿದ್ದು, ಹಿಡಿಯತಕ್ಕಂಥ ಕಾಲದಲ್ಲಿ, ಇದಕ್ಕಾಗಿ ಎಷ್ಟು ಹಣವನ್ನು ಇಟ್ಟಿದ್ದಾರೆ? ಸ್ಪಷ್ಟವಾಗಿ ಹೇಳಿಲ್ಲ. ನಾವು ಹೇಳಿದೆವು, ನೀವು ಬಜೆಟ್ ಮಂಡನೆಯಲ್ಲಿ ರಾಷ್ಟ್ರಪತಿಗಳ ಭಾಷಣದ ಅನುಷ್ಠಾನಕ್ಕೆ ಎಷ್ಟು ಹಣವನ್ನು ಕೊಡುತ್ತೀರಿ? ಏನು ಬೇಕಾಗಿದೆಯೋ ಅದನ್ನು ಮಾಡಬೇಕು. ಬಹಳಷ್ಟು ಜನ ಚರ್ಚೆ ಮಾಡಿದ್ದೇವೆ. ಕೇವಲ ರಾಷ್ಟ್ರಪತಿಗಳ ಭಾಷಣದ ಮೇಲೆ ಚರ್ಚೆ ಮಾತ್ರ ಸಾಲದು. Irrigation Minister ಆದ ಮಾನ್ಯ ಈಶ್ವರಪ್ಪನವರು ಇಲ್ಲಿ ಕುಳಿತಿದ್ದಾರೆ. ಅವರು ನಮ್ಮ ಭಾಗದಲ್ಲಿ ಹೋಗಿ ಬಂದಿದ್ದಾರೆ. ನನ್ನ ಪಕ್ಕದಲ್ಲಿ ಮಾಜಿ Irrigation ಮಂತ್ರಿಗಳು ಕುಳಿತಿದ್ದಾರೆ. ನಾವು ಮೊದಲು ಈ ಬಾಬ್ತಿಗೆ 3,024 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೆವು. ಕಳೆದ ಬಾರಿ ಅದಕ್ಕೆ 923 ಕೋಟಿ ರೂಪಾಯಿಗಳನ್ನು ಹೆಚ್ಚು ಮಾಡಿದ್ದೆವು. ಒಟ್ಟು Rs.3,923 crores, we have given, for irrigation. ಈ ರೀತಿಯಾಗಿ ಸಾಕಷ್ಟು ಸಾಮಾಜಿಕ, ಮತ್ತು ಬೇರೆ ವಲಯಗಳಲ್ಲಿ ಮಾಡತಕ್ಕಂತಹ ಕೆಲಸ ಕಾರ್ಯಗಳ ಬಗ್ಗೆ ನಮ್ಮ ಕಾರ್ಯಕ್ರಮ ಇತ್ತು. ಇವತ್ತು ರಾಷ್ಟ್ರಪತಿಗಳ ಭಾಷಣ ಇಟ್ಟಿದ್ದೀರಿ. ಏನು ಮಾತನಾಡಬೇಕು, ಇಲ್ಲಿಯವರೆಗೆ ತಮ್ಮದು ಏನು ಚಿಂತನೆ ಆಗಿದೆ? ಎಷ್ಟೆಷ್ಟು ಹಣ ಇದಕ್ಕಾಗಿ ಇಟ್ಟಿದ್ದೀರಿ? ಬಜೆಟ್ ಪ್ರಸೆಂಟೇಷನ್ ಆದ ಮೇಲೆ ಮಾನ್ಯ ಯಡಿಯೂರಪ್ಪನವರು ಯಾವ ರೀತಿಯಾಗಿ ನ್ಯೂ ಡೈಮೆನ್‌ಷನ್ ಕೊಡುತ್ತಾರೆ, ಕರ್ನಾಟಕ ರಾಜ್ಯದ ಆರ್ಥಿಕ ಪರಿಸ್ಥಿತಿಗೆ, ಎಂಬುದನ್ನು ನೋಡುತ್ತಿದ್ದೇವೆ. ಏಕೆಂದರೆ ಅವರೆಲ್ಲಾ ಹೋರಾಟ ಮಾಡಿದವರು ಅವರೂ ಮಾನ್ಯ ಈಶ್ವರಪ್ಪನವರು, ಮತ್ತು ಮಾನ್ಯ ಜಗದೀಶ್‌ಶೆಟ್ಟರ್‌ರವರಿಗೆ, ಮೊಟ್ಟ ಮೊದಲನೆಯ ಬಾರಿಗೆ ಅಧಿಕಾರ ಸಿಕ್ಕಿದೆ, ಅಧಿಕಾರ ಸಿಕ್ಕ ಮೇಲೆ ಅಧಿಕಾರ ಉಪಯೋಗ ಮಾಡಿಕೊಳ್ಳತಕ್ಕಂತಹ ರೀತಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ಇರತಕ್ಕಂತಹ ಸಾಮಾನ್ಯ ಜನರ ಸಮಸ್ಯೆಗಳ ಬಗ್ಗೆ ಓಗೊಡಬೇಕಾಗಿದೆ. ನಾವು ಕೇವಲ ಅಧಿಕಾರಿಗಳ ಜೊತೆ ಮಾಡನಾಡುವುದರಿಂದ ಆಗುವುದು ಅಲ್ಲ, ಅದಕ್ಕೆ "that requires commitment" ಯಾವ ರೀತಿಯಾಗಿ ನೀವು ಮಾಡುತ್ತೀರಿ ಎಂಬುದನ್ನು ಮನಃಪೂರ್ವಕವಾಗಿ ಹೇಳಬೇಕಾಗುತ್ತದೆ. ಆದ್ದರಿಂದ ನಾನು ಸಭಾ ನಾಯಕರಲ್ಲಿ ಪ್ರಾರ್ಥನೆ ಮಾಡುತ್ತಿದ್ದೇನೆ, ಇವತ್ತು ರಾಷ್ಟ್ರಪತಿಗಳು ಹೇಳಿದ

11 ಅಂಶಗಳು ಏನಿವೆ, ಎಲ್ಲಾ ಕಡೆ ಕುಡಿಯುವ ನೀರಿನ ವ್ಯವಸ್ಥೆ ಬಾವಿಗಳನ್ನು ಮಾಡತಕ್ಕಂತಹ ರೀತಿಯಲ್ಲಿ ಕೆರೆಗಳ ಹೂಳೆತ್ತುವ ಬಗ್ಗೆ ಕೋಲಾರ ಜಿಲ್ಲೆಯಲ್ಲಿ ಆಗಿನ ಸರ್ಕಾರದ ಮಾನ್ಯ ಎಸ್.ಎಂ.ಕೃಷ್ಣರವರು ಮುಖ್ಯಮಂತ್ರಿಗಳಾಗಿದ್ದಾಗ, ಅದಾದ ಮೇಲೆ ಇರಿಗೇಷನ್ ಮಂತ್ರಿಗಳು ಸಾಕಷ್ಟು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದರು. ಈವತ್ತೂ ಸಾಮಾಜಿಕವಾಗಿ, ಆರ್ಥಿಕವಾಗಿ ರಾಷ್ಟ್ರದಲ್ಲಿ ಮಾಡತಕ್ಕಂತಹ ರೀತಿಯಲ್ಲಿ ನಾವು ಕಾರ್ಯಕ್ರಮ ಹಾಕಿಕೊಂಡಿದ್ದೆವು. ನಾವು ಒಂದು ಹೇಳುವುದು ಏನೆಂದರೆ, ಇವತ್ತು "ಅಧಿಕಾರಕ್ಕೋಸ್ಕರ ಕಾಂಗ್ರೆಸ್ ಪಕ್ಷ ಇಲ್ಲ". ಕಾಂಗ್ರೆಸ್ ಪಕ್ಷ ಯಾವಾಗಲೂ ಕೂಡ ಹತಾಶರಾಗಿ ಕಿರುಕುಳ ಕೊಡುತ್ತಿದ್ದಾರೆ" ಎಂದು ಪತ್ರಿಕೆಯಲ್ಲಿ ವರದಿಯಾಗಿದೆ. ಕೆಲವು ಮಾತುಗಳನ್ನೂ ಕೇಳಿದ್ದೇನೆ. ನಾವು ಸಂವಿಧಾನ ಬಾಹಿರವಾಗಿ ಮಾಡತಕ್ಕಂತಹ ಕಾರ್ಯಕಲಾಪಗಳ ಬಗ್ಗೆ ಮಾತ್ರ ನಾವು ಹೇಳಿದ್ದೇವೆ. ಆರ್ಟಿಕಲ್ 176ರಲ್ಲಿ ಮಾಡಿದ ಭಾಷಣದ ಬಗ್ಗೆ ಮಾತನಾಡಬೇಕು, ಅವಕಾಶ ಕೊಡಬೇಕು. ಈ ಸಂದರ್ಭದಲ್ಲಿ ವೆಸ್ಟ್ ಬೆಂಗಾಲ್‌ನಲ್ಲಿ ಏನು ಆಗಿದೆ? ಆಗ ಅಲ್ಲಿ ಲೇಡಿ ಗವರ್ನರ್ ಇದ್ದರು. ಸುಪ್ರೀಂ ಕೋರ್ಟ್‌ಗೆ ಹೋದಾಗ ಅವರೂ ಕೂಡ ಹೇಳಿದ್ದಾರೆ. ಒಂದು ವೇಳೆ ಪ್ರಪ್ರಥಮವಾಗಿ ರಾಜ್ಯಪಾಲರ ಭಾಷಣದ ಉಲ್ಲಂಘನೆ ಆಗಿದ್ದರೆ ಅಂತಹ ಸಂದರ್ಭದಲ್ಲಿ subsequent proceedings of the whole year becomes illegal ಎಂದು ಸುಪ್ರೀಂ ಕೋರ್ಟ್ ಡಿಸಿಷನ್ ಸಹ ಬಂದಿದೆ. ರಾಷ್ಟ್ರಪತಿಗಳಿಗೆ ಕೂಡ ಅವಹೇಳನ ಮಾಡತಕ್ಕಂಥದ್ದು ಅಲ್ಲ. ರಾಷ್ಟ್ರಪತಿಗಳ 11 ಅಂಶಗಳ ಕಾರ್ಯಕ್ರಮದ ಬಗ್ಗೆ ಸಭಾ ನಾಯಕರು ಪ್ರಸ್ತಾಪ ಮಾಡಿದ್ದಾರೆ. ನಾನು ವಿಧಾನಸಭೆಯ ವಿರೋಧ ಪಕ್ಷದ ನಾಯಕ, ಕಾಂಗ್ರೆಸ್ ಪಕ್ಷದಲ್ಲಿ 1968ರಿಂದ ಇಲ್ಲಿಯವರೆಗೆ ಇದ್ದೇನೆ. ಈ ದೇಶದಲ್ಲಿ ಸಾಮಾಜಿಕ, ಆರ್ಥಿಕ ಸುಧಾರಣೆಗಾಗಿ ಯಾವ ರೀತಿಯಾಗಿ ಶ್ರೀಮತಿ ಇಂದಿರಾ ಗಾಂಧಿಯವರು ದೇಶದ ಪ್ರಧಾನ ಮಂತ್ರಿಗಳಾದ ಮೇಲೆ "ಗರೀಬಿ ಹಟಾವೋ' ಸ್ಲೋಗನ್ ಕೊಟ್ಟರು; ಅದು ಪ್ರಸ್ತುತ ಇದೆ. ಗರೀಬಿ ಹಟಾವೋ ಎಷ್ಟು ಆಗಿದೆ, ಅದು ಚರ್ಚೆ ಆಗಬೇಕು. ಈಗಲೂ ಕೂಡ ಈ ದೇಶದಲ್ಲಿ ಇರತಕ್ಕಂತಹ ಬಡವರ ಬಗ್ಗೆ ಚಿಂತನೆ ಮಾಡತಕ್ಕಂತಹ ಪ್ರಧಾನ ಮಂತ್ರಿಗಳು ಇದ್ದಾರೆ ಸಾಕಷ್ಟು ರೆವಲ್ಯೂಷನರಿ, ಕ್ರಾಂತಿಕಾರಿ ಅಂಶಗಳು ಇವತ್ತು ಹೊರಗೆ ಬಂದಿದೆ. ಅದಕ್ಕೆ ನಾವು ಮಾನ್ಯ ಕುಮಾರಸ್ವಾಮಿಯವರಿಗೆ ಹೇಳುವುದು ಏನೆಂದರೆ, ಇವತ್ತು ತಮ್ಮ ಪಕ್ಷದ ಕಾಮನ್ ಯಾವ ಮಿನಿಮಮ್ ಪ್ರೋಗ್ರಾಂ ಇದೆ ಪಕ್ಷದ ಸಿದ್ಧಾಂತ ಏನಿದೆ? ಏನು ಪ್ರತ್ಯೇಕವಾಗಿ ಮಾಡಿದ್ದೀರಿ, ಎಂಬುದನ್ನು ಹೇಳಬೇಕು. ಇನ್ನೂ

ದೇವೇಗೌಡರೇ ತಮ್ಮ ಪಕ್ಷದ ಅಧ್ಯಕ್ಷರಾಗಿದ್ದಾರೆ. ಅವರು ಇಲ್ಲವೆಂದು ಹೇಳುತ್ತಾರೆ. ನೀವು ಒಂದು "break away group" ಎರಡು ಪಕ್ಷಗಳೂ ಕೂಡಿ ರಾಜ್ಯ ನಡೆಸತಕ್ಕಂತಹ ರೀತಿಯಲ್ಲಿ ಸ್ಪಷ್ಟವಾದ ತಮ್ಮ ಆರ್ಥಿಕ ನಿಲುವನ್ನು ಜನರ ಮುಂದೆ ಇಡಬೇಕಾಗುತ್ತದೆ. ಆಗ ನಾವು ಒಪ್ಪುತ್ತೇವೆ. ನಿಜವಾಗಿ ಕೂಡ ರಾಷ್ಟ್ರಪತಿಯವರಿಗೆ ಧನ್ಯವಾದಗಳನ್ನು ಸಲ್ಲಿಸತಕ್ಕಂತಹ ನಿರ್ಣಯವನ್ನು ತಾವು ಏನು ಮಂಡನೆ ಮಾಡಿದ್ದೀರಿ, ಅದರ ಬಗ್ಗೆ ವಾಸ್ತವಿಕತೆ ಸಹ ನೋಡಬೇಕಾಗುತ್ತದೆ. ಇವತ್ತಿನ ಸಮಯದಲ್ಲಿ ನಾನು ಇಷ್ಟೇ ಹೇಳುವುದು, ಮಾನ್ಯ ಸಭಾಧ್ಯಕ್ಷರೆ, ತಾವು ಸರಿಯಾದ ರೀತಿಯಲ್ಲಿ ಈ ಸದನ ನಡೆಸಿಕೊಂಡು ಹೋಗಬೇಕು. ನಡೆಸಿಕೊಂಡು ಹೋಗುತ್ತೀರಿ. ತಮ್ಮ ಮೇಲೆ ಹೆಚ್ಚಿನ ಅಪಾರವಾದ ವಿಶ್ವಾಸ ಇದೆ. ಹೋದ ಅಧಿವೇಶನದಲ್ಲಿ ಮಾಡಿದ ಹಾಗೆ ತರಾತುರಿಯಾಗಿ ಎದ್ದು ಹೋಗುವ ಪ್ರಯತ್ನ ಮಾಡಬಾರದು. ಸದನ ನಡೆಸಬೇಕು. ಸದನದಲ್ಲಿ ಪ್ರತಿಯೊಬ್ಬ ಸದಸ್ಯರೂ ಕೂಡ ಬದಲಾದ ಪರಿಸ್ಥಿತಿಯಲ್ಲಿ "political situation" ಏನು ಛೇಂಜ್ ಆಗಿದೆ ಅದರಲ್ಲಿ ಅವರು ಏನು ಅಭಿಪ್ರಾಯ ವ್ಯಕ್ತ ಮಾಡುತ್ತಾರೆ ಅದಕ್ಕೆ ಅವಕಾಶ ಕೊಡಬೇಕು. ನಾನು ಇವತ್ತು ಸಭಾ ನಾಯಕರಿಗೆ ಹೇಳುತ್ತಿದ್ದೇನೆ, ಸ್ಪಷ್ಟವಾದ ನಿಲುವು ಇವತ್ತು ಅವರು ಹೇಳಬೇಕಾಗುತ್ತದೆ. ಎಷ್ಟೋ ಬಜೆಟ್ ಮಂಡನೆ ಆಗುತ್ತದೆ, ಎಷ್ಟೋ ಸಲ ನಾವು ಮಾಡಿದ್ದೇವೆ, ಪ್ರತಿಯೊಂದೂ ಸಮಸ್ಯೆಗಳನ್ನು ಬಗೆಹರಿಸತಕ್ಕಂಥದ್ದು ಆಗುವುದಿಲ್ಲ. That is our experience. ಆದರೆ "The circumstances prevailing in Karnataka State is forcing us to tell that."

ರಾಷ್ಟ್ರಪತಿಗಳು ಹೇಳಿರತಕ್ಕಂತಹ ಅಂಶಗಳನ್ನು ಅನುಷ್ಠಾನಕ್ಕೆ ತರತಕ್ಕಂಥದ್ದು ಚೆಲ್ಲಾಟದ ಕೆಲಸ ಅಲ್ಲ. ಘನತೆ ಗೌರವದಿಂದ ಇವತ್ತು ರಾಷ್ಟ್ರಪತಿಗಳಿಗೆ ಗೌರವ ಸಲ್ಲಿಸಬೇಕಾಗಿದೆ. ಬೇರೆ ವಿಚಾರಗಳು ಅಲ್ಲ. ನಾವು, ವಿರೋಧ ಪಕ್ಷದ ನಾಯಕರುಗಳು ಹೇಳುತ್ತೇವೆ, ಪ್ರಸ್ತಾಪ ಮಾಡುತ್ತೇವೆ, ಸಮಸ್ಯೆಗಳ ಬಗ್ಗೆ ಹೇಳುತ್ತೇವೆ, ತಾವು ಉತ್ತರ ಕೊಡುತ್ತೀರಿ, "that is different" ಈವತ್ತು ರಾಷ್ಟ್ರಪತಿಯವರ ಭಾಷಣದ ಬಗ್ಗೆ ಪ್ರಪ್ರಥಮವಾಗಿ ಚರ್ಚೆ ನಡೆಯುತ್ತಿದೆ, 1963ರಲ್ಲಿ ರಾಷ್ಟ್ರಪತಿಯವರು ಬಂದು ಭಾಷಣ ಮಾಡಿ ಹೋದ ನಂತರ ಚರ್ಚೆ ಆಗಲಿಲ್ಲ. ಇವತ್ತು ಮಾನ್ಯ ಶ್ರೀರಾಮರೆಡ್ಡಿಯವರು ಹೇಳುತ್ತಿದ್ದರು. ಕೇರಳದಲ್ಲಿ ರಾಷ್ಟ್ರಪತಿಯವರು ಬಂದು ಭಾಷಣ ಮಾಡಿ ಹೋದರು. ಕ್ಯಾಬಿನೆಟ್‌ನಲ್ಲಿ ಚರ್ಚೆ ಮಾಡಬೇಕೆಂದು ಹೇಳಿದರು; ನಾವು ರಾಷ್ಟ್ರಪತಿಗಳು

ಬಂದು ಹೋದ ಮೇಲೆ, ಸಂಪುಟದಲ್ಲಿ ಕೂತು ಇದನ್ನು ಅನುಷ್ಠಾನಕ್ಕೆ ತರತಕ್ಕಂತಹ ರೀತಿಯಲ್ಲಿ ಎಷ್ಟು ಹಣ ಬೇಕೆಂದು ಚರ್ಚೆ ಮಾಡಿ, ರಾಜ್ಯಪಾಲರ ಭಾಷಣದಲ್ಲಿ ನಮೂದಿಸಿದ್ದೆವು. ಅದಕ್ಕೆ ಬಹಳ ಜವಾಬ್ದಾರಿಯುತವಾಗಿ ಮಾತನಾಡಬೇಕಾಗುತ್ತದೆ. ಕೇವಲ ಮಾತನಾಡತಕ್ಕಂಥದ್ದು ಅಲ್ಲ, ಇವತ್ತಿನ ದಿವಸ ತಮ್ಮ ಮೇಲೆ ಹೆಚ್ಚಿನ ಜವಾಬ್ದಾರಿ ಇದೆ. ತಾವು ಮುಖ್ಯಮಂತ್ರಿಗಳು ಯುವಕರಿದ್ದೀರಿ. ಯುವಕರಾಗಿ ಇಂತಹ ಒಂದು ಅವಕಾಶ ಸಿಕ್ಕಾಗ ಕೂಡ, ಪ್ರತಿಕ್ರಿಯಾವಾದಿ ಶಕ್ತಿಗಳ ಹಿಡಿತಕ್ಕೆ ಒಳಗಾಗಬಾರದು. ಈ ದೇಶದಲ್ಲಿ ಹಾಹಾಕಾರ ಮಾಡಿ ಭಾವನೆಗಳನ್ನು ಕೆರಳಿಸಿ ಮಾಡತಕ್ಕಂತಹ ಎಲ್ಲಾ ರಾಜಕಾರಣ ಆಗಿದೆ. ಇವತ್ತು ಈ ರಾಜ್ಯಕ್ಕೆ ಅಭಿವೃದ್ಧಿ ಮಾಡತಕ್ಕಂತಹ ರೀತಿಯಲ್ಲಿ ಒಂದು ಕಮಿಟ್‌ಮೆಂಟ್ ಬೇಕು. ತಾವು ಪ್ರವಾಸ ಮಾಡುತ್ತಿದ್ದೀರಿ, ಆಶ್ವಾಸನೆ ಕೊಡುತ್ತಿದ್ದೀರಿ, ಎಲ್ಲಾ ಕಡೆ ಹೇಳುತ್ತಿದ್ದೀರಿ; ಆದರೆ ನಾವು ಏನು ಹೇಳುತ್ತಿದ್ದೇವೆ ಇವತ್ತು ಬಹಳಷ್ಟು ಸಮಸ್ಯೆಗಳ ಬಗ್ಗೆ, ಹೇಳಬೇಕಾಗಿದೆ. ಮೆಟ್ರೋ ಬಗ್ಗೆ ಹೇಳುವುದಕ್ಕೆ ನಾನು ಈಗ ತಯಾರಿಲ್ಲ. ನಾವು ಅದನ್ನು ಪ್ರಾರಂಭ ಮಾಡಿದ್ದೇವೆ. ಬೇರೆ ಬೇರೆ ವಿಚಾರಗಳು ಇಂಟರ್ ನ್ಯಾಷನಲ್ ಏರ್‌ಪೋರ್ಟ್ ಆಗಲಿ, ಅಥವಾ ಬೇರೆ ಯಾವುದಾದರೂ ಆಗಲಿ, ಅವುಗಳ ಬಗ್ಗೆ ನಾನು ಹೇಳಲಿಕ್ಕೆ ತಯಾರಿಲ್ಲ. ತಮಗೆ ಒಂದು ಅವಕಾಶ ಸಿಕ್ಕಿದೆ. ಅವಕಾಶ ಸಿಕ್ಕ ಕಾಲದಲ್ಲಿ ತಮ್ಮ ಸ್ಪಷ್ಟವಾದ ನಿಲುವನ್ನು ರಾಜ್ಯದ ಜನತೆಗೆ ಹೇಳಬೇಕಾಗಿದೆ. ಈ ಜನರ ಕೈಯಲ್ಲಿ ಸಿಗಬೇಡಿ. ಇದೇ ಮಾನ್ಯ ರಾಮಚಂದ್ರೇಗೌಡರು ಮೆಟ್ರೋ ರೈಲು ಪ್ರಾಜೆಕ್ಟ್ ಬಂದರೆ ನಾನು ಆತ್ಮಹತ್ಯೆ ಮಾಡಿಕೊಳ್ಳುತ್ತೇನೆಂದು ಹೇಳಿದ್ದರು. ಹೀಗೆಲ್ಲಾ ಹೇಳಿದವರು ಈಗ ಇಲ್ಲಿ ಸುಮ್ಮನೆ ಕೂತಿದ್ದಾರೆ. ನನ್ನ ಕಾಲದಲ್ಲಿ ಮೆಟ್ರೋ ರೈಲು ಪ್ರಾಜೆಕ್ಟ್ ಬಗ್ಗೆ ಯಾರು ಏನೇ ಹೇಳಿದರೂ ಕಿವಿ ಕೊಡಲಿಲ್ಲ. ನನಗೆ ಒಂದು ಕಮಿಟ್‌ಮೆಂಟ್ ಇದೆ, ಹೋರಾಟ ಮಾಡಿ ಬಂದಿದ್ದೇನೆ. ಯಾರು ಪತ್ರ ಬರೆದರೂ, ಪತ್ರ ಪಕ್ಕಕ್ಕೆ ಇಟ್ಟೆ, ನಾನು ಮೆಟ್ರೋ ರೈಲಿನ ಕಡೆ ಗಮನ ಇಟ್ಟು ಕೆಲಸ ಮಾಡಿದೆ. ನಾನು ಮತ್ತು ಉಪ ಮುಖ್ಯಮಂತ್ರಿಗಳು ಮಾತ್ರ ದೆಹಲಿಗೆ ಹೋಗಿ ಮೆಟ್ರೋ ರೈಲಿನ ಬಗ್ಗೆ ಮಾತನಾಡಲಿಲ್ಲ, ಈ ರಾಜ್ಯದ ವಿರೋಧ ಪಕ್ಷದ ನಾಯಕರನ್ನೂ ಕೂಡ ಜೊತೆಯಲ್ಲಿ ಕರೆದುಕೊಂಡು ಹೋಗಿ, ಪ್ರಧಾನ ಮಂತ್ರಿಗಳಿಗೆ ಹೇಳಿದೆವು. ಅವರು ಆಗ ಏನು ಹೇಳಿದರು? "Your own partners are creating problem;" ಎನ್ನತಕ್ಕಂತಹ ಮಾತು ಅವರು ಹೇಳಿದರು. ಇವತ್ತು ಸಾಕಷ್ಟು ಸಹನೆ ಬೇಕಾಗುತ್ತದೆ. "It requires patience". "Politics is a

waiting game". ನಮಗೆ ಗೊತ್ತಿದೆ, ನಾವು ಹೋರಾಟ ಮಾಡಿ ಜನರ ಮುಂದೆ ಹೋಗುತ್ತೇವೆ. ಆದರೆ ಇವತ್ತಿನ ದಿವಸ ಅಪವಿತ್ರವಾದ ಮೈತ್ರಿ ಏನು ಕರ್ನಾಟಕ ರಾಜ್ಯದಲ್ಲಿ ಇದೆ, ಅದು ಐತಿಹಾಸಿಕವಾದಂಥ ಮೈತ್ರಿ ಹಿಂದೆ ಎಂದೂ ಬರಲಿಲ್ಲ ಅದು. ಇವತ್ತು ಬಂದಿದೆ. ಕಾದು ನೋಡೋಣ, ಎಲ್ಲಿಯವರೆಗೆ ಮಾನ್ಯ ಕುಮಾರಸ್ವಾಮಿಯವರಿಗೆ ಬಿಜೆಪಿಯವರು ಸಹಾಯ ಮಾಡುತ್ತಾರೆಂದು ನೋಡಲು ಆ ಮಾತು ಹೇಳಿದ್ದೇನೆ. ಹೇಳಿದ ಮೇಲೆ, ಇವತ್ತು ಎಲ್ಲಾ ಕಡೆ ಘರ್ಷಣೆಗಳು ನಡೆಯುತ್ತಿವೆ. ಮೊನ್ನೆ ನಾನು ಪತ್ರಕರ್ತ ಮಿತ್ರರಿಗೆ ಹೇಳಿದೆ. ಇವತ್ತು ಬನಾರಸ್‌ನಲ್ಲಿ ಘಟನೆ ಆಯಿತು, ಬೇರೆ ಕಡೆ ಘಟನೆ ಆಯಿತು, ದೇಶದಲ್ಲಿ ಎಲ್ಲಾ ಕಡೆ ನಡೆಯುತ್ತಿದೆ. ರಾಜ್ಯ ನಿಮ್ಮ ಕೈಯಲ್ಲಿ ಸಿಕ್ಕಿದೆ ಮತ್ತೆ ಏಕೆ ಮಾಡಲಿಕ್ಕೆ ಹೋಗುತ್ತಿದ್ದಾರೆಂದೂ ಕೂಡ ಹೇಳಿದ್ದೇನೆ. ಸಾಕಷ್ಟು ಸಮಸ್ಯೆಗಳು ಇವೆ, ಇವತ್ತು ಅದರ ಬಗ್ಗೆ ಗಮನವಿಟ್ಟು ಕೆಲಸ ಮಾಡಿ. ಕೊನೆಯದಾಗಿ ಇವತ್ತಿನ ಸಮಸ್ಯೆಗಳ ಬಗ್ಗೆ ನಾನು ಒಂದೊಂದಾಗಿ ಬರುತ್ತೇನೆ. ಇವತ್ತು ಸಭಾನಾಯಕರು ಏನು ಮಂಡಿಸಿದ್ದಾರೆ, ನನಗೆ ಕೂಡ ರಾಷ್ಟ್ರಪತಿಗಳ ಬಗ್ಗೆ ಗೌರವ ಇದೆ. ಅವರು ಈ ದೇಶದ ದೊಡ್ಡ ವಿಜ್ಞಾನಿ; ಯಾವ ರೀತಿಯಾಗಿ ನಾವು ಅಬ್ರಾಹಾಂಲಿಂಕನ್‌ರ ಹೆಸರು ತೆಗೆದುಕೊಳ್ಳುತ್ತೇವೆ, ಯಾವ ರೀತಿಯಾಗಿ ಮಹಾತ್ಮ ಗಾಂಧಿಯವರ ಹೆಸರು ತೆಗೆದುಕೊಳ್ಳುತ್ತೇವೆ ಯಾವ ರೀತಿಯಾಗಿ ಮಾನ್ಯ ನೆಲ್ಸನ್ ಮಂಡೇಲರವರ ಹೆಸರು ತೆಗೆದುಕೊಳ್ಳುತ್ತೇವೆ, ಆ ರೀತಿ ಆ ಗುಂಪಿಗೆ ಬರತಕ್ಕಂತಹ ಒಬ್ಬ ಮೇಧಾವಿ ನಮ್ಮ ರಾಷ್ಟ್ರದ ಗೌರವಾನ್ವಿತ ರಾಷ್ಟ್ರಪತಿಗಳು ಇಲ್ಲಿ ಬಂದು ಮಾತನಾಡಿದ್ದಾರೆ. ಇವತ್ತು ಕೇವಲ ಚರ್ಚೆ ಮಾಡಿದರೆ ಸಾಲದು, ನಿರ್ಣಯ ಮಾಡಿದರೆ ಸಾಲದು. ಕರ್ನಾಟಕ ರಾಜ್ಯದ ಜನತೆ ನಿಮ್ಮ ನೇತೃತ್ವದಲ್ಲಿ ಇವತ್ತು ಡಾ: ಅಬ್ದುಲ್ ಕಲಾಂರವರು ಏನು ಹೇಳಿದ್ದಾರೆ, ಅದನ್ನು ಅನುಷ್ಠಾನಕ್ಕೆ ತರತಕ್ಕಂತಹ ರೀತಿಯಲ್ಲಿ ದೃಢ ಸಂಕಲ್ಪದಿಂದ ಹೋಗುತ್ತೇವೆಂದು ತಾವು ಹೇಳಿದರೆ ಮಾತ್ರ, ತಮ್ಮ ರಥ; ಮುಂದಕ್ಕೆ ನಡೆಯುತ್ತದೆ. ಬರೀ ಭಾಷಣದಿಂದ ಬಹಳ ದಿವಸ ರಥ ನಡೆಸುವುದಕ್ಕಾಗುವುದಿಲ್ಲ. ಇವತ್ತು ರಾಜ್ಯದ ರಥ ನಡೆಯಬೇಕಾದರೆ ಬಹಳ ವಿಶಾಲ ದೃಷ್ಟಿಯಿಂದ ರಾಜ್ಯದ ಸಮಸ್ಯೆಗಳ ಬಗ್ಗೆ ಸಾಮಾನ್ಯ ಜನತೆ ಬಗ್ಗೆ ಎಲ್ಲರನ್ನೂ ಒಟ್ಟಿಗೆ ತೆಗೆದುಕೊಂಡು ಹೋಗತಕ್ಕಂತಹ ರೀತಿಯಲ್ಲಿ, ಪ್ರಾರಂಭ ಮಾಡಿದರೆ ಮಾತ್ರ ಆಗುತ್ತದೆ ಎನ್ನತಕ್ಕಂತಹ ಮಾತನ್ನೂ ಕೂಡ ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಇವತ್ತು ಬೇರೆ ವಿಚಾರಗಳ ಬಗ್ಗೆ ಹೇಳಬೇಕಾಗಿದೆ. ಟೆಕ್ಸ್‌ಟೈಲ್ಸ್ ಹಾರ್ಟಿಕಲ್ಚರ್ ಬಗ್ಗೆಯೂ ಕೂಡ ನಮ್ಮ ಗೆಳೆಯರು

ಮಾತನಾಡುತ್ತಿದ್ದಾರೆ. ಅದಕ್ಕೆ ನಾನು ಇಷ್ಟೇ ಹೇಳುವುದು, ನಾನು ಇದಕ್ಕೆ ವಿರೋಧ ಮಾಡುತ್ತಿಲ್ಲ. ನಾವು ಸ್ವಾಗತ ಮಾಡುತ್ತಿದ್ದೇವೆ. ಇನ್ನು ಹೆಚ್ಚಿನ ರೀತಿಯಲ್ಲಿ ಪರಿಣಾಮಕಾರಿಯಾಗಿ ಕಾರ್ಯಕ್ರಮ ಮಾಡಬೇಕಾಗಿದೆ ರಚನಾತ್ಮಕವಾದ ಕಾರ್ಯಕ್ರಮ ಇದೆ. ರಾಜ್ಯದ ಹಿತದೃಷ್ಟಿಯಿಂದ ಯಾರಿಗೆ ಒಳ್ಳೆಯ ಕೆಲಸ ಮಾಡುತ್ತೀರಿ, ಅದಕ್ಕೆ ನಮ್ಮ ಸಂಪೂರ್ಣ ಬೆಂಬಲ ಇದೆ. ಕಾಂಗ್ರೆಸ್ ಯಾವಾಗಲೂ ಎಲ್ಲದಕ್ಕೂ ವಿರೋಧ ಮಾಡುವುದಿಲ್ಲ. ಕಾಂಗ್ರೆಸ್ ಕರ್ನಾಟಕ ರಾಜ್ಯದ ಜನತೆಗೆ ಹೆಚ್ಚಿನ ಸಹಾಯ ಮಾಡಿದೆ. ಮಾನ್ಯ ಪಿ.ವಿ.ನರಸಿಂಹರಾವ್‌ರವರು ದೇಶದ ಪ್ರಧಾನಮಂತ್ರಿಗಳಾಗಿದ್ದರು. 1996ರಲ್ಲಿ ಮಾನ್ಯ ದೇವೇಗೌಡರು ಈ ರಾಜ್ಯದ ಮುಖ್ಯಮಂತ್ರಿಗಳಾಗಿದ್ದರು. ಸೆಕ್ಯೂಲರ್ ಫೋರ್ಸಸ್ ಒಂದಾಗಬೇಕೆಂಬ ರೀತಿಯಲ್ಲಿ ಆಗ ಪ್ರಸ್ತಾಪ ಬಂದಾಗ, ಮಾನ್ಯ ಜ್ಯೋತಿ ಬಸುರವರು ಪ್ರಧಾನ ಮಂತ್ರಿಗಳಾಗುವುದಕ್ಕೆ ತಯಾರಾಗಲಿಲ್ಲ. ಮಾನ್ಯ ವಿ.ಪಿ.ಸಿಂಗ್‌ರವರೂ ತಯಾರಾಗಲಿಲ್ಲ. ಕೊನೆಗೆ ಮಾನ್ಯ ಪಿ.ವಿ.ನರಸಿಂಹರಾವ್‌ರವರು ದೇವೇಗೌಡರನ್ನೇ ಈ ದೇಶದ ಪ್ರಧಾನ ಮಂತ್ರಿಗಳನ್ನಾಗಿ ಮಾಡಿದರು. ಕೆ.ಸಿ.ರೆಡ್ಡಿಯವರಂಥ, ದಾಸಪ್ಪನವರಂಥ, ಮತ್ತು ಹನುಮಂತಯ್ಯನವರಂಥ ಪ್ರಭುದ್ಧ ರಾಜಕಾರಣಿಗಳು ರಾಜ್ಯದಲ್ಲಿ ಕೂಡ ಇದ್ದರು. ಕರ್ನಾಟಕದ ಪರವಾಗಿ, ರಾಷ್ಟ್ರ ಮಟ್ಟದಲ್ಲಿ ಪ್ರಧಾನಮಂತ್ರಿ ಮಾಡತಕ್ಕಂಥ ಅವಕಾಶ ಯಾರಾದರೂ ಕಲ್ಪಿಸಿಕೊಟ್ಟಿದ್ದರೆ ಕಾಂಗ್ರೆಸ್ ಪಕ್ಷ ಮಾತ್ರ ಕಲ್ಪಿಸಿಕೊಟ್ಟಿದೆ. ಇದನ್ನು ಮರೆಯಬಾರದು. ನೀವು ಅಂಥ ಪ್ರಧಾನಮಂತ್ರಿಯವರ ಮಗ ಆಗಿದ್ದೀರಿ. ಇವೊತ್ತಿನ ದಿವಸ ನಾವು ನಿಮಗೆ ನೆನಪು ಮಾಡುತ್ತಿದ್ದೇವೆ. ಕಾಂಗ್ರೆಸ್ ಪಕ್ಷ ಯಾವಾಗಲೂ ಕೂಡ ಪ್ರತ್ಯೇಕತಾ ವಾದಿಗಳನ್ನು ಮತ್ತು ಕೋಮುವಾದಿ ಶಕ್ತಿಗಳನ್ನು ದೂರ ಇಡತಕ್ಕಂಥ ಕೆಲಸವನ್ನು ಮಾಡಿದೆ. ಈ ದೃಷ್ಟಿಯಿಂದ ಯಾವಾಗಲೂ ರಾಷ್ಟ್ರದ ಹಿತದೃಷ್ಟಿಯಿಂದ ಒಂದಾಗತಕ್ಕಂಥ ರೀತಿಯಲ್ಲಿ ನಾವು ಪ್ರಯತ್ನ ಮಾಡಿದ್ದೇವೆ. ಇಂಥವರನ್ನು ನೀವು ಯಾವಾಗಲೂ ಕೂಡ ಮನಸ್ಸಿನಲ್ಲಿಟ್ಟುಕೊಂಡು, ಕೆಲಸವನ್ನು ಮಾಡಬೇಕೆಂದು ಹೇಳುತ್ತಾ ತಮಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ): ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಕಲಾಂರವರ ಬಗ್ಗೆ ಬಹಳ ಗೌರವ ಇಟ್ಟುಕೊಂಡಿರುವ ವ್ಯಕ್ತಿ ನಾನು. ಆದರೂ ಕೂಡ ನಾನು ಆಗಲೇ ಬಿಸಿನೆಸ್ ಅಡ್ವೈಸರಿ ಕಮಿಟಿ ಮುಂದೆ, ತಮ್ಮ ಮುಂದೆ ನಾನು ತೋಡಿಕೊಂಡು, ಈ ಚರ್ಚೆ ಅಸೆಂಬ್ಲಿಯಲ್ಲಿ ಆಗಬೇಕೇ? ಆಗುವುದಾದರೆ ಯಾವ ನಿಯಮದ ಕೆಳಗೆ ಆಗಬೇಕು ಎಂದು ಕೇಳಿದೆ. ಒಂದು

ಸಂಪ್ರದಾಯವನ್ನು ಇವೊತ್ತು ಶಾಸನಸಭೆಯಲ್ಲಿ ತಾವೇನು ಆರಂಭ ಮಾಡಿದ್ದೀರಿ ಅದು ಸಂವಿಧಾನದ ಕೆಳಗಡೆ ಬರುತ್ತದೋ ನಿಯಮದ ಕೆಳಗಡೆ ಬರುತ್ತದೋ, ಸತ್ಸಂಪ್ರದಾಯವೋ, ಕೆಟ್ಟ ಸಂಪ್ರದಾಯವೋ, ಅದರ ವಿವೇಚನೆಯನ್ನು ನಾನು ಈಗ ತಮಗೆ ಬಿಟ್ಟುಬಿಡುತ್ತೇನೆ. ಏಕೆಂದರೆ ನನಗೆ ಇದುವರೆಗೆ ಗೊತ್ತಿಲ್ಲ, ಒಬ್ಬ ಅತಿಥಿ ಒಂದು ಇಲ್ಲಿ ಭಾಷಣ ಮಾಡಿದರೆ ಆ ಬಗ್ಗೆ ಶಾಸಕ ಸಭೆ ಇಲ್ಲಿ ಚರ್ಚೆ ಮಾಡುವಂಥ ಒಂದು ಸಂಪ್ರದಾಯ. ರಾಷ್ಟ್ರಪತಿಯವರು ಆರ್ಟಿಕಲ್ 86, 87ರ ಕೆಳಗಡೆ ಪಾರ್ಲಿಮೆಂಟನ್ನು ಉದ್ದೇಶಿಸಿ ಭಾಷಣ ಮಾಡಬಹುದು. ಆರ್ಟಿಕಲ್ 87 ರಲ್ಲಿ ಸ್ಟ್ಯಾಚ್ಯುಟರಿ ಭಾಷಣ ಆಗುತ್ತದೆ, ಆರ್ಟಿಕಲ್ 86ರಲ್ಲಿ ಆರ್ಟಿಕಲ್ 175ರಲ್ಲಿ ಕೊಡುವಂಥ ಭಾಷಣವನ್ನು ಅವರು ಮಾಡಬಹುದು. ಆ ಭಾಷಣ ಕೇಂದ್ರ ಸರ್ಕಾರ ತಯಾರಿ ಮಾಡಿ ಕಳುಹಿಸಿದಂಥ ಭಾಷಣವನ್ನು ಓದುವ ಕೆಲಸವನ್ನು ಅವರು ಅಲ್ಲಿ ಮಾಡುತ್ತಾರೆ. ನಮ್ಮಲ್ಲಿ ಒಂದು ರಾಷ್ಟ್ರಪತಿಗಳು ಭಾಷಣ ಮಾಡಿರುವುದು ಸಂವಿಧಾನದ ಚೌಕಟ್ಟಿನಲ್ಲಿ ಇಲ್ಲ. ಆದರೆ ನಮ್ಮ ಸುವರ್ಣ ಮಹೋತ್ಸವಕ್ಕೆ ಒಬ್ಬ ಅತಿಥಿಯಾಗಿ ಬಂದು ಅವರು ಭಾಷಣ ಮಾಡಿದರು, ಅದಕ್ಕಾಗಿ ಅವರು ಇಲ್ಲಿಂದ ಹೋಗುವಾಗ ನಾವೆಲ್ಲಾ ಟೇಬಲ್ ತಟ್ಟಿ ಕಳುಹಿಸಿದ್ದೇವೆ. ಅಲ್ಲಿಗೇ ಸಾಕಾಗಿತ್ತು ಎಂಬುದು ನನ್ನ ಬಾವನೆ. ನಾನು ಬಹಳ ಚಿಕ್ಕವನು; ಇನ್ನು ಎರಡನೆಯದಾಗಿ ಸುವರ್ಣ ಕರ್ನಾಟಕ ಎಂದು ಆಚರಣೆ ಮಾಡಬೇಕೆಂದು ಸರ್ಕಾರ ಆಗ ನಿರ್ಧಾರ ಮಾಡಿತು, ಏನೇನು ಕಾರ್ಯಕ್ರಮಗಳನ್ನು ಮಾಡಬೇಕು ಎಂದು ಮಾಡಿದರು. ನವೆಂಬರ್ 20ನೆಯ ತಾರೀಖಿಗೆ ಯಾವ ಶ್ರೇಷ್ಠತೆ ಇತ್ತು ಎಂದು ಹೇಳಿ ನವೆಂಬರ್ 20ನೆಯ ತಾರೀಖಿಗೆ ರಾಷ್ಟ್ರಪತಿಗಳು ಇಲ್ಲಿಗೆ ಭಾಷಣ ಮಾಡುವುದಕ್ಕೆ ಬಂದರು? ನವೆಂಬರ್ 1ಕ್ಕೆ ಅವರು ಬರಲಿಲ್ಲ. ಅಥವಾ ಮುಂದಿನ ವರ್ಷ ನವೆಂಬರ್ 1ಕ್ಕೆ ಅವರು ಬರಲಿಲ್ಲ. ನಾವೆಲ್ಲಾ ರಾಜ್ಯೋತ್ಸವವನ್ನು ನವೆಂಬರ್ 1ನೆಯ ತಾರೀಖಿಗೆ ಎಂದು ಆರಂಭ ಮಾಡಿಕೊಂಡೆವು. ಅದರಂತೆ ಆಚರಣೆ ಮಾಡಿಕೊಂಡು ಬಂದಿದ್ದೇವೆ. ನಾವು ಸುವರ್ಣ ಮಹೋತ್ಸವವನ್ನು ಆಚರಣೆ ಮಾಡುವ ಕಾಲದಲ್ಲಿ ನವೆಂಬರ್ 1ರ ದಿವಸಕ್ಕೆ ರಾಷ್ಟ್ರಪತಿಗಳು ಬಂದಿದ್ದರೆ ಅದಕ್ಕೆ ನಿಜವಾದ ಒಂದು ಮಹತ್ವ ಇರುತ್ತಿತ್ತು, ಘನತೆ ಗೌರವ ಇರುತ್ತಿತ್ತು ಎಂದು ಹೇಳಬಯಸುತ್ತೇನೆ. ರಾಜ್ಯದ ಬಗ್ಗೆ ಹೇಳುವುದಾದರೆ, ತಾವು ಅನ್ಯಥಾ ಭಾವಿಸಬಾರದು, ರಾಷ್ಟ್ರಪತಿಗಳ ಬಗ್ಗೆ ಟೀಕೆ ಮಾಡುವುದಕ್ಕೆ ನಾನು ಇಲ್ಲಿ ನಿಂತಿಲ್ಲ. ತನ್ನದೇ ಆದ ಒಂದು ದೊಡ್ಡ ಗೌರವವನ್ನು ಇಟ್ಟುಕೊಂಡಿರತಕ್ಕಂಥಹ ಶಾಸನಸಭೆಯಾಗಿದೆ. ಎಲ್ಲಾ ಆಯಾಮಗಳಿಂದ, ಎಲ್ಲಾ ಸ್ತರಗಳಿಂದ, ಎಲ್ಲಾ

ರೀತಿಯ ಅನುಭವವನ್ನು ಪಡೆದು ಇಲ್ಲಿಗೆ ನಾವು ಶಾಸಕರಾಗಿ ಬರುತ್ತೇವೆ. ಇಲ್ಲಿ ಶಾಸಕರಾಗಿ ಬರುವವರು ಸರ್ಕಾರವನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಸರ್ಕಾರ ಕೂಡ ಎಲ್ಲಾ ರೀತಿಯ ಅನುಭವಗಳನ್ನು, ತಿಳುವಳಿಕೆಯನ್ನು ಇಟ್ಟುಕೊಂಡು ಈ ರಾಜ್ಯಕ್ಕೆ ಒಂದು ಯೋಜನೆಯನ್ನು ಮಾಡಬೇಕಾಗುತ್ತದೆ. ಅದರ ಸಹಾಯಕ್ಕೆ ಒಂದು ಯೋಜನಾ ಇಲಾಖೆ ಕೂಡ ಇದೆ. ಅದಕ್ಕೆ ಗೈಡ್ ಮಾಡುವುದಕ್ಕೆ ಕೇಂದ್ರ ಸರ್ಕಾರದ ಮಟ್ಟದಲ್ಲಿ ಒಂದು ಪ್ಲಾನಿಂಗ್ ಕಮೀಷನ್ ಕೂಡ ಇದೆ. ಕಲಾಂ ಸಾಹೇಬರು ನಮಗೆ ಏನು 11 ಸೂತ್ರಗಳನ್ನು ಕೊಟ್ಟು ಹೋದರೋ ಅದು ರಾಜ್ಯದ ದೃಷ್ಟಿಯಿಂದ ಒಳ್ಳೆಯದು ಎಂದು ತಿಳಿದುಕೊಂಡು ಅದರ ಬಗ್ಗೆಯೇ ಬಹಳ ಮಾತನಾಡುತ್ತಾ ಹೋಗಿ, ನಾವೆಲ್ಲಾ ಇಂಟಲಿಕ್ಚ್ಯುಯಲ್ ಬ್ಯಾಂಕ್ ರಫ್ಟ್ ಆಗಿದ್ದೇವೆ ಎಂದು ಒಪ್ಪಿಕೊಳ್ಳಬೇಕೇ ಎನ್ನುವುದೇ ನನ್ನ ಇವೊತ್ತಿನ ಪ್ರಶ್ನೆಯಾಗಿದೆ. ಶಾಸನಸಭೆಯಲ್ಲಿ ಈ ರಾಜ್ಯದ ಅಭಿವೃದ್ಧಿ ಬಗ್ಗೆ ಕುಳಿತು ಚರ್ಚೆ ಮಾಡುವುದಕ್ಕೆ ಅರ್ಹರಾದವರು ಇರಲೇ ಇಲ್ಲ, ಯಾರೋ ಬಂದು ಕೊಟ್ಟ ಗೈಡ್‌ಲೈನ್ಸ್ ಮೇಲೆಯೇ ನಾವು ಇವೊತ್ತು ಚರ್ಚೆಯನ್ನು ಆರಂಭ ಮಾಡುತ್ತಿದ್ದೇವೆ ಎಂದು ಹೇಳಿ ಒಪ್ಪಿಕೊಂಡರೆ, ನಾವು ಇಡುವ ಬಜೆಟ್‌ಗೆ ನಾವು ಮಾಡಿಸುವ ರಾಜ್ಯಪಾಲರ ಭಾಷಣಕ್ಕೆ ಏನಾದರೂ ಔಚಿತ್ಯ ಮುಂದೆ ಉಳಿಯುತ್ತದೆಯೇ ಎಂಬುದು ನನ್ನನ್ನು ಕಾಡುತ್ತಿದೆ. ನಾನು ಒಬ್ಬ ವಿದ್ಯಾರ್ಥಿಯಾಗಿ ನನಗೆ ಈ ಪ್ರಶ್ನೆ ಕಾಡುತ್ತಿದೆ. ಈ ರಾಜ್ಯದ ಎಲ್ಲಾ ಯೋಜನೆಗಳನ್ನು ಈ ರಾಜ್ಯದ ಸಚಿವ ಸಂಪುಟ ಮಾಡಬೇಕಾಗಿತ್ತು. ಆ ಯೋಜನೆಗಳನ್ನು ರಾಜ್ಯಪಾಲರ ಮೂಲಕ ಹೇಳಿಸಬೇಕಾಗಿತ್ತು. ಆ ಯೋಜನೆಗಳಿಗೆ ಫಂಡ್ ಕೊಡುವ ಕೆಲಸವನ್ನು all those projects have to be funded through the budget, ಆಗಬೇಕಾಗಿತ್ತು. ನಮ್ಮ ಬಗ್ಗೆ ಇಲ್ಲಿಗೆ ಬಂದು ಒಂದೆರಡು ಒಳ್ಳೆಯ ಮಾತುಗಳನ್ನು ಹೇಳಿ ಹೋಗುವುದು ಅವರ ದೊಡ್ಡ ಗುಣ. ಆದರೆ ಅದರ ಬಗ್ಗೆಯೇ ಇಲ್ಲಿ ಕುಳಿತುಕೊಂಡು ಅದನ್ನೇ ಒಂದು ಅಜೆಂಡಾವನ್ನಾಗಿ ಇಟ್ಟುಕೊಂಡು, ಅದನ್ನೇ ಒಂದು ಮ್ಯಾಂಡೇಟ್ ಎಂದು ನಾವು ಚರ್ಚೆ ಮಾಡುವುದಕ್ಕೆ ಏನು ಹೊರಟಿದ್ದೇವೆ, ಇದು ಆಗಬೇಕೇ? ತಾವೇ ಯೋಚನೆ ಮಾಡಬೇಕು. ಏಕೆಂದರೆ ಇದು ನನ್ನ ನಿಮ್ಮ ಪ್ರಶ್ನೆ ಅಲ್ಲ. ಈ ಶಾಸನಸಭೆಯ ಇತಿಹಾಸಗಳ ಪ್ರಶ್ನೆ. ಮುಂದೆ ಉದ್ಭವ ಆಗುತ್ತದೆ. ಯಾವತ್ತು ಎಲ್ಲಿ ರಾಷ್ಟ್ರಪತಿಗಳ ಭಾಷಣದ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶವಾಯಿತು? ಯಾವ ನಿಯಮದ ಕೆಳಗಡೆ ಭಾಷಣದ ಮೇಲೆ ಚರ್ಚೆ ಮಾಡಲಾಯಿತು ಎಂದು ಹೇಳಬೇಕಾಗುತ್ತದೆ. ಆದರೆ ಈಗ ನಾವು ತಿಳಿದ ಮಟ್ಟಿಗೆ ನಿಯಮಗಳ ಕೆಳಗಡೆ ಅವಕಾಶ ಇಲ್ಲ. ಆದರೂ ತಾವು

ದೊಡ್ಡವರೆಲ್ಲರೂ ತೀರ್ಮಾನ ಮಾಡಿಕೊಂಡು ಮಾತನಾಡಬೇಕು ಎಂದು ಮಾಡಿದ್ದರಿಂದ ನಾನೂ ಕೂಡ ಚರ್ಚೆಯಲ್ಲಿ ಪಾಲ್ಗೊಳ್ಳುತ್ತಿದ್ದೇನೆ. ಮಾನ್ಯ ಅಧ್ಯಕ್ಷರೆ, ನಾನು ಇದರಲ್ಲಿ ಅವರ 11 ಸೂತ್ರಗಳು ಮತ್ತು ಅವರು ಮಾಡಿರುವ ಭಾಷಣದ ಪೂರ್ಣ ಪಾಠವನ್ನು ಓದಿದ್ದೇನೆ. ಅವರೇ ಒಪ್ಪಿಕೊಳ್ಳುತ್ತಾರೆ, ಇದು ಪ್ಲಾನಿಂಗ್ ಕಮೀಷನ್‌ರವರು ಕೊಟ್ಟಿರುವಂಥ ಅಂಶಗಳ ಆಧಾರದ ಮೇಲೆ ಆಗಿರುವಂಥ ಭಾಷಣ ಇದಾಗಿದೆ. ಯಾರಿಗೂ ಅಂಥ ಒಂದು ದೊಡ್ಡ ಸುಂದರವಾದ ಕನಸು ಬರುವುದಕ್ಕೆ ಸಾಧ್ಯವಿಲ್ಲ. ಈ ದೇಶದ ಪ್ಲಾನಿಂಗ್ ಕಮೀಷನ್ ರಾಷ್ಟ್ರಪತಿಗಳು ಇಲ್ಲಿಗೆ ಬಂದು ಭಾಷಣ ಮಾಡಬೇಕಾದರೆ ಅದಕ್ಕೆ ಪೂರಕವಾಗಿ ಒಂದಿಷ್ಟು ಅಂಶಗಳನ್ನು ಕೊಟ್ಟಿತು. ಆ ಪ್ಲಾನಿಂಗ್ ಕಮೀಷನ್ನೇ ನಮಗೂ ಕೊಡುತ್ತಾ ಹೋಯಿತು ಮತ್ತು ಫಂಡಿಂಗ್ ಕೂಡ ಮಾಡುತ್ತಾ ಹೋಯಿತು. ಇದರಲ್ಲೇನು ನಾವು 11 ಅಂಶಗಳನ್ನು ಹಾಕಿಕೊಂಡಿದ್ದೇವೆ, ಹೆಮ್ಮೆ ಪಟ್ಟುಕೊಂಡು ಹೇಳಬೇಕಾಗುತ್ತದೆ, ಕರ್ನಾಟಕ ರಾಜ್ಯ ಅವರು ಹೇಳಿರುವುದಕ್ಕಿಂತ ಕೆಲವು ಕ್ಷೇತ್ರಗಳಲ್ಲಿ ಇನ್ನೂ ಮುಂದೆ ಹೋಗಿದ್ದೇವೆ. ಸರ್‌ಫೇಸ್ ವಾಟರ್ ಮ್ಯಾನೇಜ್‌ಮೆಂಟ್‌ನಲ್ಲಿ, ಡ್ರಿಂಕಿಂಗ್ ವಾಟರ್ ಮ್ಯಾನೇಜ್‌ಮೆಂಟ್‌ನಲ್ಲಿ, ಬಹುಶಃ ನಾವು ಬೇರೆಯವರ ಹತ್ತಿರ ಹೇಳಿಸಿಕೊಳ್ಳುವ ಸ್ಥಿತಿಯೇನೂ ನಮಗೆ ಇಲ್ಲ. ದೊಡ್ಡ ನಮಸ್ಕಾರವನ್ನು ನಾನು ನಜೀರ್‌ಸಾಹೇಬರಿಗೆ ಮಾಡುತ್ತೇನೆ. ಕರ್ನಾಟಕದ ಇತಿಹಾಸದಲ್ಲಿ diarrhea ಡಫ್ತೀರಿಯಾ ಎನ್ನತಕ್ಕಂಥ ಕೆಟ್ಟ ಕಾಯಿಲೆಗಳನ್ನು ಇವೊತ್ತು ಇಲ್ಲದ ಹಾಗೆ ಮಾಡಿದ, ಒಳ್ಳೆಯ ಕುಡಿಯುವ ನೀರನ್ನು ಗ್ರಾಮೀಣ ಪ್ರದೇಶಕ್ಕೆ ಒದಗಿಸಿ ದೊಡ್ಡತನವನ್ನು ತೋರಿಸಿದ ನಜೀರ್‌ಸಾಬ್‌ರವರಿಗೆ ನಮ್ಮೆಲ್ಲರ ಗೌರವವನ್ನು ಅರ್ಪಣೆ ಮಾಡಬೇಕಾಗುತ್ತದೆ. ಅವರೇನಾದರೂ ಕರ್ನಾಟಕಕ್ಕೆ ಗ್ರಾಮೀಣಾಭಿವೃದ್ಧಿ ಮಂತ್ರಿಯಾಗಿ ಬರದೇ ಹೋಗಿದ್ದರೆ ನಾವು ಇವೊತ್ತು ಹಳ್ಳಿಯಲ್ಲಿ ಬದುಕಿರುವವರು ಎಂಥ ನೀರು ಕುಡಿಯುತ್ತಿದ್ದೆವೋ ಎಂದು ನಾನು ಮಾತ್ರ ಹೇಳುವುದಕ್ಕೆ ಸಾಧ್ಯ. ಏಕೆಂದರೆ ನಾನು 70 ಮನೆ ಇರುವಂಥ ಒಂದು ಗ್ರಾಮದಲ್ಲಿ ಇರುವುದು. ಆ ಶಕ್ತಿಯನ್ನು ತುಂಬುವವರು ಇಲ್ಲಿ ಇದ್ದರು. ಇನ್ನು ಎರಡನೆಯದಾಗಿ ಸರ್ಫೇಸ್ ವಾಟರ್ ಮ್ಯಾನೇಜ್‌ಮೆಂಟ್‌ನಲ್ಲಿ ಬಹುಶಃ ವಾಟರ್‌ಶೆಡ್ ಕಾನ್‌ಸೆಪ್ಟ್‌ನಲ್ಲಿ ಮಾನ್ಯ ಶ್ರೀನಿವಾಸಗೌಡರು ಈಗ ಇಲ್ಲಿದ್ದಾರೆ, ಕರ್ನಾಟಕ ಇಡೀ ದೇಶಕ್ಕೇ ಒಂದು ಮಾದರಿ ರಾಜ್ಯವಾಗಿದೆ ಎಂಬುದು ನನ್ನ ಭಾವನೆ. ಮೈಕ್ರೋ ವಾಟರ್‌ಶೆಡ್‌ನಿಂದ ಮ್ಯಾಕ್ರೋ ವಾಟರ್‌ಶೆಡ್‌ವರೆಗೆ ನಾವು ಮಾಡಿರುವ ಪ್ರೋಗ್ರೆಸ್, ವಾರಸಾ ಎನ್ನುವ ಸ್ಕೀಂ ಶುರು ಮಾಡಿಕೊಂಡು ಬರಲಾಯಿತು. ನಾನು ಒಂದು ಮಾತನ್ನು

ಹೇಳಬೇಕೆಂದರೆ, ಜಾಫರ್ ಸೈಫುಲ್ಲಾ ಸಾಹೇಬರನ್ನು ಕೂಡ ನಾವು ಇಲ್ಲಿ ಈಗ ನೆನಸಿಕೊಳ್ಳಬೇಕಾಗುತ್ತದೆ, ಅವರು ಡೆವಲಪ್‌ಮೆಂಟ್ ಕಮೀಷನರ್ ಆಗಿದ್ದರು. ಅವರು ಇದ್ದ ಕಾಲದಲ್ಲಿ ನಾನು ಅವರ ಜೊತೆ ಸ್ವಲ್ಪ ಅಸೋಸಿಯೇಟ್ ಆಗಿದ್ದೆ, ಕೆಎಂಎಫ್ ಅಧ್ಯಕ್ಷನಾಗಿದ್ದಾಗ. ವಾಟರ್‌ಶೆಡ್ ಬಗ್ಗೆ ಡ್ರೈ ಲ್ಯಾಂಡ್ ಡೆವಲಪ್‌ಮೆಂಟ್ ಬಗ್ಗೆ, ಡೀಸಿಲ್ಟೇಷನ್ ಆಫ್ ರೂರಲ್ ಇರಿಗೇಷನ್ ಅಚ್‌ಕಟ್ ಟ್ಯಾಂಕ್ಸ್ ಬಗ್ಗೆ, ಫ್ಲಂಪ್ ಎಂದು ಒಂದು ಪ್ರೋಗ್ರಾಂ ಮಾಡಿದ್ದರು, ಆ ಬಗ್ಗೆ ಅವರು ಏನು ಮಾತನಾಡುತ್ತಿದ್ದರು ಆ ಕಲ್ಪನೆಯನ್ನೇನಾದರೂ ನಾವು ಇಟ್ಟುಕೊಂಡಿದ್ದರೆ ಇವೊತ್ತು ಕರ್ನಾಟಕ ಸ್ವರ್ಗ ಆಗಿರುತ್ತಿತ್ತು. ಇದನ್ನುಳಿದ ಡಾಃ ಸರೋಜಿನಿ ಮಹಿಷಿ ವರದಿ, ಡಾಃ ನಂಜುಂಡಪ್ಪನವರ ವರದಿಯನ್ನೇನಾದರೂ ಇಲ್ಲಿ ಇಟ್ಟು ಯಾವತ್ತಾದರೂ ಆ ಬಗ್ಗೆ ನಾವು ಚರ್ಚೆಯನ್ನು ಮಾಡಿಬಿಟ್ಟಿದ್ದರೆ, ಬಹುಶಃ ನಂಜುಂಡಪ್ಪನವರ ವರದಿ ಬಗ್ಗೆ ಇಲ್ಲಿ ಚರ್ಚೆ ಆಗಿದ್ದರೆ ಕರ್ನಾಟಕಕ್ಕೆ ಇನ್ನು ಯಾವ ದಿಗ್ದರ್ಶನ, ಯಾವುದೇ ಒಂದು ಗೈಡೆನ್ಸ್ ಗೈಡ್‌ಲೈನ್ಸ್ ನಮಗೆ ಬೇಕಿರಲಿಲ್ಲ ಎಂದು ನೀನು ಭಾವಿಸುತ್ತೇನೆ. ಏಕೆಂದರೆ ಅಷ್ಟು ಶ್ರಮಪಟ್ಟು ಯಾವ ಯಾವ ತಾಲ್ಲೂಕಿನಲ್ಲಿ, ಯಾವ ಯಾವ ಭಾಗದಲ್ಲಿ, ಯಾವ ಯಾವ ಕ್ಷೇತ್ರದಲ್ಲಿ ನಾವು ಹಿಂದುಳಿದಿದ್ದೇವೆ, ಯಾವ ಕ್ಷೇತ್ರದಲ್ಲಿ ಏನು ಕೆಲಸ ಆದರೆ ಅವರು ಎಲ್ಲರ ಜೊತೆ ಕಾಲು ಹಾಕಿ ನಡೆಯುವುದಕ್ಕೆ ಆಗುತ್ತದೆ ಎಂದು ಹೇಳಿ ಒಂದು ಮಾರ್ಗಸೂಚಿಯನ್ನು ನಮಗೆ ಕೊಟ್ಟಂಥ ಧೀಮಂತರು ಪ್ರೊಫೆಸರ್ ನಂಜುಂಡಪ್ಪನವರಾಗಿದ್ದಾರೆ. ನಾವ್ಯಾಕೆ ಅಂಥವರ ವರದಿ ಬಗ್ಗೆ ಇಲ್ಲಿ ಚರ್ಚೆ ಮಾಡಲಿಲ್ಲ ಎನ್ನುವುದೊಂದೇ ನಮಗೆ ಇರುವ ಸಂಕಟ. ಕಲಾಂ ಭಾಷಣದ ಬಗ್ಗೆ ಚರ್ಚೆ. ಅನಗತ್ಯ ಎಂದು ಹೇಳುವುದಕ್ಕಿಂತ, ನಾವೇ ಮಾಡಿದಂಥ ಒಂದು ಕಮಿಟಿ, ಅದರ ಶಿಫಾರಸ್ಸುಗಳು, ಅವುಗಳ ಬಗ್ಗೆ ಇಲ್ಲಿ ಚರ್ಚೆ ಮಾಡಲೇ ಇಲ್ಲ. ಏತಕ್ಕೆ ಕಮಿಟಿ ಮಾಡಿದೆವು? ಡಾಃ ಮಹಿಷಿಯವರ ಕಮಿಟಿ ವರದಿ ಬಗ್ಗೆ ಯಾವತ್ತೂ ಇಲ್ಲಿ ಚರ್ಚೆ ಮಾಡಲೇ ಇಲ್ಲ. ಇವೊತ್ತು ಬೆಂಗಳೂರಿನಲ್ಲಿ ಉದ್ಯೋಗವನ್ನೇನೋ ಸೃಷ್ಟಿ ಮಾಡಿದ್ದೇವೆ. ಆದರೆ ಕನ್ನಡಿಗರಿಗೆ ಎಷ್ಟರಮಟ್ಟಿಗೆ ಉದ್ಯೋಗ ಕೊಡಿಸಿದ್ದೇವೆ ಎಂದು ನಮಗೆ ಹೇಳುವುದಕ್ಕೇ ಆಗುತ್ತಿಲ್ಲ. ಯಾರ ಮೇಲೂ ಈ ಬಗ್ಗೆ ನಿರ್ಬಂಧ ಮಾಡುವುದಕ್ಕೆ ನಮಗೆ ಆಗಲಿಲ್ಲ. ಕಲಾಂರವರು ಹೇಳಿರುವ ಅನೇಕ ಅಂಶಗಳು ಈ ರಾಜ್ಯದ ಯೋಜನೆಯಲ್ಲಿ ಈಗಾಗಲೇ ಒಳಗೊಂಡಿದೆ ಎಂಬುದು ನನ್ನ ಭಾವನೆ. ಮಾನ್ಯ ಅಧ್ಯಕ್ಷರೆ, ನೀರಿನ ಬಗ್ಗೆ ಮಾತನಾಡುತ್ತಾ ನಾನು ಆಗಲೇ ಹೇಳಿದೆ, ಪಾಪ ಅವರು ಇನ್ನೂ ರೇನ್‌ವಾಟರ್ ಹಾರ್ವೆಸ್ಟ್ ಮಾಡುವಂಥ ಮಟ್ಟದಲ್ಲಿಯೇ

ಮಾತನಾಡುತ್ತಿದ್ದಾರೆ. ನಾವು ಮುಂದಕ್ಕೆ ಹೋಗಬೇಕಾಗಿದೆ. ಕರ್ನಾಟಕದ ಮತ್ತು ಆಂಧ್ರಪ್ರದೇಶದಲ್ಲಿರುವ ಲಿಂಕೇಜ್ ಆಫ್ ಟ್ಯಾಂಕ್ಸ್ ಅಥವಾ ರಿಸರ್ವಾಯರ್ಸ್ ಕೆರೆಗಳೇನಿವೆ ಅದನ್ನೇ ನಾವು ಕೃಷ್ಣದೇವರಾಯರ ಕಾಲದಲ್ಲಿ ಮಾಡಿದ್ದನ್ನು ಉಳಿಸಿಕೊಂಡು ಹೋಗಿದ್ದರೆ ಕರ್ನಾಟಕ ಬರಡು ಆಗುತ್ತಲೇ ಇರಲಿಲ್ಲ. ಕರ್ನಾಟಕಕ್ಕೆ ನಾವು ಬರಡು ಮಾಡಿದ್ದೆಲ್ಲಿ; ನಮ್ಮ ಕೆರೆಗಳಿಗೆ ನಾವು ನೀರು ಬರದ ಹಾಗೆ ಮಾಡಿದ್ದುವು. ಕರ್ನಾಟಕಕ್ಕೆ ನಾವು ಬರಡು ಮಾಡಿದ್ದೆಲ್ಲಿ? ನಮ್ಮ ಎಲ್ಲಾ ಫಾರೆಸ್ಟ್‌ಗಳನ್ನು ನಿರ್ನಾಮ ಮಾಡಿದ್ದೇವೆ. ಎಲ್ಲಿ ಹಸಿರು ಇರಬೇಕಾಗಿತ್ತೋ, ನಮ್ಮ ಭಾಗ ಬಹಳ ತಂಪಾಗಿ ಇರಬೇಕಾದ ನಮ್ಮ ಭಾಗದಲ್ಲಿ ಮರ ಕಡಿದು ಮೈನ್ಸ್ ಶುರು ಮಾಡಿದಂದಿನಿಂದ ನಮ್ಮ ಕರ್ನಾಟಕವನ್ನು ಎರಡನೆಯ ರಾಜಸ್ಥಾನ, ಗುಜರಾತ್ ಮಾಡುವುದಕ್ಕೆ ಪ್ರಾರಂಭ ಮಾಡಿದ್ದೇವೆ.

ಗುಜರಾತ್‌ನವರು ಬುದ್ಧಿವಂತರಾದರು, ಅವರು ಹೊರಗಿನಿಂದ ಹಣವನ್ನಾದರೂ ತಂದು ಬೇರೆ ಕಡೆ ಇನ್‌ವೆಸ್ಟ್ ಮಾಡಿದರು. ಅಲ್ಲಿ ಹುಟ್ಟಿದ ಮಗ ಒಬ್ಬ ದುಬೈಗೆ, ಯಾವುದೋ ಗಲ್ಫ್ ಕಂಟ್ರೀಸ್‌ಗೆ ಹೋಗಿಬಿಟ್ಟು ಅಲ್ಲಿಂದ ಹಣವನ್ನು ವಾಪಸ್ಸು ಕಳುಹಿಸಿಯಾದರೂ ಇವತ್ತು Gujarat is number one state which is receiving foreign investment. ಇಂಡಿವಿಜಿಯಲ್ ಆಗಿ, ನಾನು ಎಂಎಲ್‌ಸಿಗಳ ವಿಷಯ ಮಾತನಾಡುವುದಿಲ್ಲ. ಅಷ್ಟು ಅಭಿಮಾನ ಇಟ್ಟುಕೊಂಡು ನರ್ಮದಾ ವ್ಯಾಲ್ ಪ್ರಾಜೆಕ್ಟ್‌ಗೆ ದುಡ್ಡು ಬೇಕೆಂದರೆ ಆ ಸ್ಟೇಟ್‌ನಲ್ಲಿ ಎಂಟು ದಿವಸಗಳಲ್ಲಿ ಜನರೇಟ್ ಆಗುತ್ತದೆ. ಆ ಅಭಿಮಾನ ಇಟ್ಟುಕೊಂಡಿದ್ದರಿಂದಲೇ ಆ ರಾಜ್ಯ ಬೆಳೆಯಿತು. ಆದರೆ ನಾವಿಲ್ಲಿ ಏನು ಆಗಿದ್ದೇವೆ? "project has to be funded" ಕುಳಿತುಕೊಂಡು ಚರ್ಚೆ ಮಾಡುತ್ತಿದ್ದೇವೆ ಅಂದರೆ ಅದಕ್ಕೆ ಹೇಗೆ ಫಂಡ್ ಆಗುತ್ತದೆ ಎಂದು ನಾವು ಚರ್ಚೆ ಮಾಡಬೇಕಾಗಿರುವುದು. ನನಗೆ ಏನೋ ಒಂದು ಸುಕೃತ; ಸ್ಯಾಮ್ ಪಿಟ್ರೋಡ ಅವರ ಸಭೆಯಲ್ಲಿ ನಾನು ಕುಳಿತುಕೊಂಡಿದ್ದೆ. ಅಲ್ಲಿ ಚರ್ಚೆಯನ್ನು ಮಾಡುತ್ತಿದ್ದಾಗ ಅವರು ಒಂದು ಮಾತನ್ನು ಹೇಳಿದರು. ಡಿಯರ್ ಫ್ರೆಂಡ್ಸ್, ಇಂಡಿಯಾ ದೇಶದಲ್ಲಿ ಒಬ್ಬೊಬ್ಬ ವ್ಯಕ್ತಿನೂ ಇಂಡಿಯಾ ದೇಶದ ಯೋಜನೆ ಮಾಡಬಲ್ಲ ಎಂದು ನನಗೆ ಗೊತ್ತಿದೆ. ಆದರೆ ನನ್ನ ದುರಾದೃಷ್ಟ ಅದನ್ನು ಅನುಷ್ಠಾನ ಮಾಡುವಂತಹ ಒಬ್ಬರೂ ಸಿಗುತ್ತಿಲ್ಲ ನನಗೆ, ಅದಕ್ಕೆ ನಾನು ಅಮೇರಿಕಾದಿಂದ ಇಲ್ಲಿಗೆ ಬಂದಿದ್ದೇನೆ ಎಂದರು. ಟೆಲಿಫೋನ್ ಕಮ್ಯುನಿಕೇಷನ್ ವ್ಯವಸ್ಥೆಯನ್ನು ಮಾಡಲಿ ಎಂದು ಹೇಳಿ ಅವರನ್ನು ಅಮೆರಿಕಾದಿಂದ

ಕರೆದುಕೊಂಡು ಬಂದಾಗ ಸಿ-ಡಾಟ್ ಸಿಸ್ಟಂ ಇಲ್ಲಿ ಇಂಟ್ರಡ್ಯೂಸ್ ಆಗುವಾಗ ಅವರು ಒಂದು ಮಾತು ಹೇಳಿದರು. " I am finding a man, who can implement the schemes. I know every Indian can make a project for the country". ಅಂತ ಆ ಸ್ಥಿತಿಯಲ್ಲಿ ಇವತ್ತು ನಾವಿದ್ದೇವೆ. ನಮ್ಮ ಊರಿಗೆ ಬನ್ನಿ, ನಮ್ಮ ಊರಿನಲ್ಲಿ ಬೀಡಿ ಸೇದುವ ಹುಡುಗನೂ ಕೂಡ ಈ ದೇಶದ ಯೋಜನೆಯನ್ನು ಈ ರೀತಿ ಮಾಡಬೇಕು, ಗಂಗಾ ಕಾವೇರಿ ಲಿಂಕ್ ಆಗಬೇಕು, ಗೋದಾವರಿ ಲಿಂಗ್ ಆಗಬೇಕು, ಎಲ್ಲಾ ಹಳ್ಳಿಗಳಲ್ಲಿ ಇವತ್ತು ಕುಡಿಯುವ ನೀರು ಚೆನ್ನಾಗಿ ಇರಬೇಕು. ಎಲ್ಲಾ ಹಳ್ಳಿಗಳಿಗೂ ಆಸ್‌ಫಾಲ್ಟೆಡ್ ರೋಡು ಬೇಕು, ಬಸ್ಸುಗಳನ್ನು ಬಿಡಬೇಕು ಎಂದು ಹೇಳುತ್ತಾರೆ. ಆದರೆ ಅದನ್ನು ಮಾಡುವವರು ಯಾರು ಎನ್ನುವ ಪ್ರಶ್ನೆ ನಮ್ಮ ಮುಂದೆ ಇರುವುದು. ಇಲ್ಲಿ ಕಲಾಂ ಸಾಹೇಬರ ಭಾಷಣದ ಬಗ್ಗೆ ಚರ್ಚೆ ಮಾಡಿದರೆ ಅದರಲ್ಲಿ 10 ಪರ್ಸೆಂಟ್, 20 ಪರ್ಸೆಂಟ್, 30 ಪರ್ಸೆಂಟ್ ಆದರೂ ಇಂಪ್ಲಿಮೆಂಟ್ ಆಗುತ್ತದೆಯೋ ಎಂಬುದು ನಮ್ಮ ಪ್ರಶ್ನೆ. ಅದರ ಬಗ್ಗೆ ಸರ್ಕಾರದವರು ಅವರ ಕಾರ್ಯಕ್ರಮಗಳೊಳಗೆ ಸೇರಿಸಿಕೊಂಡು, ಅದಕ್ಕೆ ನಾವು ಫಂಡ್ ಮಾಡುತ್ತೇವೆಂದು ಹೇಳಿ, ಕನಿಷ್ಠ ಮಾನ್ಯ ರಾಜ್ಯಪಾಲರ ಭಾಷಣದಲ್ಲಿಯಾದರೂ ಇಲ್ಲಿ ಒಂದು ಘೋಷಣೆ ಮಾಡದಿದ್ದರೆ ನಿಜವಾಗಿ ಅದು tribute to our Honerable President of India. ಅವರು ಏನು ಭಾಷಣ ಮಾಡಿದರು ಅದಕ್ಕೆ ವ್ಯತಿರಿಕ್ತವಾಗಿ ಅಥವಾ ಅದಕ್ಕೆ ಪೂರಕವಾಗಿ ಒಂದು ಭಾಷಣ ಮಾಡಬೇಕೆಂದು ನಾವು ನಿಂತಿದ್ದೇವೆ. ಮಾನ್ಯ ಅಧ್ಯಕ್ಷರೆ, ಕುಡಿಯುವ ನೀರಿನ ವಿಚಾರದಲ್ಲಿ ನಾನು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ, ಮಾನ್ಯ ಕಲಾಂ ಸಾಹೇಬರು ಹೇಳಿದರೆಂದಾದರೂ ಮಾಡಿ ಅಥವಾ ತಾವಾದರೂ ಮಾಡಿ. ಸರ್ಪ್ಲಸ್ ವಾಟರ್ ಏನು ಸಮುದ್ರವನ್ನು ಸೇರುತ್ತಿದೆ ಅದರಿಂದ ಹೇಗಾದರೂ ಮಾಡಿ ನಮ್ಮ ಕೆರೆಗಳನ್ನು ತುಂಬಿಸಿ, ಸಾಕು. ನಮ್ಮ ಬೋರ್‌ವೆಲ್‌ಗಳು ಡ್ರೈ ಆಗುತ್ತಿವೆ. ನಮ್ಮಲ್ಲಿ ಅಂದರೆ ತುಮಕೂರು, ಕೋಲಾರ ಹಾಗೂ ಚಿತ್ರದುರ್ಗ ಇಂತಹ ಕಡೆಗಳಲ್ಲಿ ನೀರಿಗಾಗಿ 800 ಅಡಿ ಆಳ ಹೋಗುತ್ತಿದೆ. ಅದನ್ನು ಏನಾದರೂ ರೀ ಚಾರ್ಜ್ ಮಾಡಿಸಿ. ನೀವು ಆರ್‌ಡಿಪಿಆರ್ ಇಲಾಖೆಯಲ್ಲಿ ಒಂದೊಂದು ಊರಿಗೆ ಬೋರ್‌ವೆಲ್ ಎಷ್ಟು ಹಾಕಿದಿರಿ ಎನ್ನುವ ದಾಖಲೆ ತೆಗೆಸಿರಿ, ಆ ಹಣ ಎಲ್ಲವನ್ನೂ ಕ್ರೋಢೀಕರಿಸಿದರೂ ನೀವು ಈ ನೀರನ್ನು ತಂದು ನಮ್ಮ ಕೆರೆಗಳಿಗೆ ಬಿಡಬಹುದಾಗಿತ್ತು. ಎಲ್ಲಾದರೂ ಒಂದು ಪಾಸಿಟೀವ್ ಡಿಸಿಷನ್ ತೆಗೆದುಕೊಳ್ಳಿ. ಆ ಒಂದು ವಿಲ್‌ಪವರ್

ತೋರಿಸಿಕೊಳ್ಳಿ. ನಾನು ಕರ್ನಾಟಕದ ಕೆರೆಗಳನ್ನು ತುಂಬುತ್ತೇನೆ' ಎಂದು. ಹಿಂದೆ ಏನು ಮಳೆಯಿಂದ ತುಂಬುತ್ತಿದ್ದ ಕೆರೆಗಳಿತ್ತು, ಅವುಗಳನ್ನು ಯಾವುದಾದರೂ ನದಿ ಜೋಡಣೆಗಳಿಂದ ಎಲ್ಲಿಂದನಾದರೂ ಡೈವರ್ಟ್ ಮಾಡಿ ಆ ಕೆರೆ ತುಂಬಿಸುವ ಕೆಲಸ ಮಾಡಿ ಕನಿಷ್ಠ ಭೂಗರ್ಭದಲ್ಲಿ ಇರುವಂತಹ ನೀರಿನ ಮಟ್ಟವನ್ನು ಕಾಪಾಡುತ್ತೇವೆನ್ನುವ ಕೆಲಸವಾಗಬೇಕು. ಇನ್ನು ಎರಡನೆಯದಾಗಿ ಟೂರಿಸಂ ಬಗ್ಗೆ ಬಹಳ ಚೆನ್ನಾಗಿ ಮಾತನಾಡಿದ್ದಾರೆ. ವಿಜಾಪುರದಿಂದ ಹಿಡಿದು ಮೈಸೂರು ಶ್ರೀರಂಗಪಟ್ಟಣದವರೆಗೂ ಮಾತನಾಡಿದ್ದಾರೆ. He has spoken about Gumbaz. ಅದರಲ್ಲಿ ನಾನು ತೆಗೆದುಗೊಂಡಿದ್ದು, ಕರ್ನಾಟಕ ಟೂರಿಸಂ ಅನ್ನು ಅಟ್ರಾಕ್ಟ್ ಮಾಡುತ್ತಿದ್ದುದು ಕರ್ನಾಟಕದ ಗ್ರೀನರಿ ಬಿಲ್ಟ್‌ನಲ್ಲಿ. ಕರ್ನಾಟಕದಲ್ಲಿ ಟೂರ್ ಮಾಡುತ್ತಿದ್ದುದ್ದು ಅಂದರೆ ಶಿವಮೊಗ್ಗ, ಸೌತ್ ಕೆನರಾದಲ್ಲಿ ಆ ಬೆಲ್ಟ್‌ನಲ್ಲಿ ಹೋಗುತ್ತಿದ್ದೆವು ಎಂದರೆ..........

ಶ್ರೀ ಎಸ್. ಕುಮಾರ್ ಬಂಗಾರಪ್ಪ: ಮಾನ್ಯ ಸದಸ್ಯರು ಒಂದು ನಿಮಿಷ ಈಲ್ಡ್ ಆಗಬೇಕು. ಮಾನ್ಯ ಅಧ್ಯಕ್ಷರೆ, ನಾನು ಬಂದು ವಿಚಾರವನ್ನು ರೆಫರ್ ಮಾಡುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಅಧ್ಯಕ್ಷರು ಪ್ರೆಸಿಡೆನ್ಸಿಯಲ್ ಅಡ್ರೆಸ್ ಮೇಲೆ ಮಾಡಿರುವಂತಾದ್ದಕ್ಕೆ

> "I am absolutely clear in my mind that any debate on the floor of the House which brings the name of the President into any controversy or which tends to disturb the relationship between the President and the Council of Minister must be avoided at all costs in wider internet of the nation. We are still in the process of developing sound conventions and traditions. Let us not, in the heat of moment, do something which might hamper this process. This is a very clear indication.

ನಾವು ಪ್ರೆಸಿಡೆನ್ಸಿಯಲ್ ಅಡ್ರೆಸ್ ಬಗ್ಗೆ ಡಿಸ್‌ಕಷನ್ ಮಾಡಬೇಕಾದರೆ ಅರ್ಲಿಯರ್ ಆಗಿ ಏನು ಪಾರ್ಲಿಮೆಂಟ್‌ನಲ್ಲಿ ಡಿಸ್‌ಕಷನ್ ಆಗಿರುವಂತಹ ವಿಚಾರಗಳ ಬಗ್ಗೆ ಇಲ್ಲಿ ಯಾವುದೋ ಒಂದು ಮೊಮೆಂಟ್‌ನಲ್ಲಿ, ಮಾನ್ಯ ಮಾಧುಸ್ವಾಮಿಯವರು ಮೊದಲು ಮಾತನಾಡಬೇಕಾದರೆ ಅದನ್ನು ಪ್ರಸ್ತಾಪ ಮಾಡಿದರು. ನಾವು ಮಾನ್ಯ ರಾಷ್ಟ್ರಪತಿಗಳ ಭಾಷಣದ ಮೇಲೆ ಮಾತನಾಡತಕ್ಕಂಥ ಸಂದರ್ಭದಲ್ಲಿ ಅವರು ಮಂಡನೆ ಮಾಡಿರತಕ್ಕಂಥ ಹತ್ತು

ಹಲವಾರು ವಿಚಾರಗಳ ಬಗ್ಗೆ ಡಿಸ್‌ಕಷನ್ಸ್ ಮಾಡುವಂತಹ ಸಂದರ್ಭದಲ್ಲಿ ಮಾನ್ಯ ರಾಷ್ಟ್ರಪತಿಗಳ ಹೆಸರನ್ನು ಪದೇ ಪದೇ ತೆಗೆದುಕೊಳ್ಳುವಂತಹ ಸಂದರ್ಭದಲ್ಲಿ ನಾವು ಮಾಡತಕ್ಕಂಥ ವಾದಗಳೇನಿವೆ ಅದಕ್ಕೆ ಮಾನ್ಯ ಮಾಧುಸ್ವಾಮಿಯವರೇ, ನಾನು ನಿಮ್ಮನ್ನು ಸಂಪೂರ್ಣವಾಗಿ ಬೆಂಬಲಿಸುತ್ತೇನೆ. ನಾವು ಇನಿಷಿಯಲ್ ಆಗಿ ಕರ್ನಾಟಕದಲ್ಲಿ ಇಷ್ಟು ವರ್ಷಗಳಿಂದ ಏನು ಡಿಸ್‌ಕಷನ್ ಮಾಡುತ್ತಾ ಬಂದಿದ್ದೇವೆ, ಮೊದಲು ಅದನ್ನು ಡಿಸ್‌ಕಷನ್ ಮಾಡಿಕೊಂಡು ಬಿಟ್ಟು ಆಮೇಲೆ ನಾವು ಇದಕ್ಕೆ ಸಂಪೂರ್ಣವಾಗಿ ಸಪೋರ್ಟ್‌ಗೆ ನಿಂತಿದ್ದೇವೆ ಎಂದು ಹೇಳುವುದು ಬಹಳ ಸೂಕ್ತವೆನ್ನುವುದು This is a very clear indication. ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ತಾವು ಇದನ್ನೇನು ಸೂಚನೆ ಮಾಡಿದ್ದೀರಿ, ಮಾನ್ಯ ರಾಷ್ಟ್ರಪತಿಯವರು ಏನು ಹೇಳಿದ್ದಾರೆ ಇದಕ್ಕೆ ಸಂಪೂರ್ಣವಾಗಿರುವಂತಹ ಬೆಂಬಲವನ್ನು ನಮ್ಮ ಮಾನ್ಯ ವಿರೋಧ ಪಕ್ಷದ ನಾಯಕರು ಈಗಾಗಲೇ ಹೇಳಿದ್ದಾರೆ. ಆದರೆ ಹೀಟ್ ಆಫ್ ಡಿಸ್‌ಕಷನ್‌ನಲ್ಲಿ ನಾವು ಎಲ್ಲೋ ಒಂದು ಕಡೆ ತೆಗೆದುಕೊಂಡು ಹೋಗಿ ನಿಲ್ಲಿಸಿ ಕೊನೆಗೆ ಮಾನ್ಯ ರಾಷ್ಟ್ರಪತಿಯವರು ಮಾಡಿರತಕ್ಕಂಥ ಭಾಷಣಕ್ಕೆ ಕರ್ನಾಟಕದಲ್ಲಿ ಏನೋ ವಿರುದ್ಧವಾಗಿದೆ ಅಥವಾ ಮತ್ತೊಂದು ರೀತಿಯಲ್ಲಿ ಇದನ್ನು ಮಾತನಾಡುತ್ತಿದ್ದೇವೆ, ಅನ್ನುವುದಕ್ಕಿಂತ ಅಲ್ಟಿಮೇಟ್ ಆಗಿ ಏನು ಮಾಡುತ್ತಿದ್ದೇವೆ ನಾವು That is what I am telling. ಹಣಕಾಸನ್ನು ನಾವು ಎಷ್ಟು ಒದಗಿಸಿದ್ದೇವೆ ನಮ್ಮ ಮಾನ್ಯ ರಾಷ್ಟ್ರಪತಿಯವರು ಹೇಳಿರುವಂತಹ ಅಂಶಗಳಿಗೆ ಎನ್ನುವುದನ್ನು ನೋಡಬೇಕೇ ಹೊರತು, ಆದರೆ ನಾವು ಇಲ್ಲಿ no controversies should be taken up on the Presidential Address of our nation. That is my request.

ಶ್ರೀ ಕೆ. ಆರ್. ರಮೇಶ್ ಕುಮಾರ್: ಮಾನ್ಯ ಅಧ್ಯಕ್ಷರೆ, that is Articles 86 and 87 of the Constitution.

ಮಾನ್ಯ ರಾಷ್ಟ್ರಪತಿಯವರು ಲೋಕಸಭೆ ಮತ್ತು ರಾಜ್ಯಸಭೆಯ ಜಂಟಿ ಸದನವನ್ನು ಉದ್ದೇಶಿಸಿ ಏನು ಭಾಷಣವನ್ನು ಮಾಡುತ್ತಾರೆ ಅದರ ರೆಫರೆನ್ಸ್ ಇದು. This was a special occassion.

ಶ್ರೀ ಎಸ್. ಕುಮಾರ್ ಬಂಗಾರಪ್ಪ: ಅವರು ಏನು ಹೇಳುವುದು ಎಂದರೆ 'In the interest of the nation anything. . . . .

SRI K.R. RAMESH KUMAR: True. That is whatever you read out, it is absolutely with reference to the speech delivered by the President of India to the joint session of the Lok Sabha and the Rajya Sabha.

SRI S. KUMAR BANGARAPPA: I am talking about the Presidential Right to information, where her has not addressed.

ಶ್ರೀ ಜೆ.ಸಿ. ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ, That pertains to parliament. ಏಕೆಂದರೆ ಪ್ರೆಸಿಡೆನ್ಸಿಯಲ್ ಅಡ್ರೆಸ್ ಎನ್‌ವಿಸೇಜ್ ಆಗಿರುವುದು ಪಾರ್ಲಿಮೆಂಟ್‌ನಲ್ಲಿ ಮಾತ್ರ.

SRI K.R. RAMESHKUMAR: Only with regard to Article 86.

SRI S. KUMAR BANGARAPPA: I totally agree.

SRI J.C. MADHUSWAMY: ಪಾರ್ಲಿಮೆಂಟ್ ಜಾಯಿಂಟ್ ಸೆಷನ್ ಅಸೆಂಬ್ಲಿಯಲ್ಲಿ ಅಡ್ರೆಸ್ ಮಾಡುವುದು ಕಾನ್ಸ್‌ಟಿಟ್ಯೂಷನಲ್ಲಿ ಇಲ್ಲ.

SRI S. KUMAR BANGARAPPA : That is what I am telling you. Whenever the President has made address. . . ..

ಶ್ರೀ ಕೆ.ಆರ್. ರಮೇಶ್‌ಕುಮಾರ್: ಜಾಯಿಂಟ್ ಬಿಎಸಿ ಏನು ಕರೆದಿದ್ದರು. ಅದರಲ್ಲಿ We did contemplate over this. This was a special occasion. ನಮ್ಮ ಇನ್‌ವಿಟೇಷನ್ ಮೇಲೆ ಅವರು ಇಲ್ಲಿಗೆ ಬಂದಿದ್ದರು. He has addressed the Joint session. So, as a courtesy, we are expressing our gratitude. Disagreement with the views of the President need not necessarily mean that we disrespect the same or we are trying to allege against him. So, I think, you can go ahead. He was right in pointing it out.

ಶ್ರೀ ಜೆ.ಸಿ. ಮಾಧುಸ್ವಾಮಿ: ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಇದೆಲ್ಲಾ ಪಾಯಿಂಟ್ ಔಟ್ ಮಾಡಿ, ಇಲ್ಲ ಇದರ ಬಗ್ಗೆ ಮುಕ್ತವಾಗಿ ಮಾತನಾಡಬಹುದು ಎಂದು ಹೇಳಿದ ಮೇಲೆ ಮಾತನಾಡುತ್ತಿದ್ದೇನೆ. It was all discussed there. ನಾವು ಹೇಗೆ ಅದರ ಬಗ್ಗೆ ಮಾತನಾಡುವುದು ಎಂದು ಕೇಳಿದ್ದೇವೆ. And after an agreement, ಇಲ್ಲ ಮಾತನಾಡಬಹುದು ಎಂದು ಹೇಳಿದ ಮೇಲೆ ಮಾತನಾಡುತ್ತಿದ್ದೇವೆ.

ಶ್ರೀ ಎಸ್. ಕುಮಾರ್ ಬಂಗಾರಪ್ಪ: ತಾವು ಮಾಡಿರುವಂತಹ ನಿರ್ಧಾರ ನಮಗೆಲ್ಲರಿಗೂ ಗೊತ್ತಾಗಬೇಕೆಂದರೆ, on what basis we are talking, beccause there is no basis here.

ಶ್ರೀ ಜೆ.ಸಿ. ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ No, no. There is no basis to discuss here. ಈ ಬಾಷಣವನ್ನು ಚರ್ಚೆ ಮಾಡುವುದಕ್ಕೆ ಬೇಸ್ ಇಲ್ಲ ಅಸೆಂಬ್ಲಿಗೆ. This is a special occassion. ಅವರೆ ರೂಲಿಂಗ್ ಕೊಟ್ಟಮೇಲೆ ನಾನು ನೀರಿನ ಯೋಜನೆ ಬಗ್ಗೆ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ. ಇವತ್ತು ನಮಗೆ ಕೆರೆಗಳ ಜೋಡಣೆಯಾಗಬೇಕಾಗಿದೆ. ಬಯಲು ಸೀಮೆಯಲ್ಲಿ ನಾವೇನು ಬದುಕಿದ್ದೇವೆ, ನಮಗೆ ನದಿ ನೀರು ಬರುವುದು ಬಹಳ ಕಡಿಮೆ. ನಮ್ಮ ಮಾನ್ಯ ಈಶ್ವರಪ್ಪನವರು ಮಂತ್ರಿಗಳಾಗಿದ್ದಾರೆ. ನಾವು ಬಹಳ ಕೇಳುವುದಿಲ್ಲ, ನಮ್ಮ ಜಮೀನಿಗೆ ನೀರು ಕೊಡಬೇಡಿ. ಆದರೆ ಹೇಗಾದರೂ ಮಾಡಿ ಶಿವಮೊಗ್ಗದಿಂದ ಹಿಡಿದು ಕೋಲಾರದವರೆಗೆ ಕೆರೆಗಳನ್ನು ತುಂಬುವ ಕೆಲಸವನ್ನು ಮಾಡಬೇಕು. ನೀವು ಗ್ರಾಮೀಣ ಪ್ರದೇಶವನ್ನು "ಪುರಾ" ಎಂದು ಹೇಳಿ ಒಂದು ಕಾರ್ಯಕ್ರಮವನ್ನು ಮಾನ್ಯ ರಾಷ್ಟ್ರಪತಿಗಳು ಹೇಳಿದ್ದಾರೆ. "Providing Urban facilities to rural area" ಫೆಸಿಲಿಟೀಸ್ ಪ್ರೊವೈಡ್ ಮಾಡಿಬಿಟ್ಟರೆ ನಾವು ರೂರಲ್ ಏರಿಯಾದವರು ಬದುಕಲಿಲ್ಲ. ಎಕನಾಮಿಕ್ ಗ್ರೋಥ್ ಆಗಬೇಕು. ನಮ್ಮ ಕಾಲಮೇಲೆ ನಾವು ನಿಂತುಕೊಳ್ಳಬೇಕು. ನಾವು ಬೇರೆಯವರ ಜೊತೆ ಕಾಂಪೀಟ್ ಮಾಡುವುದಕ್ಕೆ ಪ್ರಾರಂಭವಾಗಬೇಕು. ನೂರು ರೂಪಾಯಿಗೆ ಬೆಂಗಳೂರಿನಲ್ಲಿ ಬೆಲೆ ಇಲ್ಲ. ಆದರೆ ಇವತ್ತು ನಮ್ಮ ಹಳ್ಳಿಯಲ್ಲಿ ನೂರು ರೂಪಾಯಿ ಇಲ್ಲ. 500 ರೂಪಾಯಿಗೆ ಬೆಲೆ ಇಲ್ಲ ಈ ಊರಿನಲ್ಲಿ. ಆದರೆ ನಮಗೆ 100 ರೂಪಾಯಿ ಇಲ್ಲ. ನಿಮ್ಮ ಅಂಗನವಾಡಿ ಕಾರ್ಯಕರ್ತೆ 700 ಚಿಲ್ಲರೆ ರೂಪಾಯಿಗೆ ಕೆಲಸ ಮಾಡುತ್ತಾರೆ. ಇವತ್ತು ವಿಲೇಜ್ ಅಕೌಂಟೆಂಟ್ ಸಹಾಯಕನಿಗೆ 700 ರಿಂದ 800 ರೂಪಾಯಿ ಸಂಬಳ ಕೊಡುತ್ತೀರಿ. ಹೆಣ್ಣುಮಕ್ಕಳು ಇವತ್ತೇನು ಗಾರ್ಮೆಂಟ್ಸ್‌ಗೆ ಹೋಗುತ್ತಾರೆ, ಅವರು 800 ರಿಂದ 1200 ರೂಪಾಯಿಗೆ ಕೆಲಸ ಮಾಡಬೇಕಾಗುತ್ತದೆ. ಅದರಲ್ಲಿ ಒಂದು ದಿವಸ ಆಬ್ಸೆಂಟ್ ಆದರೆ ಸಂಬಳ ಕಡಿತ ಆಗುತ್ತದೆ. ಒಂದು ಗಂಟೆಗೆ ಖರ್ಚು ಮಾಡುವಂತಹ ಬೆಂಗಳೂರಿನಲ್ಲಿ, ಇವತ್ತು ನಾವು ನಮ್ಮ ಹಳ್ಳಿಯಲ್ಲಿ ಮಕ್ಕಳನ್ನು ಓದಿಸುವುದಕ್ಕೆ ಆಗುವುದಿಲ್ಲ. ಅರ್ಬನ್ ಫೆಸಿಲಿಟೀಸ್ ಎಲ್ಲಾ ಕೊಟ್ಟುಬಿಡುತ್ತೇವೆ ಎಂದು ನಿರ್ಧಾರವನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ನೀವು ಜನಸಂಖ್ಯೆ

ಆಧಾರ ಮಾಡಿ ಸ್ಕೂಲ್ ಕೊಡುತ್ತೀರಿ. ನಮ್ಮ ಊರುಗಳಲ್ಲಿ ಜನಸಂಖ್ಯೆಯಿಲ್ಲ. ಒಂದು ಕಡೆ ಫ್ಯಾಮಿಲಿ ಪ್ಲಾನಿಂಗ್ ಮಾಡಿಕೊಂಡು ಬನ್ನಿಯೆಂದು ಹೇಳಿ, ಇನ್ನೊಂದು ಕಡೆ ಇಂಗ್ಲೀಷ್ ಮೀಡಿಯಮ್ ಅನ್ನು ಟೌನ್‌ಗಳಲ್ಲಿ ಇಂಟ್ರಡ್ಯೂಸ್ ಮಾಡಿ, ನಮ್ಮಲ್ಲಿ ಶಕ್ತಿ ಇರುವವರೆಲ್ಲಾ ಮಕ್ಕಳನ್ನು ಆಟೋರಿಕ್ಷಾಗಳಲ್ಲಿ ಟೌನ್‌ಗಳಿಗೆ ಕಳುಹಿಸುತ್ತಿದ್ದಾರೆ. ಇದರಲ್ಲಿ ಅಲ್ಪಸ್ವಲ್ಪ ಕಷ್ಟದಲ್ಲಿರುವ ಮಕ್ಕಳು ಓದುತ್ತಾರೆಂದರೆ, ಕುಟುಂಬ ಕಲ್ಯಾಣ ಕಾರ್ಯಕ್ರಮಗಳು ಆಗಿ ಮಕ್ಕಳು ಇಲ್ಲದ ಹಾಗೆ ಆಗಿದೆ. 5,6,7,8, ನೇ ತರಗತಿಯ ಮೇಡಂಗಳಿಂದ ಹಿಡಿದು ಅಂಗನವಾಡಿಯ ಫೀಲ್ಡ್‌ನಿಂದ ಹಿಡಿದು ಸ್ಕೂಲ್‌ನವರೆಗೂ 12,13, ಮಕ್ಕಳು ಇರುತ್ತಾರೆ. ನೀವು ಪ್ರತಿ 40 ಸ್ಟೂಡೆಂಟ್ಸ್‌ಗೆ ಒಬ್ಬ ಟೀಚರ್ ಎಂದು ನಾರ್ಮ್ಸ್ ಮಾಡುತ್ತೀರಿ. ಹೌದು, ನಾವು ಮೂರು ಕಿಲೋಮೀಟರ್ ನಾಲ್ಕು ಕಿಲೋಮೀಟರ್ ನಡೆಯುವಂಥಾದ್ದು, ನೀವು ತಪ್ಪಿಸಲೇ ಇಲ್ಲ. ಅದನ್ನು ತಪ್ಪಿಸಲು ಆಗಲಿಲ್ಲ, ಮಿನಿಮಮ್ ಫೆಸಿಲಿಟೀಸ್ ಒಂದು ಮಗು ಓದುವುದನ್ನು ನೀವು ರಿಲ್ಯಾಕ್ಸ್ ಮಾಡಿದ್ದೀರಾ? ಗ್ರಾಮೀಣ ಪ್ರದೇಶದಲ್ಲಿ ಎಷ್ಟೋ ಮಕ್ಕಳು ಇರಲಿ, ಅಲ್ಲಿ ಒಂದು ಟೀಚರ್ ಅನ್ನು ಕೊಡುತ್ತೇವೆಂದು ನೀವು ಹೇಳಿದ್ದೀರಾ? ಗ್ರಾಮೀಣ ಪ್ರದೇಶದಲ್ಲೂ ಕೂಡ ಮಕ್ಕಳಿಗೆ ಇಂಗ್ಲೀಷ್ ಬೋಧನೆಯನ್ನು ಆರಂಭ ಮಾಡುತ್ತೇವೆಂಬ ಬಗ್ಗೆ ಹೇಳಿದ್ದಿರಾ? The attraction towards English, ಎಲ್ಲಾದರೂ ಅವಾಯ್ಡ್ ಮಾಡುವುದಕ್ಕೆ ಟ್ರೈ ಮಾಡಿದ್ದೀರಾ? ಇಲ್ಲ, ರಾಜ್ಯದಲ್ಲಿ ಎಲ್ಲಾದರೂ ಕಂಪಲ್ಸರಿ ಕನ್ನಡದಲ್ಲಿ ಓದಬೇಕೆಂದು ಮಾಡಿದ್ದೀರಾ? ನಮ್ಮ ಮಕ್ಕಳು, ನಾವು ಇವತ್ತು ರಾಜ್ಯದಲ್ಲಿ ಪರದೇಶಿಗಳಾಗಿ ಬಿಟ್ಟಿದ್ದೇವೆ. ಇಲ್ಲಿ ಯಾರಿಗೆ ಶಕ್ತಿ ಇಲ್ಲ ಅವರು ಸರ್ಕಾರಿ ಶಾಲೆಗೆ ಹೋಗಬೇಕು. ಈಗ ಒಂದು ಯೂನಿಫಾರಂ ಅನ್ನು ಮಿಡ್ಡೇಮೀಲ್ಸ್ ಹೈಸ್ಕೂಲ್ ಹೆಣ್ಣು ಮಕ್ಕಳಿಗೆ ಕೊಡುತ್ತೇವೆಂದು ಹೇಳಿದ ಮೇಲೆ, ಈಗ ಹೈಸ್ಕೂಲ್‌ಗಳೆಲ್ಲಾ ಸ್ಟ್ರೆಂಥ್ ಆಗುತ್ತಿವೆ. ನೀವು ಏನು ಮಾಡಿದ್ದೀರಿ, ಒನ್ ಟು ಫೈ ಒಟ್ಟಿಗೆ ಇಟ್ಟಿರಿ. ನಮಗೆ what is the special provision ನೀವು ಸರ್ಕಾರದ ವತಿಯಿಂದ ಗ್ರಾಮೀಣ ಪ್ರದೇಶಕ್ಕೆ ಮಾಡಿದ್ದು? ರಸ್ತೆಗಳ ಬಗ್ಗೆ ಬೆಂಗಳೂರಿನಲ್ಲಿ ಒಂದು ಫ್ಲೈಓವರ್‌ಗೆ ಆಗುವ ಕಾಸ್ಟ್‌ಗೆ, ಇಡೀ ಜಿಲ್ಲೆಗಳ ರಸ್ತೆಯನ್ನು ನೀವು ಅಭಿವೃದ್ಧಿ ಮಾಡಬಹುದು. ತಾವು ಕಾವೇರಿ ನಾಲ್ಕನೇ ಹಂತಕ್ಕೆ ಮೂರು ಸಾವಿರ ನಾಲ್ಕು ನೂರು ಚಿಲ್ಲರೆ ಕೋಟಿ ರೂ. ಹಣವನ್ನು ಏನು ಖರ್ಚು ಮಾಡಿದ್ದೀರಿ. ಇದರಲ್ಲಿ ಇಡೀ ಕರ್ನಾಟಕ ರಾಜ್ಯದಲ್ಲಿರುವ ಹಳ್ಳಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಬಹುದಾಗಿತ್ತು. ನಾನು

ಬೆಂಗಳೂರಿನ ವಿರೋಧಿಯಲ್ಲ, ಆದರೆ ನಾನು ಒಂದು ಮೂಲಭೂತವಾದ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಇವತ್ತು ಬೆಂಗಳೂರಿನ ಕಾರ್ಪೋರೇಷನ್‌ನಲ್ಲಿ ಜನರೇಟ್ ಆಗಿರುವ ಹಣ ಹೇಗೆ ಖರ್ಚಾಗುತ್ತಿದೆಯೆಂಬ ಬಗ್ಗೆ ರಾಜ್ಯ ಸರ್ಕಾರ ಯಾವತ್ತಾದರೂ ಕೇಳಿದೆಯಾ? ಬೆಂಗಳೂರಿನಲ್ಲಿ ಡೆವಲಪ್‌ಮೆಂಟ್ ಆಗಿರುವ ವಾರ್ಡ್‌ಗೂ ಕೂಡ, ಒಂದು ವರ್ಷಕ್ಕೆ ಒಂದು ಕೋಟಿ ರೂಪಾಯಿಗಳ ಗ್ರಾಂಟ್ ತೆಗೆದು ಇಡುತ್ತಾರೆಂಬ ಬಗ್ಗೆ ನಾವು ಯಾವತ್ತಾದರೂ ಕೇಳಿದ್ದೇವಾ? ನಾವು ಹೇಳುವಂಥಾದ್ದು ಡೆವಲಪ್ ಆಗದೇ ಇರುವಂಥಾದ್ದಕ್ಕೆ ನೀವು ಹಣವನ್ನು ಖರ್ಚು ಮಾಡಿ, ನಾವು ಅದಕ್ಕೆ ಟೀಕೆ ಮಾಡುವುದಿಲ್ಲ. ಪ್ರತಿ ವಾರ್ಡ್‌ಗೂ ಒಂದು ಕೋಟಿ ರೂಪಾಯಿಗಳು ಇಡುವಂಥಾದ್ದು. ಎಂ.ಎಲ್.ಎ. ಗಳಾಗಿದ್ದರೂ ಕಾರ್ಪೋರೇಟರ್ ಆಗಿ ಏಕೆ ಕಂಟಿನ್ಯೂ ಆಗುತ್ತಾರೆಂಬ ಬಗ್ಗೆ ನಾವು ಚರ್ಚೆಯನ್ನು ಮಾಡಿದ್ದೇವಾ? ಈ ಕಾರ್ಪೋರೇಟರ್ ಕೆಲಸದಲ್ಲಿ ಯಾವ ಅಟ್ರ್ಯಾಕ್ಷನ್ ಇದೆಯೆಂಬುದನ್ನು ತಾವು ಯೋಚನೆ ಮಾಡಿದ್ದೀರಾ? ನಮ್ಮ ಗತಿ ಏನು? ರಾಜ್ಯ ಸರ್ಕಾರ ಬೆಂಗಳೂರು ಸಿಟಿಗೆ ಸಹಸ್ರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಲು ಕೊಡುತ್ತೀರಿ. ಅದಕ್ಕೆ ನಾವು ವಿರೋಧ ಮಾಡುವುದಿಲ್ಲ, ನಾವೂ ಬೆಂಗಳೂರಿಗೆ ಬಂದು ಹೋಗುತ್ತೇವೆ. ಆದರೆ ಇಲ್ಲಿ ಜನರೇಟ್ ಆಗುತ್ತಿರುವಂತಹ ಅಮೌಂಟ್ ಕಾರ್ಪೋರೇಷನ್ ಮಾಡುತ್ತಿರುವ ಕೆಲಸ, ಹಣ ಎಲ್ಲಿ ಹೋಗುತ್ತಿದೆ? ಅದೇ ಚಪ್ಪಡಿಯನ್ನು ಕೀಳು, ಅದೇ ಚಪ್ಪಡಿಯನ್ನು ಹಾಕುವುದು. ಅದೇ ಆಸ್‌ಫಾಲ್ಟ್ ಮೇಲೆ ಇನ್ನೊಂದು ಆಸ್‌ಫಾಲ್ಟ್ ಹಾಕುವುದು. ಒಂದೊಂದು ವಾರ್ಡ್‌ಗೆ ಒಂದೊಂದು ಕೋಟಿ ರೂಪಾಯಿಗಳು ಒಂದು ವರ್ಷಕ್ಕೆ ಮಿನಿಮಮ್ ಗ್ರಾಂಟ್ ಇದೆ. I am told. ಕಾರ್ಪೋರೇಷನ್‌ನಲ್ಲಿ ಏನು ಖರ್ಚು ಇರುತ್ತದೆ. ವಾರ್ಡ್‌ಗಳು ಡೆವಲಪ್ ಆಗಿರುತ್ತದೆ. ಅವು ಗಾಂಧೀನಗರ, ಚಾಮರಾಜಪೇಟೆ, ರಾಜಾಜಿನಗರ ಹಂತದಲ್ಲಿ ಖರ್ಚು ಮಾಡುವ ಅಗತ್ಯತೆ ಏನು ಇರುತ್ತದೆಂಬುದನ್ನು ಹೇಳಬೇಕಲ್ಲಾ? Why money is spent on the head of a Corporator? Why there is no planning in Bangalore Corporation? ಏತಕ್ಕೆ ಮಾಡಲಿಲ್ಲ? ಬಿ.ಡಿ.ಎ. ನವರೂ ಮಾಡುತ್ತಾರೆ. ನೀವೂ ಮಾಡುತ್ತೀರಿ, ಈಗ ಇನ್ನೊಂದು ಏಜೆನ್ಸಿಯನ್ನು ನಾವು ಸೃಷ್ಟಿ ಮಾಡಿ ಇಟ್ಟಿದ್ದೇವೆ. ಎಲ್ಲರೂ ಬೆಂಗಳೂರಿನಲ್ಲಿ ಕುಳಿತುಕೊಂಡು ಕೆಲಸ ಮಾಡುವಂಥಾದ್ದು. ಸರ್ಕಾರಿ ಹಣ, ಹಳ್ಳಿ ಮಕ್ಕಳಿಂದ ಟ್ಯಾಕ್ಸ್ ಹಾಕಿ ತಂದಂತಹ ಹಣವನ್ನು, ಇಲ್ಲಿ ಯಥೇಚ್ಛವಾಗಿ ಖರ್ಚು ಮಾಡುತ್ತಿದ್ದು, "ಪುರಾ"

ಎನ್ನುವ ಒಂದು ಕಾರ್ಯಕ್ರಮವನ್ನು ಇಟ್ಟುಕೊಂಡು ನಾವು ಇಲ್ಲಿ ಚರ್ಚೆ ಮಾಡಬೇಕಾ?

ಶ್ರೀ ನೆ.ಲ. ನರೇಂದ್ರಬಾಬು (ರಾಜಾಜಿನಗರ): ಮಾನ್ಯ ಅಧ್ಯಕ್ಷರೆ, ಮಾನ್ಯ ಜೆ.ಸಿ. ಮಾಧುಸ್ವಾಮಿಯವರು ಈಲ್ಡ್ ಆದರೆ ನಾನು ಹೇಳುತ್ತೇನೆ. ಬೆಂಗಳೂರು ಮಹಾನಗರ ಪಾಲಿಕೆಗೆ, ರಾಜ್ಯ ಸರ್ಕಾರದ ಬೊಕ್ಕಸದಿಂದ, ಕೇಂದ್ರ ಸರ್ಕಾರದ ಬೊಕ್ಕಸದಿಂದ, ಎಷ್ಟು ಬರುತ್ತದೆಂಬ ಬಗ್ಗೆ, ನಾನು ಮಹಾನಗರ ಪಾಲಿಕೆಯ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅಧ್ಯಕ್ಷನಾಗಿ ಬಜೆಟ್ ಪ್ರೆಸೆಂಟ್ ಮಾಡಿದ್ದೇನೆ. ಅದು ನನಗೆ ಗೊತ್ತು, ಎಷ್ಟು ಅಶ್ಯೂರೆನ್ಸ್ ಕೊಟ್ಟು, ಎಷ್ಟು ಕೊಟ್ಟಿದೆಯೆಂಬ ಬಗ್ಗೆ, ಬೆಂಗಳೂರು ಮಹಾನಗರ ಪಾಲಿಕೆಗೆ 40 ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿ, ಅದರಲ್ಲಿ ಎಷ್ಟು ಬಂದಿದೆಯೆಂಬುದು ವಿವರ ಇಟ್ಟುಕೊಂಡು ಹೇಳಿದರೆ ಒಳ್ಳೆಯದು.

ಶ್ರೀ ಜೆ.ಸಿ. ಮಾಧುಸ್ವಾಮಿ: ನಾವು ಬೆಂಗಳೂರು ಸಿಟಿಗೆ ಕುಡಿಯುವ ನೀರಿಗೆ ಸ್ಟೇಟ್ ಎಷ್ಟು ಕೊಟ್ಟಿದೆಯೆಂಬುದನ್ನು ಫಸ್ಟ್ ಲೆಕ್ಕ ಹಾಕಬೇಕು. ಕಾವೇರಿ ಒಂದನೇ ಹಂತದಿಂದ ಕಾವೇರಿ ನಾಲ್ಕನೇ ಹಂತದವರೆಗೂ ನಾವು ಬಜೆಟ್ ಅನ್ನು, ವರ್ಲ್ಡ್ ಬ್ಯಾಂಕ್‌ನೊಂದಿಗೆ . . . . .

ಶ್ರೀ ವಿ. ಸೋಮಣ್ಣ (ಬಿನ್ನಿಪೇಟೆ): ಮಾನ್ಯ ಅಧ್ಯಕ್ಷರೆ, ಬೆಂಗಳೂರಿನಲ್ಲಿ ಜನಸಂಖ್ಯೆ ಎಷ್ಟು ಇದೆ? ಒಂದು ಕೋಟಿ ಜನಸಂಖ್ಯೆ ಇದೆ. ಬೆಂಗಳೂರು ನಗರವನ್ನು ಇಡೀ ರಾಷ್ಟ್ರದ ಅಂತರಾಷ್ಟ್ರೀಯ ಮಟ್ಟದಲ್ಲಿ ನಾವು ಏನೆಲ್ಲಾ ಬೆಳವಣಿಗೆಯನ್ನು ಮಾಡಬೇಕೆಂಬ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಮತ್ತೆ ಹಿಂದೆ ಇದ್ದಂತಹ ಮುಖ್ಯಮಂತ್ರಿಗಳು, ಪ್ರಯತ್ನ ಮಾಡಿದರು. ಬೆಂಗಳೂರು ನಗರವನ್ನು ಬೇರೆ ಬೇರೆ ನಗರಗಳಿಗಾಗಲಿ, ಬೇರೆ ಬೇರೆ ಪಟ್ಟಣಗಳಿಗಾಗಲಿ, ಹೋಲಿಕೆ ಮಾಡುವಂಥಾದ್ದು ಇವತ್ತಿನ ಪರಿಸ್ಥಿತಿಗೆ ಸಾಧುವಾದುದ್ದಲ್ಲ. ಆದರೆ ಬೆಂಗಳೂರು ನಗರದ ಬಜೆಟ್‌ಗಿಂತ ಹೆಚ್ಚಾಗಿ, ಬೆಂಗಳೂರು ನಗರದ ಸರ್ವಾಂಗೀಣ ಅಭಿವೃದ್ಧಿಯನ್ನು ನಾವು ಎಷ್ಟು ಮಾಡುತ್ತೇವೋ ಅಷ್ಟಕ್ಕೂ ನಮಗೆ ಒತ್ತು ಕೊಡುವಂಥ ಜನರು ಬೆಂಗಳೂರಿನಲ್ಲಿ ಹಳ್ಳಿಗಾಡಿನಿಂದ ಬಂದಿರುವಂತಹ ಸಾವಿರಾರು ಜನರು ಲಕ್ಷಾಂತರ ಜನರು ಇವತ್ತು ಬೆಂಗಳೂರು ನಗರದಲ್ಲಿ ವಾಸ ಮಾಡುವುದರಿಂದ, ಬೆಂಗಳೂರು ನಗರವನ್ನು ಮಾನ್ಯ ಮಾಧುಸ್ವಾಮಿಯವರು ದಯಮಾಡಿ, ಚಿಕ್ಕನಾಯಕನಹಳ್ಳಿಗೆ, ತುಮಕೂರಿಗೆ ಹೋಲಿಕೆ ಮಾಡಿಕೊಳ್ಳುವುದು ಬೇಡ.

ಶ್ರೀ ಕೆ. ಚಂದ್ರಶೇಖರ್ (ಬಸವನಗುಡಿ): ಮಾನ್ಯ ಅಧ್ಯಕ್ಷರೆ, ನಾನು ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಮಹಾಪೌರನಾಗಿ ಕೆಲಸ ಮಾಡಿದ್ದೇನೆ. ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ವರ್ಷಕ್ಕೆ 240 ಕೋಟಿ ರೂಪಾಯಿಗಳು ಬರುವಂಥಾದ್ದು, ಇದು ಬೆಂಗಳೂರಿನ ಸ್ವಂತ ಸಂಪಾದನೆಯಾಗಿದೆ. ರಾಜ್ಯ ಸರ್ಕಾರದ ಸಂಪಾದನೆಯಿಂದ ಬೆಂಗಳೂರು ಮಹಾನಗರ ಪಾಲಿಕೆಗೆ ಯಾವುದೂ ಬರುವುದಿಲ್ಲ. ಬೆಂಗಳೂರು ನಗರದ ಮೂಲಭೂತ ಸೌಕರ್ಯಗಳಿಂದ ಬರತಕ್ಕಂಥ ಕಮರ್ಷಿಯಲ್ ಟ್ಯಾಕ್ಸ್, ಮತ್ತೆ ಸೇಲ್ಸ್ ಟ್ಯಾಕ್ಸ್ ಇವೆಲ್ಲಾ ಬೆಂಗಳೂರು ನಗರದಲ್ಲಿ ಬರುವಂತಹ ತೆರಿಗೆಗಳಿಂದ, ರಾಜ್ಯದ ಅಭಿವೃದ್ಧಿಯನ್ನು ನಾವು ಮಾಡುತ್ತಿದ್ದೇವೆ. ನಾವು ಬೆಂಗಳೂರು ಮಹಾ ನಗರದಲ್ಲಿ ಕೊಡುವಂತಹ ಹಣದಿಂದ ರಾಜ್ಯದ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿದೆ. Major share goes grom Bangalore city. ನಾವು ಕೊಟ್ಟ ತೆರಿಗೆ, ಬೆಂಗಳೂರು ಜನರು ಕೊಟ್ಟಂತಹ ತೆರಿಗೆಯಿಂದ, ರಾಜ್ಯದ ಎಲ್ಲಾ ಕೆಲಸಗಳು ನಡೆಯುತ್ತಾ ಇವೆ. ಎರಡನೆಯದಾಗಿ, ಬೆಂಗಳೂರು ನಗರದ ಮೂಲಭೂತ ಸೌಕರ್ಯದ ಬಗ್ಗೆ ಮಾನ್ಯ ಮಾಧುಸ್ವಾಮಿಯವರು ಹೇಳಿದರು. ಯಾವುದೇ ಕಾರ್ಪೊರೇಟರ್ ಅಕೌಂಟ್‌ನಲ್ಲಿ ಒಂದು ಕೋಟಿ ರೂಪಾಯಿಗಳನ್ನು ಕೊಡುವ ಸೌಲಭ್ಯದ ಯಾವುದೇ ಕೆ.ಎಂ.ಸಿ. ಆ್ಯಕ್ಟ್‌ನಲ್ಲಿ ಇಲ್ಲ. ಇಂತಹ ಒಂದು ವರದಿ, ಇಲ್ಲಿಯವರೆಗೂ ಸ್ವಾತಂತ್ರ್ಯ ಬಂದಾಗಿನಿಂದಲೂ ನಡೆದಿಲ್ಲ. ಇದು ಮಾನ್ಯ ಸದಸ್ಯರು ಹೇಳಿದಂಥಾದ್ದು ಸತ್ಯವಾದ ಮಾತು ಅಲ್ಲ. ಬೆಂಗಳೂರು ನಗರ ಕೇಂದ್ರಾಡಳಿತ ಪ್ರದೇಶ, ರಾಜ್ಯದ ಕೇಂದ್ರಾಡಳಿದಂತಹ ಪ್ರದೇಶ ಬೆಂಗಳೂರು ನಗರ ಅಭಿವೃದ್ಧಿಯಾಗದಿದ್ದರೆ ಇಡೀ ರಾಜ್ಯದ ಅಭಿವೃದ್ಧಿ ಕುಂಠಿತ ಆಗುತ್ತದೆ. ಇಲ್ಲಿ ಕೇಂದ್ರ ಪ್ರದೇಶವೇ ಅಭಿವೃದ್ಧಿಯಾಗಲಿಲ್ಲವೆಂದರೆ, ಕಮ್ಯುನಿಕೇಷನ್ ಪ್ರಶ್ನೆ ಏನು ಆಗುತ್ತದೆ? ಕಮ್ಯುನಿಕೇಶನ್ ಇಲ್ಲದೇ ಇಂಡಸ್ಟ್ರಿ ಏನು ಆಗುತ್ತದೆ. ವಿಜ್ಞಾನ, ತಂತ್ರಜ್ಞಾನದ ಬೆಳವಣಿಗೆ ಏನು ಆಗುತ್ತದೆ? ಹಾಗಾಗಿ ಬೆಂಗಳೂರು ನಗರದ ತೆರಿಗೆಯನ್ನು ನಾವು ರಾಜ್ಯಕ್ಕೆ ತೆಗೆದುಕೊಂಡು ಹೋಗುತ್ತಾ ಇಲ್ಲ. ಬೆಂಗಳೂರು ಮಹಾ ನಗರ ಪಾಲಿಕೆಯ ಅಮೌಂಟ್ ಸಪರೇಟ್ ಆಗಿ ಇದೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಮಾಧುಸ್ವಾಮಿ ಯವರು ಏನು ಹೇಳಿದ್ದಾರೆ. ಬೆಂಗಳೂರು ನಗರ ಅಭಿವೃದಿ ಬೆಂಗಳೂರು ನಗರದ ಜನರ ತೆರಿಗೆಯಿಂದಲೇ ಆಗುತ್ತಾ ಇಲ್ಲ: ಬೆಂಗಳೂರು ನಗರದ ಜನ

ಸಂಖ್ಯೆ ಹೆಚ್ಚು ಕಡಿಮೆ ಒಂದು ಕೋಟಿ ಇದ್ದರೆ, 45 ಲಕ್ಷ ಫ್ಲೋಟಿಂಗ್ ಪಾಪುಲೇಷನ್ ಇದೆ, 45 ಲಕ್ಷ ಫ್ಲೋಟಿಂಗ್ ಪಾಪುಲೇಷನ್ ಇದ್ದರೆ, ನಾವೂ ಕೂಡ ತೆರಿಗೆಯನ್ನು ಕೊಡುತ್ತೇವೆ. ಆದರೆ ಮಾನ್ಯ ಮಾಧುಸ್ವಾಮಿಯವರು ಹೇಳುತ್ತಿರುವಂಥಾದ್ದು, ನಿಮಗೆ ಸಿಕ್ಕಿರುವ ಶೇಕಡ 25 ರಷ್ಟು ಇವತ್ತು ದೇಶಕ್ಕೆ ಸ್ವಾತಂತ್ರ್ಯ ಬಂದು 50 ವರ್ಷಗಳಾದರೂ ಕೂಡ, ಇವತ್ತು ಗ್ರಾಮೀಣ ಪ್ರದೇಶಗಳಿಗೆ ಕೊಡಬೇಕಾದಂತಹ ಮೂಲಭೂತ ಸೌಕರ್ಯಗಳನ್ನು ನಾವು ಕೊಡುವುದಕ್ಕೆ ಆಗಿಲ್ಲ. ನಾವು ಇವತ್ತು ಬೆಂಗಳೂರು ನಗರಕ್ಕೆ ಕೊಡುವುದನ್ನು ವಿರೋಧ ಮಾಡುತ್ತಿಲ್ಲ. ಬೆಂಗಳೂರು ಇರಲಿ, ಆದರೆ ಬೆಂಗಳೂರು ನಗರಕ್ಕೆ ಏನು ಕೊಡುತ್ತೀರಿ, ಅದರಲ್ಲಿ ಶೇಕಡ 50ರಷ್ಟು ಆದರೂ ಗ್ರಾಮೀಣ ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಬೆಂಗಳೂರು ನಗರ ಜನರಿಂದಲೇ ಬರುವ ತೆರಿಗೆಯಿಂದಲೇ ಬೆಂಗಳೂರು ಅಭಿವೃದ್ಧಿಯಾಗುತ್ತಿಲ್ಲ. ಮಹಾತ್ಮ ಗಾಂಧೀಜಿಯವರ ಸಿದ್ಧಾಂತವನ್ನು ತೆಗೆದುಕೊಂಡರೆ, ಬರೀ ನಗರ ಪ್ರದೇಶಗಳು ಅಭಿವೃದ್ಧಿಯಾದರೆ, ದೇಶ ಅಭಿವೃದ್ಧಿಯಾಗುವುದಿಲ್ಲ. ಗ್ರಾಮೀಣ ಪ್ರದೇಶದ ಜನರಿಗೆ ಮೂಲಭೂತ ಸೌಕರ್ಯ ಸಿಕ್ಕಾಗ ಅಭಿವೃದ್ಧಿಯಾಗುತ್ತದೆಯೇ ಹೊರತು, ಬರೀ ಬೆಂಗಳೂರನ್ನೇ ಅಭಿವೃದ್ಧಿ ಮಾಡುವಂಥಾದ್ದು ಸರಿಯಲ್ಲ. ಇವತ್ತು ಬೆಂಗಳೂರುನಲ್ಲಿ ಫ್ಲೈಓವರ್ ಏನು ಮಾಡಲಾಗುತ್ತಿದೆ ಅದರ ಶೇಕಡ 10 ರಷ್ಟು ಹಣವನ್ನು ಕೊಟ್ಟರೆ, ಇವತ್ತು ಗ್ರಾಮೀಣ ಪ್ರದೇಶದ ರಸ್ತೆಗಳು ಅಬಿವೃದ್ಧಿಯಾಗುತ್ತವೆ. ಗ್ರಾಮೀಣ ಜನರಿಗೆ ಸಾರಿಗೆ ಸೌಕರ್ಯ ಸಿಗುತ್ತದೆ. ಮಾನ್ಯ ಮಾಧುಸ್ವಾಮಿಯವರು ಹೇಳಿದ ಹಾಗೆ ಮಾನ್ಯ ಕೆ.ಎಸ್. ಈಶ್ವರಪ್ಪನವರು ಮನಸ್ಸು ಮಾಡಿದರೆ ಒಳ್ಳೆಯದು ಇವತ್ತು ನಾವು ಕುಡಿಯುತ್ತಿರುವಂತಹ ವಿಷದ ನೀರು, ಅದು ಚಿಕ್ಕನಾಯಕನಹಳ್ಳಿ ಯಲ್ಲಾಗಲಿ, ಕಡೂರಿನಲ್ಲಿ ಆಗಲಿ, ಚಿತ್ರದುರ್ಗದಲ್ಲಿ ಆಗಲಿ, ಬಳ್ಳಾರಿ ಜಿಲ್ಲೆಯಾಗಲಿ, ಕೋಲಾರ ಜಿಲ್ಲೆಯಲ್ಲಾಗಲಿ ನಾವು ಫ್ಲೋರೈಡ್ ವಾಟರ್ ಅನ್ನು ಕುಡಿಯುತ್ತಿದ್ದೇವೆ. ನೀವು 50 ವರ್ಷಗಳಾದರೂ ಸರ್‌ಫೇಸಿಂಗ್ ವಾಟರ್ ಅನ್ನು ಕೊಡುವುದಕ್ಕೆ ಆಗಿಲ್ಲ. ಅದು ಯಾವುದೇ ಸರ್ಕಾರ ಇರಬಹುದು. ಆದರೆ ಬೆಂಗಳೂರು ನಗರದಲ್ಲಿ 4 ಸ್ಟೇಜ್‌ನಲ್ಲಿ ಇವತ್ತು ಕಾವೇರಿ ನೀರನ್ನು ಕೊಟ್ಟೀದ್ದೀರಿ, ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿಕೊಟ್ಟಿದ್ದೀರಿ. ಅದನ್ನು ನೀವು ಲೆಕ್ಕ ಹಾಕಿ, ಅದು ಯಾರ ದುಡ್ಡು ಎಂದು. ಬೆಂಗಳೂರು ಜನರ ತೆರಿಗೆಯಲ್ಲೇ ಬೆಂಗಳೂರು ನಗರವನ್ನು ಕಟ್ಟಿಲ್ಲ. ಇಡೀ ರಾಜ್ಯದ ಐದು ಕೋಟಿ ಜನರ ತೆರಿಗೆಯಲ್ಲಿ ಬೆಂಗಳೂರು ನಗರವನ್ನು ಕಟ್ಟಿರುವುದು.

(ಗೊಂದಲ)

ಶ್ರೀ ದಿನೇಶ್ ಗುಂಡೂರಾವ್ (ಗಾಂಧಿನಗರ): ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಬಿಡಿಎ ಬಗ್ಗೆ ಹೇಳಿದರು. ಬಿ.ಡಿ.ಎ.ಗೆ ಸರ್ಕಾರದಿಂದ ಒಂದು ನಯಾಪೈಸೆಯನ್ನು ಕೊಡುತ್ತಿಲ್ಲ. ಬಿಡಿಎ ತನ್ನ ಸ್ವಂತ ಸಂಪಾದನೆಯಿಂದ, ಸೈಟುಗಳನ್ನು ಮಾಡುವುದರ ಮುಖಾಂತರ ಕೋಟ್ಯಾಂತರ ರೂಪಾಯಿಗಳನ್ನು ಸಂಪಾದನೆ ಮಾಡಿ ಬೆಂಗಳೂರು ನಗರಕ್ಕೆ ಖರ್ಚು ಮಾಡುತ್ತಿದೆ. ಅದನ್ನು ನಾವು ವಾಪಸ್ಸು ಕೊಡುತ್ತೇವೆ. ನನ್ನ ಕ್ಷೇತ್ರದಲ್ಲಿ 22 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಒಂದು ಫ್ಲೈ ಓವರ್ ಮಾಡಿದ್ದೇವೆ. ಅದರಲ್ಲಿ ಒಂದು ಪೈಸೆ ಕೂಡ ಸರ್ಕಾರ ದಿಂದ ಬಂದಿರತಕ್ಕಂಥಾದ್ದು ಅಲ್ಲ ಅಥವಾ ತೆರಿಗೆಯಿಂದ ಬಂದಿಲ್ಲ. ಸೈಟುಗಳನ್ನು ಮಾಡಿ, ಮಾರಿರತಕ್ಕಂಥಾದ್ದರಿಂದ ಸಂಪಾದನೆಯಾಗಿರತಕ್ಕಂಥ ದುಡ್ಡಿನಿಂದ ಇವತ್ತು ಖರ್ಚು ಮಾಡಲಾಗಿದೆ. ಬೌರಿಂಗ್ ಹಾಸ್ಪಿಟಲ್ ಇರಬಹುದು, ಫ್ಲೈ ಓವರ್ ಇರಬಹುದು, ರಿಂಗ್ ರೋಡ್ ಇರಬಹುದು, ಇವೆಲ್ಲವನ್ನೂ ಕೂಡ ಸ್ವಂತ ಸಂಪಾದನೆಯಿಂದ ಮಾಡಿದ್ದಾರೆ. ಇವುಗಳೆಲ್ಲಾ ಸ್ವಂತ ಸಂಪಾದನೆಯಿಂದ ಮಾಡಿರುವುದು ಎಂದು ಮಾನ್ಯ ಅಶೋಕ್‌ರವರಿಗೂ ಗೊತ್ತಿದೆ. ಈಗ ಒಂದು ಪೆರಿಫೆರಲ್ ರೋಡ್ ಮಾಡಬೇಕು ಎಂದು ಇದ್ದೇವೆ. ಅದಕ್ಕೆ ಒಂದು ಸಾವಿರ ಕೋಟಿ ರೂಪಾಯಿಗಳ ವೆಚ್ಚವಾಗುತ್ತದೆ. ಈ ಒಂದು ಸಾವಿರ ಕೋಟಿ ರೂಪಾಯಿಗಳನ್ನೂ ಕೂಡ ಸಂಪೂರ್ಣವಾಗಿ ಬಿ.ಡಿ.ಎ. ತನ್ನ ಸ್ವಂತ ಗಳಿಕೆಯಿಂದ ವೆಚ್ಚ ಮಾಡಿ ಮಾಡತಕ್ಕಂಥ ಒಂದು ಕಾರ್ಯಕ್ರಮ ಇದು. ಇವತ್ತು ಇಡೀ ರಾಷ್ಟ್ರ ಬಿ.ಡಿ.ಎ.ಗೆ ಪ್ರಶಂಸೆ ನೀಡತಕ್ಕಂಥ ರೀತಿಯಲ್ಲಿ ಅದು ಬೆಳೆದಿದೆ. ಇದು ಒಂದು ಕಡೆಯಾದರೆ, ಇನ್ನೊಂದು ಕಡೆ, ಬಿಡಬ್ಲ್ಯೂಎಸ್.ಎಸ್.ಬಿ. ಮುಖಾಂತರ ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಬೆಂಗಳೂರು ನಗರಕ್ಕೆ ನೀರು ತರುತ್ತಿದ್ದಾರೆ. ಅದಕ್ಕೂ ಸಹ ಬೆಂಗಳೂರಿನ ನಾಗರೀಕರಾದ ನಾವು ಬಿ.ಡಬ್ಲ್ಯೂ.ಎಸ್.ಎಸ್.ಬಿ.ಗೆ ದುಡ್ಡು ಕೊಡುತ್ತೇವೆ. ಆ ಮುಖಾಂತರ ನಾವು ಸಾಲವನ್ನೂ ತೀರಿಸುತ್ತೇವೆ. ಅದನ್ನೂ ತಾವು ದಯವಿಟ್ಟು ಆಲೋಚನೆ ಮಾಡಬೇಕು.

ಶ್ರೀ ಕೆ.ಎಂ. ಕೃಷ್ಣಮೂರ್ತಿ: ಹಾಗಾದರೆ, ಗ್ರಾಮೀಣ ಜನರಿಗೆ ಕೊಡುವುದು ಬೇಡ ಅನ್ನುತ್ತೀರೇನು?

ಶ್ರೀ ದಿನೇಶ್ ಗಂಡೂರಾವ್: ಗ್ರಾಮೀಣ ಜನರ ಅಭಿವೃದ್ಧಿಯೂ ಆಗಬೇಕು. ಆಗಬಾರದು ಎಂದು ನಾನು ಹೇಳುತ್ತಿಲ್ಲ.

ಶ್ರೀ ಕೆ.ಎಂ. ಕೃಷ್ಣಮೂರ್ತಿ: ಗ್ರಾಮೀಣ ಜನರಿಗೆ ಪುಗಸಟ್ಟೆ ಕೊಡುತ್ತಾರೇನು?

ಶ್ರೀ ದಿನೇಶ್ ಗುಂಡೂರಾವ್: ಬೆಂಗಳೂರಿನಲ್ಲಿ ಆಗುತ್ತಿರತಕ್ಕಂಥ ಅಭಿವೃದ್ಧಿಗೆ ಸರ್ಕಾರ ಇನ್ನೂ ಹೆಚ್ಚಿನ ದುಡ್ಡು ಕೊಡಬೇಕು. ನಮಗೆ ಸರ್ಕಾರದ ದುಡ್ಡು ಕಡಿಮೆಯಾಗಿದೆ. ಈಗ ಬೆಂಗಳೂರು ನಾಗರೀಕರ ಕಾಂಟ್ರಿಬ್ಯೂಷನ್ ಮಾತ್ರ ಇದೆ. ಹಿಂದೆ, ನಮಗೆ ಅಕ್ಟ್ರಾಯಿನಿಂದ ಬರುತ್ತಿದ್ದಂಥ ದುಡ್ಡೂ ಈಗ ನಮಗೆ ಬರುತ್ತಿಲ್ಲ, ಅಕ್ಟ್ರಾಯಿ ತೆರಿಗೆಯಿಂದ ಬೆಂಗಳೂರು ನಗರಕ್ಕೆ ಒಂದು ಸಾವಿರ ಕೋಟಿ ರೂಪಾಯಿ ಬರುತ್ತಿತ್ತು. ಆ ಒಂದು ಸಾವಿರ ಕೋಟಿ ರೂಪಾಯಿ ಕೊಡತಕ್ಕಂಥಾದ್ದು ಸರ್ಕಾರದ ಕರ್ತವ್ಯ. ಅದನ್ನೂ ಕೂಡ ಕೊಡುತ್ತಿಲ್ಲ.

ಶ್ರೀ ನೆ.ಲ. ನರೇಂದ್ರಬಾಬು: ಆಕ್ಟ್ರಾಯಿ ಕಾಂಪನ್‌ಸೇಷನ್ ರಾಜ್ಯಾದ್ಯಂತ ಸಿಗುತ್ತಿದೆ, ಬೆಂಗಳೂರಿಗೆ ಮಾತ್ರ ಇಲ್ಲ.

ಅಧ್ಯಕ್ಷರು: ಹೀಗೆ ಎಲ್ಲರೂ ಎದ್ದುನಿಂತುಕೊಂಡು ಮಾತನಾಡಿದರೆ ಹೇಗೆ?

ಶ್ರೀ ಸಿ.ಟಿ. ರವಿ: ಮಾನ್ಯ ಅಧ್ಯಕ್ಷರೆ, ಚರ್ಚೆ ದಿಕ್ಕು ತಪ್ಪುತ್ತಿದೆ. ಇಲ್ಲಿರುವವರ್‍ಯಾರೂ ಬೆಂಗಳೂರು ನಗರದ ವಿರೋಧಿಗಳಲ್ಲ.

ಅಧ್ಯಕ್ಷರು: ಈ ಕಾಂಟ್ರೊವರ್ಸಿಯನ್ನು ಇಲ್ಲಿಗೆ ಮುಕ್ತಾಯ ಮಾಡೋಣ. ಮಾನ್ಯ ಮಾಧುಸ್ವಾಮಿಯವರೇ, ನೀವು ಮಾತನಾಡಿ ದಯಮಾಡಿ ಎಲ್ಲಾ ಕುಳಿತುಕೊಳ್ಳಬೇಕು. ಕಾಂಟ್ರೊವರ್ಸಿ ಎಂಡ್ ಮಾಡಿ. ಬೇರೆ ಸಮಯದಲ್ಲಿ ತಾವು ಮಾತನಾಡುವಿರಿ. ಈಗ ಅವರು ಮಾತನಾಡಲಿ. ದಯಮಾಡಿ ಎಲ್ಲರೂ ಕುಳಿತುಕೊಳ್ಳಬೇಕು. ಹಲವಾರು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೀರಿ. ಅದನ್ನೇ ಒಂದು ದೊಡ್ಡ ಚರ್ಚೆಯನ್ನಾಗಿ ಮಾಡುವುದು ಅಗತ್ಯವಿಲ್ಲ. ನಿಮಗೆ ಅವಕಾಶ ಸಿಕ್ಕಿದಾಗ ನೀವು ಮಾತನಾಡಿ. ಅವರು ಏನು ಪ್ರಶ್ನೆಗಳನ್ನು ಎತ್ತಿದ್ದಾರೆ, ಆಗ ಅದಕ್ಕೆ ಉತ್ತರ ಕೊಡಿ. ಈಗ ದಯಮಾಡಿ ಕುಳಿತುಕೊಳ್ಳಿ.

ಶ್ರೀ ವೈಜನಾಥ್ ಪಾಟೀಲ್: ಕಾಂಟ್ರಿಬ್ಯೂಷನ್ ಬರೀ ಬೆಂಗಳೂರಿನದ್ದು ಮಾತ್ರವಲ್ಲ, ಪ್ರತಿಯೊಂದಕ್ಕೂ ರಾಜ್ಯದ್ದು ಇದೆ.

ಒಬ್ಬ ಮಾನ್ಯ ಸದಸ್ಯರು: ಅವರಿಗೆ ಹಣ ಕೊಟ್ಟೆವು, ಇವರಿಗೆ ಹಣ ಕೊಟ್ಟೆವು ಎಂದು ಹೇಳಿಕೊಂಡು ಇವತ್ತು ನಾವು ಈ ಪರಿಸ್ಥಿತಿಯಲ್ಲಿದ್ದೇವೆ. ಇವತ್ತು ಬೆಂಗಳೂರೂ ಬೆಳೆಯಬೇಕು, ಗ್ರಾಮಾಂತರ ಪ್ರದೇಶಗಳೂ ಬೆಳೆಯಬೇಕು.

ಅಧ್ಯಕ್ಷರು: ಕುಳಿತುಕೊಳ್ಳಿ, ಅವರನ್ನು ಮಾತನಾಡಲು ಕರೆದಿದ್ದೇನೆ. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ, ತಾವು ಮಾತನಾಡಿ.

ಶ್ರೀ ವೈಜನಾಥ್ ಪಾಟೀಲ್: ಬಿಜಾಪುರದಿಂದ ಗದಗ್‌ವರೆಗೆ ಏನೂ ಮಾಡುತ್ತಿಲ್ಲ. ದಿನಾ ಬೆಳಗ್ಗೆ ಎದ್ದರೆ ಮೆಟ್ರೊ, ಮಾನೊ ಇವೇ ಆಗುತ್ತಿವೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ, ಬೆಂಗಳೂರನ್ನು ವಿರೋಧ ಮಾಡಿ ಮಾತನಾಡಲು ನಾನು ಇಲ್ಲಿ ನಿಂತಿಲ್ಲ. ಚರ್ಚೆ ಎಲ್ಲಿಗೆ ಹೋಗುತ್ತಿದೆ. ಅವರ ಮಾತಿಗೇ ನಾನು ಹೇಳುತ್ತೇನೆ. ಒಂದು ಕೋಟಿ ಜನಸಂಖ್ಯೆ ಈ ಊರಿನಲ್ಲಿ ಏಕಾಯಿತು? ಇಲ್ಲಿ ಇನ್‌ವೆಸ್ಟ್‌ಮೆಂಟ್ ಹೇಗೆ ಆಗುತ್ತದೆ? ಹೆಚ್.ಆರ್.ಎ. ಎಷ್ಟು ಕೊಡುತ್ತೀರಿ? ಸಿ.ಸಿ.ಎ. ಎಷ್ಟು ಕೊಡುತ್ತೀರಿ? ಇಲ್ಲಿಗೆ ಎಷ್ಟು ಹಳ್ಳಿಯ ಮಕ್ಕಳು ಇಲ್ಲಿಗೆ ಬಂದು ಡೊನೇಷನ್ ಕೊಟ್ಟು ಓದುತ್ತಾರೆ? ಎಷ್ಟು ಹಳ್ಳಿಯ ಮಕ್ಕಳು ಇಲ್ಲಿಗೆ ಬಂದು ಓದಲು ರೂಂ ಮಾಡಿಕೊಳ್ಳುತ್ತಾರೆ? ತುಮಕೂರಿನಲ್ಲಿ ಏಕೆ ಐದು ಸಾವಿರ ಮನೆಗಳು ಖಾಲಿ ಇವೆ? ಮೈಸೂರಿನಲ್ಲಿ ಏಕೆ ಹನ್ನೊಂದು ಸಾವಿರ ಮನೆಗಳು ಖಾಲಿ ಇವೆ? ಇವುಗಳಿಗೆಲ್ಲಾ ಈಗ ನಾವೊಂದು ಉತ್ತರ ಹೇಳಬೇಕಾಗುತ್ತದೆ. All the industrial cities in the State -- ಮುಚ್ಚಿಹಾಕಿದೆವು, ದಾವಣಗೆರೆ ಮುಚ್ಚಿ ಹೋಗಿದೆ, ಹುಬ್ಬಳ್ಳಿ ಮುಚ್ಚಿ ಹೋಗಿದೆ, ತುಮಕೂರು ಮುಚ್ಚಿ ಹೋಗಿದೆ, ಶಿವಮೊಗ್ಗ- ಭದ್ರಾವತಿಗಳು ಇವತ್ತು ಗತಿ ಇಲ್ಲದ ಸ್ಟೇಜ್‌ಗೆ ಬಂದಿವೆ, ಕೆ.ಜಿ.ಎಫ್.ನಲ್ಲಿ ಇವತ್ತು ಕುಡಿಯಲು ನೀರು ಇಲ್ಲದ ಸ್ಥಿತಿ ಇದೆ. ಇಂಥ ಸ್ಥಿತಿ ಏಕೆ ಬಂತು? We have all along concentrated our development in one area, ಅನ್ನುವುದಷ್ಟೇ ನಮ್ಮ ವಾದ, ಸನ್ಮಾನ್ಯ ಕಲಾಂರವರು..........

ಶ್ರೀ ಕೆ. ಚಂದ್ರಶೇಖರ್: ಅಂತಹದ್ದು ಯಾವುದೂ ಇಲ್ಲ. There is no contribution from the State government to the development of the city.

(ಗೊಂದಲ)

ಅಧ್ಯಕ್ಷರು: ದಯಮಾಡಿ ಕುಳಿತುಕೊಳ್ಳಿ. ನಿಮಗೆ ಅವಕಾಶ ಕೊಟ್ಟಾಗ ಮಾತನಾಡಿ. ಈಗ ಅವರು ಮಾತನಾಡಲಿ. ಅವರ ಭಾವನೆಗಳನ್ನು ಅವರು ವ್ಯಕ್ತ ಮಾಡಲು ಬಿಡಿ. ಪ್ರತಿಯೊಬ್ಬರಿಗೂ ಸಹ ನೀವು ಹೀಗೆ ಅಡ್ಡ ಬಂದರೆ ಹೇಗೆ? ಅದು ಚರ್ಚೆ ಹೇಗಾಗುತ್ತದೆ?

ಶ್ರೀ ಜೆ.ಸಿ. ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ, ನಾನು ಹಾಗೆ ಹೇಳಲು ಕಾರಣವೆಂದರೆ, ರಾಷ್ಟ್ರಾಧ್ಯಕ್ಷರೇ ತಮ್ಮ ಭಾಷಣದಲ್ಲಿ ಹೇಳಿದ್ದಾರೆ, ತಿರುಪ್ಪೂರು ನೋಡಿ ಎಂದು ಹೇಳಿದ್ದಾರೆ, ಲೂಧಿಯಾನ ನೋಡಿ ಎಂದು ಹೇಳಿದ್ದಾರೆ.

ಅದನ್ನು ನಾನು ಹೇಳಿಲ್ಲ. ಮಿಸ್ಟರ್ ರಾಷ್ಟ್ರಪತಿ ಹೇಳಿದ್ದಾರೆ. ತಿರುಪ್ಪೂರು ಹೇಗೆ ಡೆವೆಲಪ್ ಆಗಿದೆ ನೋಡಿ ಎಂದು ಅವರೇ ಹೇಳಿದ್ದಾರೆ. ಹೀಗಿರುವಾಗ, ಗಾರ್ಮೆಂಟ್ಸ್ ಬೆಂಗಳೂರಿನಲ್ಲಿ ಏಕೆ ಬಂದವು ಎಂದು ನಾನು ಕೇಳಬೇಕಲ್ಲವೇ? Why it has not taken place in Davanagere?--- ಎಂದು ಕೇಳಬೇಕಲ್ಲವೇ? ಲೂಧಿಯಾನ ಬೆಳೆದಂತೆ, ಭದ್ರಾವತಿ ಏಕೆ ಇಲ್ಲ ಎಂದು ನಾವು ಕೇಳಬೇಕಲ್ಲವೇ? ತಮಿಳುನಾಡಿನಲ್ಲಿ ಆರೇಳು ಸಿಟಿಗಳು ಬೆಳೆದಿವೆ. ಚೆನ್ನೈಗೆ ಪ್ಯಾರಲಲ್ ಆಗಿ ಇವತ್ತು ಕೊಯಮತ್ತೂರು ಇದೆ, ಸೇಲಂ ಇದೆ, ತಿರುಪ್ಪೂರು ಇದೆ, ಮದುರೈ ಇದೆ, ಹೊಸೂರು ಇದೆ, ಭವಾನಿ ಇದೆ, ಈರೋಡು ಇದೆ. ಹಾಗೆ ಕರ್ನಾಟಕದಲ್ಲಿ ಇವತ್ತು ಇನ್ನೊಂದು ಸಿಟಿಯ ಹೆಸರನ್ನು ಹೇಳಿ ಕರ್ನಾಟಕದಲ್ಲಿ ಇನ್ನೊಂದು ಸಿಟಿಯ ಹೆಸರು ಹೇಳಲೂ ದಿಕ್ಕಿಲ್ಲ. Davangere was No.1 textile city in Karnataka State. ಅದು ಮುಚ್ಚಿ ಹೋಯಿತಲ್ಲಾ, ಏಕೆ ಗಾರ್ಮೆಂಟ್‌ಗಳನ್ನು ಇಲ್ಲಿ ಮಾಡಬೇಕಾಗಿತ್ತು? Why they have not started at Davanagere? ಈ ಪ್ರಶ್ನೆಯನ್ನು ನಾವು ಕೇಳಬಾರದೇ? ಕಾಟನ್ ಬೆಳೆಯುತ್ತಿದ್ದಂಥ ಬೆಲ್ಟ್ ಹುಬ್ಬಳ್ಳಿ ಅಲ್ಲಿ ಟೆಕ್ಸ್‌ಟೈಲ್ಸ್ ಎಷ್ಟು ವರ್ಷಗಳಿಂದ ಇತ್ತು. ಏಕೆ ಇವತ್ತು ಹುಬ್ಬಳ್ಳಿಯಲ್ಲಿ ಮುಚ್ಚಿ, ಇಲ್ಲಿಗೇ ಬರಬೇಕಾಗಿರುವಂಥ ಸ್ಥಿತಿ ಬಂತು? ಏಕೆ ಎಲ್ಲಾ ಗವರ್ನಮೆಂಟ್ ಎಂಪ್ಲಾಯೀಸ್, ಟ್ರಾನ್ಸಫರ್ ಪಿರಿಯಡ್‌ನಲ್ಲಿ ಬೆಂಗಳೂರಿಗೆ ಕೊಡಿ ಎಂದು ಬೆಂಗಳೂರನ್ನು ಪ್ರಿಫರ್ ಮಾಡುತ್ತಾರೆ? ಏಕೆಂದರೆ, ತಾವು ಬೆಂಗಳೂರಿನಲ್ಲಿ ಫೆಸಿಲಿಟಿಯನ್ನು ಯಥೇಚ್ಛವಾಗಿ ಪ್ರೊವೈಡ್ ಮಾಡಿದ್ದೀರಿ. ಅದರಲ್ಲಿ ತಪ್ಪಿಲ್ಲ. ಏಕೆ ಬೆಂಗಳೂರಿಗೆ ಇಷ್ಟೊಂದು ಇಮಿಗ್ರೇಷನ್ ಆಗುತ್ತಿದೆ? ಏಕೆ ಇಷ್ಟೊಂದು ಜನ ಬೆಂಗಳೂರಿಗೆ ಬರಬೇಕು? ಪ್ರತಿದಿನ 30 ರಿಂದ 35 ಲಕ್ಷ ಜನ ಬೆಂಗಳೂರಿಗೆ ಬರುವ ಸ್ಥಿತಿ ಏಕೆ ನಿರ್ಮಾಣವಾಯಿತು? ನೀವು ನಮ್ಮ ಕಡೆ ಬಂದು ನೋಡಿ. ತಾವು ಸಿಟಿಯೊಳಗಿದ್ದೀರಿ. ನಮ್ಮ ಕಡೆ ಬಂದು ನೋಡಿ. ನೆಲಮಂಗಲದಿಂದ ಬೆಂಗಳೂರಿಗೆ ಬರಬೇಕೆಂದರೆ ಒಂದು ಗಂಟೆ, ಒಂದೂವರೆ ಗಂಟೆ ಟೈಂ ಏಕೆ ತೆಗೆದು ಕೊಳ್ಳುತ್ತದೆ? ಆಟೋರಿಕ್ಷಾದಲ್ಲಿ ಆರೇಳು ಜನ ಹೆಣ್ಣುಮಕ್ಕಳು ಕುಳಿತಿರುತ್ತಾರೆ. ಸೈಡ್‌ನಲ್ಲೂ ಕುಳಿತಿರುತ್ತಾರೆ, ಡ್ರೈವರ್ ಪಕ್ಕದಲ್ಲೂ ಕುಳಿತಿರುತ್ತಾರೆ. ಈ ನ್ಯೂಸೆನ್ಸ್ ಅನ್ನಾದರೂ ತಪ್ಪಿಸಿ ಎಂದು ನಾನು ಕಮೀಷನ್‌ರವರಿಗೆ ಹೇಳಿದೆ. ನಾವು ಎಂ.ಎಲ್.ಎ.ಗಳು ದಾರಿಯಲ್ಲಿ ಬರುತಿರುತ್ತೇವೆ. ನಮ್ಮ ಕಣ್ಣಿನಲ್ಲಿ ಅದನ್ನು ನೋಡುವುದಕ್ಕಾಗುವುದಿಲ್ಲ. ಒಂದೊಂದು ಆಟೋದಲ್ಲಿ 10-12 ಜನ

ಹೆಣ್ಣುಮಕ್ಕಳು ಕುಳಿತುಕೊಂಡು ಗಾರ್ಮೆಂಟ್ಸ್‌ಗೆ ಹೋಗುತ್ತಾರೆ. They start at 8.00 A.M. ಹೀಗೆ ಹೋಗುವುದು 7.30ಕ್ಕೆ ಸ್ಟಾರ್ಟ್ ಆಗುತ್ತದೆ. ಏಕೆ ಇವುಗಳೆಲ್ಲಾ ಇಲ್ಲಿ ಕೇಂದ್ರೀಕೃತವಾಗಬೇಕಾಗಿತ್ತು? ಇಷ್ಟೆಲ್ಲಾ ಮಾಡಿದರೂ ಬೆಂಗಳೂರು ಸಮಸ್ಯೆಯನ್ನು ಬಗೆಹರಿಸಲಾರದಂಥ ಸ್ಥಿತಿಯನ್ನು ನಾವೇಕೆ ನಿರ್ಮಾಣ ಮಾಡಿಕೊಳ್ಳಬೇಕಾಗಿತ್ತು? ಇಡೀ ಕಾವೇರಿ ನೀರನ್ನೆಲ್ಲಾ? ನಿಮಗೆ ತಂದು ಕೊಟ್ಟರೂ, ಅದು ಕುಡಿಯಲೂ ಸಾಕಾಗದಷ್ಟು ಪಾಪ್ಯುಲೇಷನ್ ಅನ್ನು ಏಕೆ ಈ ಊರಿನಲ್ಲಿ ಜಾಸ್ತಿ ಮಾಡಬೇಕಾಗಿತ್ತು ಎನ್ನುವುದಷ್ಟೇ ನನ್ನ ವಾದ. ನೀವು ಡೈವರ್ಸಿಫೈ ಮಾಡಬೇಕಾಗಿತ್ತು. ನೀವು ಮೈಸೂರು ಕಡೆಗೆ ನೋಡಬೇಕಾಗಿತ್ತು. ಶಿವಮೊಗ್ಗ ಕಡೆ ನೋಡಬೇಕಾಗಿತ್ತು, ತುಮಕೂರು, ಕಡೆ ನೋಡಬೇಕಾಗಿತ್ತು, ಚಿಕ್ಕನಾಯಕನಹಳ್ಳಿ ಕಡೆ ನೋಡುವಷ್ಟು ದೊಡ್ಡತನ ನಿಮಗಿದ್ದಿದ್ದರೆ ನಾನೇಕೆ ಇಲ್ಲಿ ನಿಂತುಕೊಂಡು ಭಾಷಣ ಮಾಡಬೇಕಾಗಿತ್ತು? ತಮಗೆ ಅದು ಇರಲಿಲ್ಲ. ಈವತ್ತು ಹೊಸಪೇಟೆ ಬಳ್ಳಾರಿ ಚಿಕ್ಕನಾಯಕನಹಳ್ಳಿ ಕ್ಯಾಬಿನೆಟ್ ಅನ್ನು ಸಾಕುತ್ತಾ ಇದೆ. ಆದರೆ ಏನೂ ಮಾಡಲಿಲ್ಲವಲ್ಲಾ ಧೂಳು, ಮಣ್ಣು ಕುಡಿಯಲು ನಾವಿದ್ದೇವೆ.

(ಈ ಹಂತದಲ್ಲಿ ಉಪಾಧ್ಯಕ್ಷರು ಶ್ರೀ ಎನ್.ವೈ. ಗೋಪಾಲಕೃಷ್ಣರವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಚಿಕ್ಕನಾಯಕನಹಳ್ಳಿ ಸುದ್ಧಿಯನ್ನು ದಯವಿಟ್ಟು ಮಾತನಾಡಬೇಡಿ. Chikkanayakanahalli is contributing to the State like anything. Hospet is contributing to fee state line anything ನಮಗೆ ತಾವೇನು ಮಾಡಿದಿರಿ ಎಂದು ನಾನು ಕೇಳಬೇಕಲ್ಲವೇ? ಬಳ್ಳಾರಿಗೆ ಏನು ಮಾಡಿದಿರೆ, ಹೊಸಪೇಟೆಗೆ ಏನು ಮಾಡಿದಿರಿ, ಚಿತ್ರದುರ್ಗಕ್ಕೆ ಏನು ಮಾಡಿದಿರಿ? ಪ್ರತಿದಿನ 600–700 ಲಾರಿ ಓಡಾಡುವ ಕಡೆಗಳಲ್ಲಿ ನೀವು ರಸ್ತೆಗಳಲ್ಲಿನ ಗುಂಡಿ ಮುಚ್ಚುವುದಿಲ್ಲ ಅದರಿಂದ ಇವತ್ತು ನಿಮಗೆ ಬರುವ ರಾಯಲ್ಟಿ ಎಷ್ಟು? ಈಗ ನಾನು ಮಾತನಾಡಲು ಹೊರಟಿದ್ದು "ಪುರ" ಎನ್ನುವ ಕಾನ್ಸೆಪ್ಟ್, ಪ್ರಿನ್ಸಿಪಲ್ ಬಗ್ಗೆ "Providing Urban facilities in Rural Areas" ಎನ್ನುವ ಒಂದು ಮಾತನ್ನು ಸನ್ಮಾನ್ಯ ರಾಷ್ಟ್ರಪತಿಗಳು ಬಳಸಿರುವುದರಿಂದ ಕೇಳುತ್ತಿದ್ದೇನೆ. ಅದನ್ನು ನೀವು ಕೋಸ್ಟಲ್‌ಗೆ 24 ಮಾಡಿ, ಬೇರೆ ಕಡೆ 200 ಮಾಡಿ ಎಂದು ಅವರೇನು ಹೇಳಿದ್ದಾರೆ, ಆ ಫೆಸಿಲಿಟೀಸನ್ನು ತಾವು ಮಾಡಲಿಕ್ಕಾಗುವುದಿಲ್ಲ. ನಮಗೆ ಬೇಸಿಗೆ ಮಿನಿಮಂ ಆಮಿನಿಟೀಸ್ ಕೊಡಿ. ಹಳ್ಳಿಯಲ್ಲಿರುವವರಿಗೆ ಇವತ್ತು ಬೇಸಿಗೆ ಮಿನಿಮಂ ಅಮಿನಿಟೀಸ್ ಕೊಡಿ. ಇವತ್ತು ಸ್ಯಾನಿಟೇಷನ್ ಪ್ರೋಗ್ರಾಂ ಹಾಕಿ

ಕೊಂಡಿದ್ದೀರಿ. ವಾಟರ್ ಇಲ್ಲದೇ ಎಷ್ಟು ಪ್ರೋಗ್ರಾಂಗಳು ನಡೆಯುತ್ತಿಲ್ಲ ಎನ್ನುವುದು ತಮಗೆ ಗೊತ್ತಿದೆ. ಅವುಗಳನ್ನು ಮಾಡುವುದಕ್ಕಾಗುತ್ತಿಲ್ಲ, ಏಕೆಂದರೆ ನೀರು ಇಲ್ಲ. ನೀರನ್ನು ಪ್ರೊವೈಡ್ ಮಾಡಲಾಗದೇ ಎಲ್ಲಾ ಲೆಟರಿನ್ಸ್, ಟಾಯ್ಲೆಟ್‌ಗಳನ್ನು ಮುಚ್ಚಿ ಕುಳಿತುಕೊಳ್ಳುವ ಸ್ಥಿತಿ ಬಂದಿದೆ. ನಮಗೆ ಇತ್ತು ಅಂಡರ್‌ಗ್ರೌಂಡ್ ವಾಟರ್‌ಅನ್ನು ರೀಚಾರ್ಜ್ ಮಾಡುವ ಕಾರ್ಯಕ್ರಮ ಕೊಡಿ. ಎರಡನೆಯದು, ರಸ್ತೆಗಳ ಸ್ಥಿತಿ, ಇವತ್ತು ನಮ್ಮ ರೋಡ್‌ಗಳ ಕಂಡೀಷನ್ ಏನಾಗಿದೆ ಎಂದು ನೋಡಿ. ಮಾನ್ಯ ರಮೇಶ್‌ಕುಮಾರ್‌ರವರ ಕ್ಷೇತ್ರದಲ್ಲಿ ಹೇಗಿದೆಯೋ ಗೊತ್ತಿಲ್ಲ, ನನ್ನ ಕ್ಷೇತ್ರದಲ್ಲಿ ಇವತ್ತಿಗೂ ಸಹ 2–3 ಕಿಲೋ ಮೀಟರ್‌ಗಳಷ್ಟು ದೂರದವರೆಗೆ ಬಸ್ಸು ಇಲ್ಲ. ಅಲ್ಲಿರುವವರು ಮೈನ್ ರೋಡಿಗೆ ನಡೆದೇ ಬರಬೇಕು. Can it be compared with Malleswaram people? ಅಲ್ಲಿರುವ ಜನರಿಗೆ ನಾವು ಏನು ಉತ್ತರ ಹೇಳಬೇಕು? 5–6–7 ತಾಂಡಾಗಳು ಗೊಲ್ಲರಹಟ್ಟಿಗಳು ಹ್ಯಾಮ್ಲೆಟ್ ವಿಲೇಜಸ್‌ಗಳಿಗೆ ಇವತ್ತಿನವರೆಗೂ ಬಸ್ಸಿನ ಮುಖವನ್ನೂ ಸಹಾ ನೋಡಿಲ್ಲ. ರೈಲಿನ ವಿಚಾರ ಬಿಟ್ಟುಬಿಡಿ, ರೈಲನ್ನು ಆ ಕಡೆಯವರಾದ ನಾವು ನೋಡಲೇ ಇಲ್ಲ. ನಮ್ಮ ಭಾಗದವರಿಗೆ ಹೊಗೆಬಂಡಿ ಹೇಗಿರುತ್ತದೆ ಎನ್ನುವ ಪರಿಚಯವೇ ಇಲ್ಲ. ನಾವು ಹತ್ತಿ ಕುಳಿತಿಲ್ಲ. ಕನಿಷ್ಠ ಬಸ್ಸಾದರೂ ಹೋಗುವಂಥ ಒಂದು ರೋಡನ್ನಾದರೂ ಮಾಡಿಕೊಟ್ಟಿರುವಿರಾ? ಎಲ್ಲಾ ಬಸ್ಸುಗಳಿಗೆ ಪರ್ಮಿಟ್ ಕೊಡುತ್ತೀರಿ. ಎಲ್ಲಾ ಬಸ್ಸುಗಳ ಪರ್ಮಿಟ್, ಅವು ಹಳ್ಳಿಗಳ ಮೇಲೇ ಹೋಗಬೇಕು ಎಂದಿರುತ್ತದೆ. ಆದರೆ ಅವರು ಬರುವುದೆಲ್ಲಾ ಮೈನ್ ರೋಡಿನ ಮೇಲೆಯೇ. ಎಲ್ಲೆಲ್ಲಿ ಸ್ಟೇಟ್ ಹೈವೇ, ನ್ಯಾಷನಲ್ ಹೈವೇಗಳಿವೆ ಅಲ್ಲಿ ಜನಗಳನ್ನು ತುಂಬಿಕೊಂಡು ಬೆಂಗಳೂರಿಗೆ ಬರುವುದನ್ನು ಬಿಟ್ಟರೆ, ನಮ್ಮ ಗ್ರಾಮೀಣ ಪ್ರದೇಶದ ಜನ ನೋಡಿದ್ದು ಏನೂ ಎಲ್ಲ. ಇವರು (ರಮೇಶ್ ಕುಮಾರ್) ಅಧ್ಯಕ್ಷರಾಗಿದ್ದಾಗ ನಾನು ಒಂದು ಮಾತು ಹೇಳಿದ್ದೆ, ಓದುವಾಗ ಹೇಮಮಾಲಿನಿಯವರ ಕನಸು ಕಂಡೆವು, ರಾಜಕೀಯಕ್ಕೆ ಬಂದಾಗ ಹೇಮಾವತಿ ನೀರಿನ ಕನಸು ಕಂಡೆವು. ಆದರೆ ನಮಗೆ ಸಿಕ್ಕಿದ್ದು ಎರಡೂ ಒಂದೇ ಒಂದು ಹೇಳಿದ್ದೆ. ನಮ್ಮದು ಕನಸಾಗಿದೆ. ಸಿನಿಮಾ ನೋಡಿಕೊಂಡು ಕುಳಿತುಕೊಳ್ಳಲು ನಾವು, ಅನುಭವಿಸುವುದಕ್ಕೆ ಇನ್ಯಾರೋ ಎನ್ನುವ ಸ್ಥಿತಿಯನ್ನು ಇಟ್ಟುಕೊಂಡು ಇವತ್ತು, providing urban facilities in rural areas ಎನ್ನುವ ಭಾಷಣವನ್ನು ಇಲ್ಲಿ ಕೇಳಿ ನಾವು ಎದ್ದುಹೋಗಬೇಕು. ನಮಗೆ ಏನು ಫಿಸಿಲಿಟೀಸ್ ಕೊಡುತ್ತೀರಿ ಎಂಬುದನ್ನು ಹೇಳಿ. ಹಾಸ್ಪಿಟಲ್ ಕೊಡುತ್ತೀರಾ? ಪ್ರತಿ

15 ಸಾವಿರ ಜನಸಂಖ್ಯೆಗೆ ಒಂದು ಹಾಸ್ಪಿಟಲ್ ಎನ್ನುವ ನಿಯಮವನ್ನು ತಾವು ಮಾಡಿದ್ದೀರಿ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಮಾನ್ಯ ಮಾಧುಸ್ವಾಮಿಯವರೆ, ಒಂದು ನಿಮಿಷ ಅನೇಕ ವೇಳೆ ನಾವು ಹೊಸ ಹೊಸ ಶಾಸನಗಳನ್ನು ಮಾಡುವಾಗ ಅವುಗಳ ಉದ್ದೇಶಗಳು ಚೆನ್ನಾಗಿಯೇ ಇರುತ್ತವೆ, ಬಹಳ ಆಕರ್ಷಣೀಯವಾಗಿರುತ್ತವೆ. ಆದರೆ ಅವು ಅನುಷ್ಠಾನಗೊಳ್ಳತಕ್ಕಂಥ ಅವಧಿಯಲ್ಲಿ ಉದ್ಧೇಶಿತ ಸೌಲಭ್ಯಕ್ಕಿಂತ ಅನಾನುಕೂಲಗಳೇ ಹೆಚ್ಚಾಗುತ್ತವೆ. ಅವರು ಬಸ್ಸಿನ ವಿಚಾರವನ್ನು ಹೇಳುತ್ತಿದ್ದರು. ನ್ಯಾಷನಲೈಸೇಷನ್ ಮಾಡಿದಿರಿ. ನ್ಯಾಷನಲೈಸೇಷನ್ ಕಾನ್ಸೆಪ್ಟ್‌ಗೆ ನಾವಂತೂ ಯಾರೂ ವಿರೋಧವಿಲ್ಲ. ನ್ಯಾಷನಲೈಸೇಷನ್ ಮಾಡಿದರೂ ಸಹ, ಕೆ.ಎಸ್.ಆರ್.ಟಿ.ಸಿ. ಯವರಿಗೆ ಎಲ್ಲಾ ಊರುಗಳಿಗೆ ಬಸ್ ಹಾಕುವುದಕ್ಕೆ ಚೈತನ್ಯವಿಲ್ಲ. ಹೀಗಾಗಿ, ಪ್ರೈವೇಟ್ ಬಸ್ ಅಲ್ಲಿಗೆ ಬರುವ ಹಾಗಿಲ್ಲ, ಕೆ.ಎಸ್.ಆರ್.ಟಿ.ಸಿ.ಯವರು ಬಸ್ ಹಾಕುವುದಿಲ್ಲ. ಅವರು ಟೆಂಪೋದಲ್ಲಿ ಹೋಗುವುದು, ಮತ್ತೊಂದರಲ್ಲಿ ಹೋಗುವುದು ತಪ್ಪುವುದಿಲ್ಲ. ಪ್ರತಿದಿವಸ ಟಿ.ವಿ.ಯಲ್ಲಿ ನೋಡಿದರೆ ನ್ಯೂಸ್ ಪೇಪರ್‌ನಲ್ಲಿ ನೋಡಿದರೆ, ಲಾರಿ ಮಗುಚಿ ಬಿತ್ತು, ಟ್ರ್ಯಾಕ್ಟರ್ ಮಗುಚಿ ಬಿತ್ತು, 14 ಜನ ಸತ್ತರು, 24 ಜನ ಸತ್ತರು, ಅವರಿಗೆ ಕಾಂಪನ್‌ಸೇಷನ್ ಕೊಡುವುದು ಇಂಥವೇ ಇರುತ್ತದೆ. ಎಲ್ಲೋ ಒಂದು ಕಡೆಗೆ we lack commitment. ಯಾವುದೇ ಒಂದು ನಿರ್ಣಯಕ್ಕೆ ನಾವು ಬರಬೇಕಾದರೆ, ಅದಕ್ಕೆ ಬದ್ದತೆ ಇರಬೇಕು, ಆ ಬದ್ಧತೆಗೆ ಒಂದು ಆಲೋಚನೆಯ ತಳಹದಿ ಇರಬೇಕಾಗುತ್ತದೆ. ಜನಹಿತ ಪ್ರಮುಖವಾಗಿ ಇರಬೇಕಾಗುತ್ತದೆ. ಮಾನ್ಯ ಮಾಧುಸ್ವಾಮಿಯವರು ಬೆಂಗಳೂರಿನ ವಿರುದ್ಧ ಮಾತನಾಡಲೇ ಇಲ್ಲ. ನಮ್ಮ ಎಲ್ಲಾ ಬೆಂಗಳೂರಿನ ಸ್ನೇಹಿತರು ಎದ್ದೆದ್ದು ಹೇಳಿದರು. ಎಲ್ಲಿ ಏಕೆ ವ್ಯವಸ್ಥೆ ವಿಪರೀತವಾಗಿ ಒಂದು ಕಡೆಗೆ advantageous ಆಗುತ್ತದೆ?, ಇನ್ನೊಂದು ಕಡೆಗೆ ಏಕೆ ಈ ತರಹ disadvantageous ಆಗುತ್ತದೆ? ಸರ್, ಇವತ್ತು ತಮಗೇ ಗೊತ್ತಿದೆ. ತಾವು ಉತ್ತರ ಕರ್ನಾಟಕದ ಕಡೆಗೆ ಹೊರಟುಬಿಟ್ಟರೆ, ತಾವು ಬರತಕ್ಕ ಕ್ಷೇತ್ರದಿಂದ ಮೊದಲ್ಗೊಂಡು ಹೆಣ್ಣುಮಕ್ಕಳು nature call answer ಮಾಡಲಿಕ್ಕೆ ಕೂಡ ಇವತ್ತು ಏನು ಪ್ರಾಯಶಃ ಪಡುತ್ತಾರೆ ಎಂಬುದು ತಮಗೆ ಗೊತ್ತಿದೆ. ಯೋಚನೆ ಮಾಡಿ. ಬೆಂಗಳೂರಿನಲ್ಲಿ ಕೆಲವರು ಮನೆಗಳಲ್ಲಿ sophisticated people latrine ಕಟ್ಟುವುದಕ್ಕೆ ಆ tiles ಅದು–ಇದು, ಆ sanitary fittings ಗೆ ಕೆಲವು ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಾರೆ. ಒಂದು bathroom ಗೆ

ನಮ್ಮನ್ನು ಕರೆದುಕೊಂಡು ಹೋಗಿ ತೋರಿಸುತ್ತಾರೆ. ಇದು ಇಟಲಿಯಿಂದ ಬಂತು, ಇದು France ನಿಂದ ಬಂತು ಇತ್ಯಾದಿ, ಇದರಲ್ಲಿ ಜಾರಿ ಬಿದ್ದರೆ ಈ ಮೂಳೆ ಮುರಿಯುತ್ತದೆ, ಈ ಕಡೆಗೆ ಬಿದ್ದರೆ ಈ ಕೈ ಹೋಗುತ್ತದೆ ಎಂದೆಲ್ಲಾ ಹೇಳುತ್ತಾರೆ. ಅವರಿಗೆ ಒಂದು ತಡಿಕೆ ಹಾಕಿಕೊಟ್ಟರೆ ಸಾಕು ಸರ್. ನಾನು ಹೇಳುವುದು, Is this not our responsibility? ನಮಗೆ ಹೃದಯ ಬೇಡವೇ?

ಶ್ರೀ ಜೆ.ಸಿ. ಮಾಧುಸ್ವಾಮಿ: ಮಾನ್ಯ ಉಪಾಧ್ಯಕ್ಷರೆ, ನಮ್ಮ ಹಳ್ಳಿಯಲ್ಲಿ ಒಂದು ಮದುವೆ ಮಾಡಬೇಕೆಂದರೆ ನಮಗೆ ಎಷ್ಟು ಕಷ್ಟವಿದೆಯೆಂದು ಯಾರಿಗಾದರೂ ಗೊತ್ತಿದೆಯೇ? ಕಷ್ಟಪಟ್ಟು ಎಲ್ಲಾ ಮಾಡಿ ಒಂದು ಸಣ್ಣ ಮಳೆ ಬಂದರೆ ಅವರ ಮನೆ ಹಾಳಾಗಿ ಹೋಗುತ್ತದೆ. ಮದುವೆ ಮಾಡುವವರು town ಗೆ ಬರಬೇಕು. ಕಾರ್ಯಕ್ರಮ ಮಾಡುವವರು town ಗೆ ಬರಬೇಕು. ಆಸ್ಪತ್ರೆಗೆ town ಗೆ ಬರಬೇಕು. ಇವತ್ತು ಒಬ್ಬ A.N.M. ಕೂಡ ಹಳ್ಳಿಯಲ್ಲಿ ವಾಸ ಮಾಡದಿರುವುದು ಮಾನ್ಯ ಉಪಾಧ್ಯಕ್ಷರಾದ ತಮಗೂ ಕೂಡ ಗೊತ್ತಿದೆ. ಒಬ್ಬ ಕೂಡ village accountant ಇವತ್ತು ಹಳ್ಳಿಯಲ್ಲಿ ವಾಸ ಮಾಡುತ್ತಿಲ್ಲ. ಮಾತೆತ್ತಿದರೆ ನಮಗೆ facilities ಇಲ್ಲ, ಅದನ್ನು ಕೊಡಿಸಿ ಎಂದು ಕೇಳುತ್ತಾರೆ. Doctors ಅನ್ನು ಬಿಟ್ಟು ಬಿಡಿ. ತಾವು Contract Doctors ಅನ್ನು ಏನು ನೇಮಕ ಮಾಡಿ ಕಳುಹಿಸಿದ್ದೀರಿ, ಅವರಲ್ಲಿ ಒಬ್ಬರೂ ಕೂಡ ಇವತ್ತು ಹಳ್ಳಿಯಲ್ಲಿ ವಾಸ ಮಾಡುತ್ತಿಲ್ಲ. ಕನಿಷ್ಠ ನನ್ನ ಕ್ಷೇತ್ರದಲ್ಲಂತೂ ಯಾರೂ ಇಲ್ಲ. Linemen ಗಳ ಕಥೆ ಹೋಯಿತು. ಹುಡುಗರಿಗೇನಾದರೂ ಕಂಬ ಹತ್ತುವುದಕ್ಕೆ ಬಂದರೆ ಅವತ್ತು ಏನಾದರೂ ಲೈನ್‌ಗಳನ್ನು ಸರಿ ಮಾಡುವುದು ಬಿಟ್ಟರೆ, ನಿಮ್ಮ Linemen ಗಳ concept ಇವತ್ತು ಇಲ್ಲ. ನಮಗೆ ಏನು urban facilities ಅನ್ನು ಕೊಡುತ್ತಿರಿ ಎನ್ನುವುದು ನಮಗೆ ಅರ್ಥವಾಗುತ್ತಿಲ್ಲ, ಅದು ಅರ್ಥವಾಗಬೇಕು. ಕನಿಷ್ಠ ಒಂದು A.N.M Centre ನಲ್ಲಿ A.N.M ಇರುವ ಹಾಗೆ ಮಾಡಿಕೊಡಿ ಸ್ವಾಮಿ, ಸಾಕು. ಅಲ್ಲಿ ಯಾರಿಗೋ ಒಬ್ಬರಿಗೆ ಹೆರಿಗೆ ನೋವು start ಆದಾಗ basic ಆಗಿ ಅಲ್ಲಿಗೆ ಹೋಗಿಬಿಟ್ಟು ನಿಂತುಕೊಂಡು ಹೆಣ್ಣಮಗಳಿಗೆ ಸಾಂತ್ವನ ಹೇಳುವುದಕ್ಕೆ ಒಬ್ಬಳು ಹೆಣ್ಣುಮಗಳು ಆದರೂ ಅಲ್ಲಿ ಇರಲಿ. ಈ ಮೇಷ್ಟ್ರು ಬಗ್ಗೆ ಹೇಳುವುದಾದರೆ, ನಾನು ಒಂದು ಸಲ ಚಿಕ್ಕನಾಯಕನಹಳ್ಳಿಯಲ್ಲಿ ಬಹಳ ಚೆನ್ನಾಗಿ ಹೇಳಿದ್ದೆ. ಎಲ್ಲಾ ಶಾಲೆಗಳನ್ನು ತಂದು ಚಿಕ್ಕನಾಯಕನಹಳ್ಳಿಯಲ್ಲಿ ಕಟ್ಟಿಬಿಡುತ್ತೇವೆ. ನೀವು ಮೇಷ್ಟ್ರುಗಳೆಲ್ಲಾ ಇಲ್ಲಿಯೇ ಇರಿ. ಬೋರ್ಡ್ ಹಾಕುತ್ತೇವೆ, ಇಂಥಿಂಥ ಊರಿನ ಶಾಲೆ ಎಂದು, ಹುಡುಗರು ಬಂದು ಆ ಶಾಲೆಗೆ ಹೋಗಲಿ ಎಂದು ಹೇಳಿದ್ದೆ.

ಚಿಕ್ಕನಾಯಕನಹಳ್ಳಿ townನಲ್ಲಿಯೇ ಎಲ್ಲಾ ಶಾಲೆಗಳನ್ನು ಕಟ್ಟಿಸಿಬಿಡುವುದು. ಇಂಥಿಂಥ ಊರಿನ ಶಾಲೆ ಎಂದು ನಂತರ board ಹಾಕಿಬಿಡುವುದು. ಮೇಷ್ಟ್ರು ಎಲ್ಲಿಗೂ ಹೋಗುವ ಹಾಗಿಲ್ಲವಲ್ಲಾ ಹಳ್ಳಿ ಹುಡುಗರನ್ನು ಕರೆದುಕೊಂಡು ಬಂದು ನೀನು ಈ ಶಾಲೆಗೆ ಹೋಗಪ್ಪ, ನೀನು ಈ ಶಾಲೆಗೆ ಹೋಗಪ್ಪ ಎಂದು ಮಾಡುವ ಕಾಲಕ್ಕೆ ನಾವು ಬಂದಿದ್ದೇವೆ. ಸತ್ಯವಾಗಿ ಅದೇ ಇವತ್ತು village accountant ಸ್ಥಿತಿ ಕೂಡ. ಚಿಕ್ಕನಾಯಕನ ಹಳ್ಳಿಯಲ್ಲಿ ಎಷ್ಟು ಜನ village accountant ಇದ್ದಾರೆ ಎಂದು ಹೇಳಿ ಸರ್? ಗ್ರಾಮ ಪಂಚಾಯತಿ Secretary ಹುದ್ದೆ ಎಷ್ಟು ಖಾಲಿ ಇದೆ ಹೇಳಿ. ಕೆ.ಇ.ಬಿ. ನಲ್ಲಿ ಇವತ್ತು ಏನು ಸ್ಥಿತಿ ಇದೆಯೆಂದರೆ, ಇವತ್ತು power ಹೋದರೆ 24 ಗಂಟೆ, 30 ಗಂಟೆ ನಮಗೆ power ಬರುವುದಿಲ್ಲ. ನಾವು ಶಾಸಕರಾಗಿದ್ದೇವೆ. ಇವತ್ತು ಸ್ವಲ್ಪ ಹೊತ್ತು T.V. ನೋಡುವುದಕ್ಕಾಗುವುದಿಲ್ಲ. ಇವತ್ತು ಬೇಡಬೇಕು, ಕಾಡಬೇಕು. ಜೊತೆಗೆ, power distributions ಅನ್ನು contract ಕೊಟ್ಟುಬಿಟ್ಟಿದ್ದೇವೆ. ಯಾರೋ ಇಬ್ಬರು ಹುಡುಗರನ್ನು ಅಲ್ಲಿ ಹಾಕಿಬಿಟ್ಟಿರುತ್ತಾರೆ. ಇಂಜಿನಿಯರುಗಳು ಅಲ್ಲಿ ಇರುವುದಿಲ್ಲ. Field man ಇರುವುದಿಲ್ಲ. Power ಹೋದರೆ ಅವರ ಗಮನಕ್ಕೇ ಬರುವುದಿಲ್ಲ. ಇಂಥ ಸ್ಥಿತಿಯಲ್ಲಿ ಹಳ್ಳಿಗಳಿವೆ. ಹಳ್ಳಿಯ ಬಗ್ಗೆ ತಮಗೇನಾದರೂ ಕಲ್ಪನೆ ಇದೆಯೇ ಎಂದು ನಾನು ಇಲ್ಲಿ ಪ್ರಶ್ನೆ ಮಾಡುತ್ತಿದ್ದೇನೆ. ಗ್ರಾಮೀಣ ಭಾಗ ಅಂದರೆ ಹೇಗಿರುತ್ತದೆ? 16 ಗಂಟೆ, 18 ಗಂಟೆ, 20 ಗಂಟೆ, power ಇಲ್ಲದೆಯೇ ಜೀವನ ಮಾಡುತ್ತಿದ್ದೇವೆ. ಏನು ಮಾಡಬೇಕೆಂದು ಗೊತ್ತಾಗಬೇಕು. power ಇಲ್ಲವೆಂದರೆ motor ಓಡದೆ ನೀರು ಇರುವುದಿಲ್ಲ. ಏನೇನು urban facilities ಅನ್ನು ನಮಗೆ ಕೊಡುತ್ತೀರಿ ಎಂಬುದನ್ನು ಹೇಳಬೇಕು. ಸನ್ಮಾನ್ಯ ಮುಖ್ಯಮಂತ್ರಿಗಳೇ, ತಾವು ಮೊದಲೇ ಮಾಡಬೇಕಾಗಿರುವುದೇನೆಂದರೆ, ಬೆಂಗಳೂರಿಗೆ ಯಾರು opt ಮಾಡಿ ಬರುತ್ತಾರೆ, ಕನಿಷ್ಠ ಅವರಿಗೆ H.R.A, C.C.A cut ಮಾಡಿ. ಆ ನೌಕರರಿಗೆ ನೀನೇ ಕೇಳಿಕೊಂಡು ಬರುತ್ತಿದ್ದೀಯಾ, extra HRA,CCA depending on the cost index ಏನು ಕೊಟ್ಟಿದೆ ಅದನ್ನು ಕೊಡುವುದಿಲ್ಲ ಎಂದು ಹೇಳಿ. ಎಲ್ಲರಿಗೂ ಬೆಂಗಳೂರು ಬೇಕು. ಬೆಂಗಳೂರಿನಲ್ಲಿರುವ ಸೈಟ್‌ಗೆ ಮಾತ್ರ ಬೆಲೆ ಬೇಕು. ಬೆಂಗಳೂರಿನಿಂದ 50 ಕಿಲೋಮೀಟರ್ 60 ಕಿಲೋಮೀಟರ್ ದೂರದಲ್ಲಿರುವ ತುಮಕೂರಿನಲ್ಲಿ ಸೈಟ್ ಕೇಳುವವರ ದಿಕ್ಕು ಇಲ್ಲ. ಅಲ್ಲಿ ಒಂದು ಮನೆಯನ್ನು ಕೇಳುವವರು ದಿಕ್ಕಿಲ್ಲ. ಕೋಲಾರದಲ್ಲಿ ಮನೆಯನ್ನು ಕೇಳುವವರ ದಿಕ್ಕಿಲ್ಲ, ಚಿಂತಾಮಣಿಯಲ್ಲಿ ಮನೆ ಕೇಳುವವರಿಗೆ ದಿಕ್ಕಿಲ್ಲ. ಬೆಂಗಳೂರಿಗೆ ಮಾತ್ರ

ಏನಾಗಿಬಿಟ್ಟಿದೆಯೋ ಅದು ನಮಗೆ ಗೊತ್ತಿಲ್ಲ, ಇಲ್ಲಿ ಒಂಭತ್ತೂವರೆ ಲಕ್ಷ ರೂಪಾಯಿಗಳಿಗೆ ಬಿಡಿಎ ಸೈಟ್ ಕೊಟ್ಟುಬಿಟ್ಟರೆ ಅದು ಒಂದು ಕೋಟಿ ರೂಪಾಯಿಗಳಿಗೆ ವ್ಯಾಪಾರ ಆಗುತ್ತದೆಂದರೆ ನಾವೆಲ್ಲಾ ತೋಟ ಹೊಲ ಇಟ್ಟುಕೊಂಡು ಹಳ್ಳಿಗಳಲ್ಲಿ ಏಕೆ ಇರಬೇಕೆಂಬ ಚಿಂತೆ ನಮಗೆಲ್ಲಾ start ಆಗಿಬಿಟ್ಟಿದೆ. ಏತಕ್ಕೆ ಮಾಡಬೇಕು ನಾವು ಅಷ್ಟೆಲ್ಲಾ ಬಿಸಿಲಿನಲ್ಲಿ ಬೆಂದು, ಮುಖವನ್ನೆಲ್ಲಾ ಕಪ್ಪಗೆ ಮಾಡಿಕೊಂಡು, ಬೆಂಗಳೂರಿಗೆ ಬರುವಾಗ ಎರಡು ದಿನಸ ಮನೆಯೊಳಗೆ ಇದ್ದು ಸ್ವಲ್ಪ ಚೆನ್ನಾಗಿ ಕಾಣುವ ಹಾಗೆ ಬರೋಣ ಎಂದು ಏಕೆ ಮಾಡುತ್ತಿದ್ದೇವೋ ಎಂದು ನಮಗೆ ಅರ್ಥವೇ ಆಗುತ್ತಿಲ್ಲ. ನಾನು ಹೇಳವುದೇನೆಂದರೆ, amenities ಅನ್ನು ನೀವು ಸೃಷ್ಟಿ ಮಾಡುವ ಕಡೆ ಹೇಳಿ ಸರ್. ಅವರು ಟೀಕೆ ಮಾಡಿರಬಹುದು. Government ಎಷ್ಟು ಗ್ಯಾರಂಟಿ ಅನ್ನು ಬೆಂಗಳೂರಿಗೆ ಕೊಟ್ಟಿಲ್ಲ ನೋಡೋಣ. B.W.S.S.B. ಗೆ gaurantee ಇಲ್ಲವೇ? K.U.W.S.S.B.ಗೆ guarantee ಇಲ್ಲವೇ? ನೀವು ತೆಗೆದುಕೊಳ್ಳುತ್ತಿರುವ ಸಾಲ ಗಳಿಗೆ guarantee ಇಲ್ಲವೇ? ಬೆಂಗಳೂರಿಗೆ ಕೊಡಬೇಡಿ ಅಥವಾ ಏಕೆ ಕೊಡುತ್ತಿದ್ದೀರಿ ಎಂದು ಪ್ರಶ್ನೆ ಮಾಡುತ್ತಿಲ್ಲ. ಕಾರ್ನಾಟಕ ರಾಜ್ಯ development ಆಗಬೇಕೆಂದರೆ, Bangalore growth ಅನ್ನು ತಾವು stop ಮಾಡಲೇ ಬೇಕು. ಇವತ್ತು ಇದು ಅನಿವಾರ್ಯ ಎಂದು ತಾವು ತಿಳಿದು ಕೊಳ್ಳಬೇಕು. ಯಾವುದೇ ಸಮಸ್ಯೆ start ಆದರೆ ಈ ಊರಿನಲ್ಲಿ ನಾವು ಸಮಸ್ಯೆಯನ್ನು ಬಗೆಹರಿಸುವುದಕ್ಕೆ ನಮ್ಮ ಶಕ್ತಿ ಮೀರಿ ಹೋಗುತ್ತದೆ. ಏತಕ್ಕೆ ಇವತ್ತು ಬೆಂಗಳೂರು terrorist Centre ಆಯಿತು? ಏತಕ್ಕೆ ಇವತ್ತು ಬೆಂಗಳೂರು narcotics Centre ಆಯಿತು? ಇದು ತಮಗೆ ಗೊತ್ತಿದೆಯೇ? ಇಡೀ South Asia ದಲ್ಲಿ narcotics activities ಬೆಂಗಳೂರಿನಲ್ಲಿ ಇರುವಷ್ಟು ಬೇರೆ ಎಲ್ಲೂ ಇವತ್ತು ಇಲ್ಲ, ನಿಮ್ಮ Campus ನಲ್ಲಿರುವ ಹುಡುಗರು ಎಷ್ಟು ಜನ ಇವತ್ತು drug addict ಆಗಿದ್ದಾರೆ ಎಂಬುದನ್ನು ಯಾರಾದರೂ ನೋಡಿದ್ದೀರಾ? Engineering College ಗೆ ಹೋಗಿ ನೋಡಿದ್ದೀರಾ? Medical College ಗೆ ಹೋಗಿ ನೋಡಿದ್ದೀರಾ? ಇವತ್ತು Bangalore City ಯಲ್ಲಿ ಯಾರಿಗಾದರೂ ಇವತ್ತು controlling ಇದೆಯೇ? ತಂದೆ ತಾಯಿಗಳಿಗೆ ತಮ್ಮ ಮಕ್ಕಳು ಏನು ಮಾಡುತ್ತಿದ್ದಾರೆ ಎಂದು ಗೊತ್ತಾಗುವಂಥ ಸ್ಥಿತಿ ಇವತ್ತು ಈ ಊರಿನಲ್ಲಿ ಇದೆಯೇ? ಇದನ್ನು ಏನಾದರೂ ಮಾಡಬೇಕೆಂದರೆ, ಬೆಂಗಳೂರನ್ನು ಬೆಳೆಸಬೇಡಿ ಎಂದು ನಾವು ಹೇಳುವುದಿಲ್ಲ. ಬೆಂಗಳೂರಿಗೆ parallel ಆಗಿ ದಯಮಾಡಿ ಬೇರೆ ಸ್ಥಳಗಳನ್ನು ತಾವು

ಬೆಳೆಸಲೇಬೇಕೆನ್ನುವ ಅನಿವಾರ್ಯ ಸ್ಥಿತಿಗೆ ನೀವು ಬಂದ್ದಿದ್ದೀರಿ. ಸಮಾನತೆ, balance, ಬೇರೆ ಭಾಗವನ್ನು ತಾವು ಬೆಳೆಸದೇ ಹೋದರೆ ಈ ಭಾಷಣಗಳಿಗೆ ಅರ್ಥವೇ ಉಳಿಯುವುದಿಲ್ಲ. ಇನ್ನು ಗ್ರಾಮೀಣ ಪ್ರದೇಶಕ್ಕೆ 15 ಸಾವಿರ population ಗೆ ಒಂದು P.H.C. ಎಂದು ಮಾಡಿದ್ದೀರಿ. ಇದನ್ನು ನಾನು ಆಗಾಗ ಹೇಳುತ್ತಿದ್ದೆ 15 ಸಾವಿರ ಬರಬೇಕೆಂದರೆ ಎಷ್ಟು ಹಳ್ಳಿ ಎಷ್ಟು ಕಿಲೋಮೀಟರ್ ಬೇಕಾಗುತ್ತದೆ ಎಂಬುದನ್ನು ತಾವು ಯೋಚನೆ ಮಾಡಬೇಕು. ಒಂದು ಹೊಸ PHC ಗ್ರಾಮೀಣ ಪ್ರದೇಶದಲ್ಲಿ start ಆಗಲಿಕ್ಕೆ ಸಾಧ್ಯವೇ ಇಲ್ಲ ಆ ತಾಲ್ಲೂಕಿನ population exhaust ಆಗಿಬಿಟ್ಟಿದೆ. ಏಕೆಂದರೆ, ನಾವೇನು P.H.U ಗಳನ್ನು ಮಾಡಿದ್ದೆವು, ಅವುಗಳೇ ಇವತ್ತು ಜಾಸ್ತಿ ಆಗಿಬಿಟ್ಟವೆ ಎಂದು ಸರ್ಕಾರದ ಮುಂದೆ ವರದಿ ಇದೆ. ಇನ್ನು ನಮಗೆ facilities ಹೇಗೆ create ಮಾಡುತ್ತೀರಿ? 6 ಕಿಲೋಮೀಟರ್ 7 ಕಿಲೋಮೀಟರ್ ಒಂದು ಹಳ್ಳಿಗಿಂತ ಇನ್ನೊಂದು ಹಳ್ಳಿಗೆ ಹೋಗುತ್ತಾನೆ. Medical Store ಇರುವುದಿಲ್ಲ. ಆ ಡಾಕ್ಟರ್ ಬರೆದು ಕೊಟ್ಟರೆ ಮತ್ತೆ ಅವನು townಗೆ ಔಷಧಿ ತೆಗೆದುಕೊಂಡು ಹೋಗುವುದಕ್ಕೆ ಬರಬೇಕು. ಅದರ ಬದಲು ಏನು ಮಾಡುತ್ತಾನೆಂದರೆ, ನೇರವಾಗಿ town ಗೆ ಯಾರೋ ಡಾಕ್ಟರ್ ಹತ್ತಿರ ಹೋಗಿಬಿಡುತ್ತಾನೆ. ಈ ಊರಿಗೆ ಹೋಗಿ, ಆ ಡಾಕ್ಟರ್‌ಗೆ ತೋರಿಸಿ ಪುನಃ town ಗೆ ಹೋಗಿ ಅಲ್ಲಿ ಹೋಗಿ ಔಷಧಿ ತರುವ ರಗಳೆ ಏಕೆ ಎಂದು ಒಬ್ಬರು ಇಲ್ಲಿದಿದ್ದರೆ ಇನ್ನೊಬ್ಬರು ಇರುತ್ತಾರೆ ಎಂದು ಆ ರೀತಿ ಮಾಡುತ್ತಾನೆ. ಇಂಥ ಸ್ಥಿತಿಯಲ್ಲಿ ನಾವೇನು ಇದ್ದೇವೆ, ಇದನ್ನು ತಿಳಿದುಕೊಳ್ಳಬೇಕು. ಸದನದಲ್ಲಿ Transport Minister ಇಲ್ಲ. ನಾನು ಹೇಳುತ್ತಿದ್ದೆ. K.S.R.T.C. ಯನ್ನು ಬರೀ ಲಾಭಕ್ಕಾಗಿ ಇಟ್ಟುಕೊಂಡು ಹಳ್ಳಿಯ ಜನಕ್ಕೆ ನೀವು ಅನ್ಯಾಯ ಮಾಡಿದ್ದೀರಿ ಎಂದು, ನಾವು ಎಷ್ಟೇ request ಮಾಡಿದರೂ 3 months ಗೆ ಒಂದು sehedule ಅನ್ನು run ಮಾಡುತ್ತಾರೆ. Collection down ಆಯಿತೆಂದರೆ withdrawn, ಅಂದರೆ ವಾಪಸ್ಸು ತೆಗೆದುಕೊಂಡುಬಿಡುತ್ತಾರೆ. India ದೇಶದಲ್ಲಿಯೇ ನಮ್ಮ K.S.R.T.C. ಲಾಭದಲ್ಲಿದೆ ಎನ್ನುವ ಭಾಷಣ ಆಗುತ್ತದೆ. ಒಂದು ರೂಪಾಯಿಗೆ 20 ಪೈಸೆಯಂತೆ, 30 ಪೈಸೆಯಂತೆ ಟಿಕೇಟ್ ರೇಟ್ ಜಾಸ್ತಿ ಮಾಡಿಬಿಟ್ಟರೆ ಲಾಭ ಮಾಡುವುದೇನೂ ದೊಡ್ಡ ವಿಷಯ ಎಂದು ನಾವು ತಿಳಿದುಕೊಂಡಿಲ್ಲ. ಯಾರು ಬೇಕಾದರೂ ಈ ರೀತಿ ಲಾಭ ಮಾಡಬಹುದು. K.S.R.T.C. ಯನ್ನಾದರೂ service ಎಂದು ತೀರ್ಮಾನ ಮಾಡಬೇಕು. ಬೆಂಗಳೂರಿನಲ್ಲಿ ದುಡಿದಿದ್ದ ದುಡ್ಡು ಶಿವಮೊಗ್ಗಕ್ಕೆ ಹೋಗುವಾಗ

ದುಡಿದಿದ್ದ ದುಡ್ಡು ಬೆಳಗಾಂಗೆ ಹೋಗುವಾಗ ದುಡಿದಿದ್ದ ದುಡ್ಡನ್ನು ಗ್ರಾಮೀಣ ಪ್ರದೇಶದ ಮೇಲೆ ನೀವು ಖರ್ಚು ಮಾಡುವುದಿಲ್ಲವೆಂದರೆ, ಹಳ್ಳಿಯ ಜನರಿಗೆ Transport ವ್ಯವಸ್ಥೆಗೆ ಏನು ಮಾಡುತ್ತೀರಿ? Roads win the war ಎಂದು ನಾನು ಒಂದು ಕಡೆ ಓದಿದೆ. ರಸ್ತೆಗಳು ಸರಿಯಾಗಿದ್ದರೆ ಯುದ್ಧವನ್ನೇ ಗೆಲ್ಲುತ್ತವೆ. ಚೀನಾದವರ ಮೇಲೆ ಯುದ್ಧ ಮಾಡುವುದಕ್ಕೆ ಮೊದಲೇ ನಾವೇನಾದರೂ ಸಂಪರ್ಕ ಇಟ್ಟುಕೊಂಡು road ಗಳನ್ನು ಮಾಡಿದಿದ್ದರೆ ಆ ಯುದ್ದದ ಸ್ಥಿತಿಯೇ ಬೇರೆ ಆಗುತ್ತಿತ್ತು. ಹಳ್ಳಿಗಳು ಕೂಡ ಅಷ್ಟೇ, Roads make us prosper ಎಂದು ಇಂಗ್ಲೀಷ್‌ನವರು ಹೇಳುತ್ತಿದ್ದ ಸಿದ್ಧಾಂತದ ಆ ಮಾತು ಅದೇನೆಂದರೆ, ಎಲ್ಲಿಗೆ road ಇದೆ railway link ಇದೆ, ಅವರು prosper ಆಗಬಹುದು ಎಂದು ಯಾರಿಗೆ ಕಾಲ ಉಳಿಸಲಿಕ್ಕೆ ಆಗುತ್ತದೆ, ಅವರು prosper ಆಗಬಹುದು. ನಾವು ಬೆಳಗ್ಗೆ ಎದ್ದು ನಡೆದುಕೊಂಡು ಬಸ್ಸು ಹತ್ತಲಿಕ್ಕೆ ಬರುವುದಕ್ಕೆ 11 ಗಂಟೆ 12 ಗಂಟೆಯಾದರೆ ನಾವು ಹಳ್ಳಿ ಜನ ಏನು ಸಾಧನೆ ಮಾಡಬಹುದು? ದಯಮಾಡಿ ಯೋಚನೆ ಮಾಡಿ. ಸರ್ಕಾರ ಅಂದರೆ, ಒಂದು ಕಡೆ ಬಂದಿದ್ದನ್ನು ಇನ್ನೊಂದು ಕಡೆ ಖರ್ಚು ಮಾಡಬೇಕು. ಎಲ್ಲಾ ಸಂಘ ಸಂಸ್ಥೆಗಳು ಎಲ್ಲಾ ನಿಮ್ಮ ಕೆಳಗಿರುವ authority ಗಳು ಲಾಭ ಮಾಡಲಿ ಲಾಭ ಮಾಡಲಿ, ನೌಕರಿ ಮಾಡುವವರಿಗೆ bonus ಕೊಡುತ್ತೇವೆಂದು ಯೋಚನೆ ಮಾಡುವ ಸ್ಥಿತಿಗೆ ಸರ್ಕಾರಗಳು ಬಂದರೆ ಗ್ರಾಮೀಣ ಪ್ರದೇಶಗಳ ಗತಿ ಏನು? Monopoly, semi monopoly ಎಂದು ಈಗ start ಆಗಿಬಿಟ್ಟಿದೆ. ನಮ್ಮದು ಈಗ ದುರಂತ semi monopoly area. ಅಲ್ಲಿಗೆ Government bus ಇದೆ, ಅದೇ ರೀತಿ Civil bus ಸಹ ಇದೆ. ಅಲ್ಲಿಗೆ K.S.R.T.C. ಯವರು further operations ಮಾಡುವುದಿಲ್ಲ. Monopoly area ಇದ್ದರೆ ಏನೋ ಒಂದೋ ಎರಡೋ ಗ್ರಾಮೀಣ ಸಾರಿಗೆ ಹಾಕಿಕೊಡುತ್ತೇವೆ, ಇಲ್ಲವೆಂದರೆ ಹಾಕಲಿಕ್ಕೆ ಬರುವುದಿಲ್ಲ ಎಂದು ಹೇಳುತ್ತಾರೆ. Private bus ನವರು ಗ್ರಾಮೀಣ ಪ್ರದೇಶಕ್ಕೆ ಹೋಗುವುದಿಲ್ಲ, K.S.R.T.C. ಯವರು ಬಿಡುವುದಿಲ್ಲ. ಹಾಗಾಗಿ ತಾವು ನಮಗೆ ಏನು ಅನುಕೂಲವನ್ನು ಮಾಡಿಕೊಡುತ್ತೀರಿ ಎಂಬುದನ್ನು ಹೇಳಬೇಕು. ನೀರಿನ ಕುರಿತು ಹೇಳುವುದಾದರೆ, ನೀವೆಲ್ಲ ಶುದ್ಧಿಕರಿಸಿದ ನೀರನ್ನು ಕುಡಿಯುತ್ತೀರಿ. ಬೆಂಗಳೂರಿನಲ್ಲಿ ನೀರಿನ ಶುದ್ಧೀಕರಣದ ಘಟಕಕ್ಕೆ ನಾನು ಹೋಗಿ ನೋಡಿದೆ. ನೋವಾಯಿತು ನನಗೆ. ನಮ್ಮ ಹಳ್ಳಿ ಜನ ಆ ನೀರು ಯಾವ ಶುದ್ಧಿ ಇಲ್ಲದೆಯೇ ಹಾಗೆಯೇ ಕುಡಿಯುತ್ತಿದ್ದಾರಲ್ಲಾ ಎಂದು ನನಗೆ ಅನಿಸುತ್ತದೆ. ನಾನು ಆ ಹಳ್ಳಿಯಲ್ಲಿ

ಹುಟ್ಟಿರುವ ಮನುಷ್ಯ ಹಳ್ಳಿಯ ನೀರಿನಲ್ಲಿ flouride ಆದರೂ ಇರಲಿ, ವಿಷವಾದರೂ ಇರಲಿ ನಾವು ಇವತ್ತು ಅದನ್ನು ಕುಡಿಯಬೇಕಲ್ಲವೇ. ಅದು ಟ್ಯಾಂಕ್‌ಗೆ pump ಆಗುತ್ತದೆ. Tank ನಿಂದ ಆ ನೀರು ಮನೆಗೆ ಬರುತ್ತದೆ. Bangalore Water Supply ಗೆ ಕೊಟ್ಟಿರುವಂಥ ಸ್ಥಿತಿಯನ್ನು ನಾವು ನೋಡಿ ಅದನ್ನು ಹಳ್ಳಿಗೆ ನಾವು ಹೋಲಿಕೆ ಮಾಡಿಕೊಂಡರೆ we are treated as second grade citizen in Karnataka ಸನ್ಮಾನ್ಯ ಮುಖ್ಯಮಂತ್ರಿಗಳೇ, ಹಳ್ಳಿಯವರನ್ನು ಎರಡನೇ ದರ್ಜೆಯ ನಾಗರೀಕರು ಎಂದು treat ಮಾಡುವಂಥದ್ದು ವಾಸ್ತವ, ಸತ್ಯ. ಇದಕ್ಕೆ ಏನಾದರೂ ಒಂದು ಕಾಯಕಲ್ಪವನ್ನು ನೀವು ಮಾಡಬೇಕು. ದುಡ್ಡನ್ನು ಇಲ್ಲಿ ದುಡಿಯುತ್ತೇವೆ, ಇಲ್ಲಿ ಖರ್ಚು ಮಾಡುತ್ತೇವೆಂದಲ್ಲ, Is it right? ಬೆಂಗಳೂರಿನಲ್ಲಿ ಆಗುವ ದುಡಿಮೆ ಬೆಂಗಳೂರಿನವರಿಂದಲೇ ಆಗುವುದಿಲ್ಲ, ರಾಜ್ಯದ ನಾನಾ ಕಡೆಯಿಂದ, ರಾಷ್ಟ್ರದ ನಾನಾ ಕಡೆಯಿಂದ, ಸರ್ಕಾರಿ ನೌಕರರಿಂದ, ಸರ್ಕಾರಿ ವ್ಯವಸ್ಥೆಯಿಂದ, ವಿಧಾನಸೌಧ Secretariat ಇಲ್ಲಿ ಇರುವುದರಿಂದ ಇಲ್ಲಿ ಸುಮಾರು ದುಡಿಮೆ ಆಗುತ್ತಿದೆ. ಅದರ ಫಲವನ್ನು ನಮಗೆ, ಹಳ್ಳಿಗೆ ಕೊಡಬೇಕಲ್ಲಾ ನಾವು ಏನಾದರೂ ಸ್ವಲ್ಪ ಅಲ್ಲಿ ಖರ್ಚು ಮಾಡಬೇಕಲ್ಲ, ರಸ್ತೆಗಳು. 3054 ಗ್ರಾಂಟ್ ನಂತು ಹೋದ ಮೇಲೆ ನಮ್ಮ ಒಂದು ರಸ್ತೆ ಗುಂಡಿ ಮುಚ್ಚಿಲ್ಲ. ಅವರಿಗೆ ಗೊತ್ತಿಲ್ಲ. ಪ್ಯಾಕೇಜ್ ಎಂದು ಹೇಳಿ 3054 ಬಗ್ಗೆ ಸ್ಕೀಂ ಇಂಟ್ರಡ್ಯೂಸ್ ಮಾಡಿದ್ದೀರಿ 8 ಕಾಲ್ ಆಗಿದೆ. ನಮ್ಮ ತಾಲ್ಲೂಕಿನಲ್ಲಿ ಒಬ್ಬರೂ ಅರ್ಜಿ ಹಾಕಿಲ್ಲ. After eight calls, ಒಬ್ಬನೂ ಅಲ್ಲಿಗೆ ಟೆಂಡರ್ ಹಾಕಿಲ್ಲ. ಏಕೆಂದರೆ ಅವನಿಗೆ ವರ್ಕ್‌ಔಟ್ ಆಗಲ್ಲ. ಇಲ್ಲಿ ಎಲ್ಲೋ ಒಂದು ಕಡೆ ಕುಳಿತುಕೊಂಡು ಒಂದು ಕಿಲೋಮೀಟರ್ ರೋಡ್ ಮಾಡುವುದು ಹೇಗಿರುತ್ತದೆ? ಅಷ್ಟಕ್ಕೇನೇ 35 ಕಿಲೋಮೀಟರ್ ಒಂದು ಮಿಷನರಿ ಇಟ್ಟುಕೊಂಡು ಓಡಾಡುವುದು ಹೇಗಿರುತ್ತದೆ? ಕಂಡೀಷನ್ಸ್ ಹಾಕಿ ಬಿಡುತ್ತೀರಿ. ಇಂಥಂಥ ಇಕ್ವಿಪ್‌ಮೆಂಟ್, ಮಿಷನರಿ ಇದ್ದವರು ಮಾತ್ರ ಬಿಡ್ ಮಾಡಬೇಕೆಂದು ಕಂಡೀಷನ್ ಹಾಕುತ್ತೀರಿ ಯಾರಿಗೆ? ಆಂಧ್ರಪ್ರದೇಶದವರಿಗೆ, ತಮಿಳುನಾಡಿನವರಿಗೆ ಏನು ಸೂಟ್ ಆಗುತ್ತದೆ, ಅಷ್ಟೇ ಇವತ್ತು ಟೆಂಡರ್‌ನಲ್ಲಿರುವುದು. pre-qualification is fixed for Andhra people. Pre-qualification is fixed for Tamil Nadu people, Chennai people. ಅದು ಬೆಸ್ಕಾಂ ಇರಬಹುದು, ಕೆಪಿಟಿಸಿಎಲ್ ಇರಬಹುದು, ಪಿಡಬ್ಲ್ಯೂಡಿ ಇರಬಹುದು, ಕೆಆರ್‌ಡಿಸಿಎಲ್ ಇರಬಹುದು. ನಮ್ಮ ಎಲ್ಲಾ ಪ್ರಿ-ಕ್ವಾಲಿಫಿಕೇಷನ್ ಅನ್ನು ನಾವು ಕರ್ನಾಟಕದಲ್ಲಿ

ನಿಗದಿಮಾಡುತ್ತಿರುವುದು ಸ್ವಾಮಿ, ಹೊರ ರಾಜ್ಯದವರು ಬಂದು ಇಲ್ಲಿ ಏನಾದರೂ ಕಾಮಗಾರಿ ಮಾಡಲಿಕ್ಕೆ ಆಗುತ್ತದೆಯೇ? ಸಣ್ಣಮಟ್ಟ ಕೆಲಸ ಮಾಡಿಕೊಂಡಿದ್ದ ಹುಡುಗರಿಗೆ 20,30 ಲಕ್ಷ ರೂಪಾಯಿಗಳ ಪಗ್ಲಂಟ್ ಹಾಕಿಕೊಟ್ಟು ಕೆಲಸ ಮಾಡಿ ಎಂದರೆ ಇಡೀ ನಿಮ್ಮ ದುಡ್ಡು ಅಲ್ಲೇನಾದರೂ ಒಂದು 10 ಲಕ್ಷ ಗ್ರಾಂಟ್ ಇರುವುದಿಲ್ಲ. ಅವನು ಕೋಟಿಗಟ್ಟಲೆ ಇನ್‌ವೆಸ್ಟ್ ಮಾಡಿ ಪ್ಲಾಂಟ್ ಇಟ್ಟುಕೊಂಡು ರಸ್ತೆಗೆ ಗುಂಡಿ ಮುಚ್ಚಬೇಕೆಂದು ಪರೀಕ್ಷೆ ಮಾಡಿ "ಪುರ" providing urban Facilities to Rural Areas - ಎಂದು ಇಲ್ಲಿ ನಾವು ವ್ಯಾಖ್ಯಾನ ಮಾಡುತ್ತಾ ನಿಂತುಕೊಂಡರೆ ಅರ್ಥ ಉಳಿಯುತ್ತಾ? ಮತ್ತೆ, ನಿಮ್ಮ ಹುಡುಗರು, ಇದೊಂದು ದುರಂತ. ಅದು ಯಾರು ಮಾಡಿದರೋ ಗೊತ್ತಿಲ್ಲ. ಸರಿಯೋ, ತಪ್ಪೋ ಗೊತ್ತಿಲ್ಲ. ಇದು ಒಂದು ದೊಡ್ಡ ಕಥೆಯಾಯಿತು. ಎಸ್‌ಎಸ್‌ಎಲ್‌ಸಿ ಮೆರಿಟ್ ಕನ್ಸಿಡರ್ ಆಗುತ್ತಿತ್ತು, ಅಲ್ಲೇನೋ ಇಲ್ಲಿ ಹುಡುಗರು ಸ್ವಲ್ಪ ಚೆನ್ನಾಗಿ ಓದುತ್ತಾರೆಂದು ಪಿಯುಸಿಯನ್ನು ಇಂಟರ್‌ಮೀಡಿಯೇಟ್ ಕೋರ್ಸ್ ತಂದಿರಿ. ಅಲ್ಲೂ ಪರವಾಗಿಲ್ಲ ಹುಡುಗರು ಅನ್ನುವಾಗ ಸಿಇಟಿ ತಂದಿರಿ. ಸಿಇಟಿ ಇದನ್ನು ಎರಡನ್ನೂ ಟ್ಯಾಲಿ ಮಾಡುತ್ತೇವೆ, ಎರಡನ್ನೂ ಆವರೇಜ್ ತೆಗೆದುಕೊಳ್ಳುತ್ತೇವೆಂದಿರಿ. ಹಾಗೂ ಏನೋ ಹಳ್ಳಿ ಹುಡುಗರು ಬರುತ್ತಾರೆಂದರೆ, ಇಲ್ಲ ಬರೇ ಸಿಇಟಿ ಕನ್ಸಿಡರ್ ಮಾಡುತ್ತೇವೆ ಎಂದಿರಿ. ಪಿಯುಸಿ ಏಕೆ? ಮುಚ್ಚಿವೆ? ನೀವು ಪಿಯುಸಿಯನ್ನು ಏಕೆ ಇಟ್ಟುಕೊಂಡು ಕುಳಿತಿದ್ದೀರಿ? ಸಿಇಟಿಯಲ್ಲೇ ನಮ್ಮ ಮಕ್ಕಳಿಗೆ ಟೆಕ್ನಿಕಲ್ ಕೋರ್ಸ್‌ಗೆ ನೀವು ಅಡ್ಮಿಷನ್ ಕೊಡುವುದಾದರೆ, you close down the PUC course. - ಏತಕ್ಕೆ ಬೇಕು ಈ ಕೋರ್ಸ್? ಇಲ್ಲಿ ಅವನು ಪಿಯುಸಿನಲ್ಲಿ ಮಾರ್ಕ್ಸ್ ತೆಗೆದುಕೊಂಡು ಅವನಿಗೆ ಅಡ್ಮಿಷನ್ ಸಿಗಲಿಲ್ಲವೆಂದರೆ ಏತಕ್ಕೆ ಬರಬೇಕು? ಸಿಇಟಿ ಆಯಿತು, ಅನುಕೂಲ ಮಾಡಿದ್ದೀರಾ ನಮ್ಮ ಪ್ರಿವೇಲಿಂಗ್ ಇನ್ಸ್‌ಟಿಟ್ಯೂಷನ್ಸ್‌ನಲ್ಲಿ ನಮ್ಮ ಹಳ್ಳಿಯಲ್ಲಿರುವರಲ್ಲಿ ಮೊಫ್ಯುಸಿಲ್ ಟೌನ್‌ನಲ್ಲಿರುವುದರಲ್ಲಿ ಸಿಇಟಿ ಕೋರ್ಸ್‌ಗೆ ತಾವು ಈಗ ಅನುಕೂಲ ಮಾಡಿಕೊಟ್ಟಿದ್ದೀರಾ Are you not cheating us? ಹಳ್ಳಿ ಮಕ್ಕಳನ್ನು ನೀವು ಸಿಟಿ ಜನ ತುಳಿಯುತ್ತಿಲ್ಲವೇ ಹಾಗಾದರೆ? ನಮಗೆ ಒಂದು ಅಡ್ಮಿಷನ್ ಸಿಕ್ಕಲ್ಲ ಸಾರ್ ನಾಳೆ ಯಾರು ನಮಗೆ ಸಿಇಟಿ ಟೀಚ್ ಮಾಡುತ್ತಾರೆ? ನಮ್ಮ ಮಕ್ಕಳು ಅಲ್ಲಿ ಓದುವುದು ಹೇಗೆ? ನಾವೇನಾದರೂ ಮಕ್ಕಳನ್ನು ಓದಿಸಬೇಕೆಂದರೆ, ಹಳ್ಳಿಯಲ್ಲಿ ಬದುಕದೇ ಇವತ್ತು ಟೌನ್‌ಗೆ ಬಂದು ಮನೆ ಮಾಡಿಸುವಂಥ ಸ್ಟೇಜ್ ತಂದಿದ್ದೀರಿ. ಏನು ಮಾತನಾಡುತ್ತೇವೆ ನಾವು? ಯಾವ

ಫೆಸಿಲಿಟೀಸ್ ಅನ್ನು ಕ್ರಿಯೇಟ್ ಮಾಡಿಕೊಡುತ್ತೀರಿ ಎಂಬುದು ನಮಗೆ ಗೊತ್ತಿಲ್ಲ. ಇನ್ನು, ವಿದ್ಯುಚ್ಛಕ್ತಿ ಬಗ್ಗೆ ನಾನು ಈ ಸರ್ಕಾರಕ್ಕೆ ಕೇಳುವುದು, ಯಾರ ಭಾಷಣವೂ ಬೇಕಿರಲಿಲ್ಲ. ಎಲೆಕ್ಟ್ರಿಸಿಟಿ ಅನ್ನುವುದನ್ನು ತಾವು ಸರಿ ಮಾಡಿಬಿಟ್ಟರೆ ಪವರ್ ಒಂದನ್ನು ನೀವು ಕೊಟ್ಟುಬಿಟ್ಟರೆ ಕರ್ನಾಟಕ ರಾಜ್ಯ 60, 70 ಪರ್ಸೆಂಟ್ ಅದರಷ್ಟಕ್ಕೇ ಅದೇ ಡೆವಲಪ್ ಆಗಿಬಿಡುತ್ತದೆ. ಎಲೆಕ್ಟ್ರಿಸಿಟಿ ಇವತ್ತು ಬರೇ ಇಂಡಸ್ಟ್ರಿಗೆ ಬೇಕಿಲ್ಲ. electricity is core subject for agriculture. – ನಾವು ತೋಟ ಉಳಿಸಿಕೊಳ್ಳಬೇಕು. ಕಲಾಂ ಸಾಹೇಬರು ಹೇಳುತ್ತಾರೆ. ಹಾರ್ಟಿಕಲ್ಚರ್ ಏನಾಗಿದೆ ಸಾರ್ ಇಲ್ಲಿ? ಸನ್ಮಾನ್ಯ ಮುಖ್ಯಮಂತ್ರಿಗಳೇ ವಿದ್ಯುಚ್ಛಕ್ತಿಯನ್ನು ಬೆಳಗ್ಗೆ 3 ಗಂಟೆ, ರಾತ್ರಿ 4 ಗಂಟೆ ಹಳ್ಳಿಗೆ ಒಂದು ವಾರ, ಇನ್ನೊಂದು ವಾರ ಬೆಳಗ್ಗೆ 4 ಗಂಟೆ, ರಾತ್ರಿ 4 ಗಂಟೆ, ಎಂದು ತಾವು ಸ್ಕೀಂ ಮಾಡಿರುವುದು. ಒಂದು ದಿವಸಕ್ಕೆ ಈ ಬೆಂಗಳೂರಿನಲ್ಲಿ ಹೋಟೆಲ್ ಮಾಡುವವರು 12 ಹವರ್ಸ್ ಎಂದು ಮಾಡಿಕೊಂಡು ಬಿಟ್ಟಿದ್ದಾರೆ. ಸರ್ಕಾರವೂ ಈಗ 12 ಹವರ್ಸ್ ಎಂದು ಅಂದುಕಂಡುಬಿಟ್ಟಿದೆ. ಅದರಲ್ಲಿ 7 ಹವರ್ಸ್ ನಮಗೆ ಪವರ್ ನಿಮ್ಮ ಹತ್ತಿರ 24 ಹವರ್ಸ್ ಇಲ್ಲ. 7 ಹವರ್ಸ್‌ನಲ್ಲಿ ರಾತ್ರಿ ಯಾವಾಗ ಬರುತ್ತದೆ, ಯಾವಾಗ ಹೋಗುತ್ತದೆ ಎಂಬುದು ಗೊತ್ತಿಲ್ಲ. 3 ಹವರ್ಸ ನೀರು ಹಾಯಿಸಲಿಕ್ಕೆ, ನಾವು ಒಂದು ದಿವಸದ ಲೇಬರ್ ಕೊಡಬೇಕು. ಗೊತ್ತಿಲ್ಲ. ಮತ್ತೆ ರೋಸ್ಟರ್ ಒಂದು ದಿವಸ 7 ಗಂಟೆಯಿಂದ 10 ಗಂಟೆ, ಇನ್ನೊಂದು ದಿವಸ 10 ಗಂಟೆಯಿಂದ 1 ಗಂಟೆ. ಇನ್ನೊಂದು ದಿವಸ 1 ಗಂಟೆಯಿಂದ 4 ಗಂಟೆ. ಲೇಬರ್ ಅನ್ನು ಎಲ್ಲಿ ತರುವುದು? ಹೇಗೆ ಅಗ್ರಿಕಲ್ಚರಿಸ್ಟ್ ಸರ್ವೈವ್ ಆಗುವುದು? ತೋಟ ಇಟ್ಟುಕೊಂಡಿರುವವರು ಬೆಳೆಯುವುದು ಹೇಗೆ? ಡ್ರಿಪ್‌ಗೆ ಸಣ್ಣದೊಂದು ಸಬ್ಸಿಡಿ ಕೊಡುತ್ತಿದ್ದಿರಿ. ಅದೂ ನಿಲ್ಲಿಸಿಬಿಟ್ಟಿರಿ. ಕರ್ನಾಟಕದ ಹಳ್ಳಿಗಳಲ್ಲಿ ಇವತ್ತು ಹಾರ್ಟಿಕಲ್ಚರ್‌ಗೆ ವ್ಯಾಪಕವಾಗಿ ಸ್ಕೋಪ್ ಇದೆ, ನೀವು ಹಾರಿಟಿಕಲ್ಚರ್ ಅಭಿವೃದ್ಧಿ ಮಾಡಿ, ಫುಡ್ ಪ್ರೋಸೆಸಿಂಗ್ ಇಂಡಸ್ಟ್ರಿಗೆ ಎಂಟರ್ ಆಗಿಬಿಡಿ, ಇಷ್ಟು ಕೋಟಿ ಲಾಭ ಮಾಡಬಹುದು, ಎಕ್ಸ್‌ಪೋರ್ಟ್ಸ್ ಅರ್ನ್ ಮಾಡಬಹುದು ಎಂದು ಸನ್ಮಾನ್ಯ ರಾಷ್ಟ್ರಪತಿಗಳು ಭಾಷಣ ಮಾಡಿದರೆ, ಕರ್ನಾಟಕ ರಾಜ್ಯದಲ್ಲಿ ಇದ್ದಿದ್ದು ಸ್ಪೈಸಸ್ ಕ್ರಾಪ್ಸ್ ಸರ್ವನಾಶವಾಗಿದೆ. ಈಗ ತೆಂಗು ಸರ್ವನಾಶವಾಗುತ್ತಿದೆ. ತೆಂಗು ಹೋಯಿತು, ಯಾರೂ ತಲೆಕೆಡಿಸಿಕೊಳ್ಳಲಿಲ್ಲ. ಕಬ್ಬು ಹೋಯಿತು, ಮೆಣಸು ಹೋಯಿತು. ಏನು ಸಿಲ್ಕ್ ಇತ್ತು ಹೋಯಿತು. ಎಲ್ಲಿಗೆ ಹೋಯಿತು? ಯಾರು ತಲೆಕೆಡಿಸಿಕೊಂಡಿದ್ದಾರೆ ಗೊತ್ತಿಲ್ಲ. ಇನ್ನು, ತಂಬಾಕು ಹೋಯಿತು. ಕಾಟನ್ ಹೋಯಿತು. ಈವತ್ತು ಯಾವ ಪ್ರೆಸ್ಟೀಜಿಯಸ್ ಕ್ರಾಪ್ ನಿಮಗೆ ಇದೆ? ಒಂದು

ದಿವಸ, ಇಂಡಿಯಾ ದೇಶದ ಫಾರಿನ್ ಎಕ್ಸಚೇಂಜ್ ಮೊದಲೇ ಡಿಕ್ಲೇರ್ ಮಾಡುತ್ತಿದ್ದದ್ದು, ಇಂಡಿಯಾ ದೇಶದ ಟೆಕ್ಸ್‌ಟೈಲ್ ಎಕ್ಸ್‌ಪೋರ್ಟ್ ಮೇಲೆ. ನಾವೇನು ಹತ್ತಿ ಮತ್ತು ಬಟ್ಟೆ ಕಳುಹಿಸುತ್ತಿದ್ದೆವು, ಇಂಗ್ಲೀಷ್‌ನವರು ಇಲ್ಲಿ ಬಂದಿದ್ದಾಗ ಬಟ್ಟೆ ಕಳುಹಿಸುತ್ತಿದ್ದೆವು, ಅದರ ಮೇಲೆ ನಮ್ಮ ಶ್ರೀಮಂತಿಕೆ ಡಿಪೆಂಡ್ ಆಗಿದ್ದು. ನಿಮ್ಮ ದುಡ್ಡಲ್ಲಿ, ನಿಮ್ಮ ಬಂಗಾರದಲ್ಲಿ ಅಲ್ಲ. ಇಂಡಿಯಾ ದೇಶವನ್ನು ತುಳಿದದ್ದು ಅವರು. ಕಾಟನ್ ಅನ್ನು ಇಲ್ಲಿಂದ ತರಿಸಿಕೊಂಡು ಯಾರ್ನ್ ಅನ್ನು ಅಲ್ಲಿಂದ ಕಳುಹಿಸುವುದು.... ಇವತ್ತು ಆಗುತ್ತಿರುವುದು, ನಮ್ಮ ಮೈನ್ಸ್ ಇಲ್ಲಿಂದ ಅಲ್ಲಿಗೆ ಹೋಗುತ್ತಿದೆ. ಅಲ್ಲಿಂದ ನಾವು ಸ್ಟೀಲ್ ಕೊಳ್ಳುತ್ತಿದ್ದೇವೆ. ಒಂದು ದಿವಸ 23 ಸಾವಿರ, ಒಂದು ದಿವಸ 18 ಸಾವಿರ, ಒಂದು ದಿವಸ 26 ಸಾವಿರ. ಏನಾಗುತ್ತಿದೆ ದುಡ್ಡು? ನೀವು ಮೈನ್ಸ್‌ನಲ್ಲಾದ್ರೂ ಆ ಏರಿಯಾದ ಅಭಿವೃದ್ಧಿಗೆ ಒಂದು ಟೋಲ್ ಫಿಕ್ಸ್ ಮಾಡಿ. ನಿಮಗೆ ರಾಯಲ್ಟಿ ಹಾಕುವುದಕ್ಕೆ ಶಕ್ತಿ ಇಲ್ಲ. ಕೇಂದ್ರ ಸರ್ಕಾರದ ಪರ್ಮಿಟ್. ಆ ಪಂಚಾಯತ್‌ನವರಿಗೆ ಸ್ವಲ್ಪ ಕೊಡಲಿ. ತಾಲ್ಲೂಕು ಪಂಚಾಯತ್‌ನವರೆಗೆ ಸ್ವಲ್ಪ ಕೊಡಲಿ. ಏನಿಲ್ಲ ಏನ್ ಸಾರ್ ಇವತ್ತು ರೇಟ್? ತಮಗೆ 100 ರೂಪಾಯಿ ರಾಯಲ್ಟಿ ಕೊಟ್ಟು ಹೋಗುವವನು, ಕೋಸ್ಟಲ್‌ನಲ್ಲಿ ಐರನ್ ಓರ್ ಅನ್ನು ಒಂದು ಟನ್ ಮೈನ್ಸ್ ಮಾರುತ್ತಿರುವುದು 1400 ರೂಪಾಯಿಗೆ ಪರ್ ಟನ್ ಐರನ್ ಓರ್‌ಗೆ ಮಿನಿಮಂ ಪ್ರೈಸ್ ಇವತ್ತು 1400 ರೂಪಾಯಿ ಇದೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಹಿಂದಿನ ಬಜೆಟ್‌ನಲ್ಲಿ ಈ ಮೈನ್ಸ್ ಟ್ರಕ್ಸ್‌ಗೆಲ್ಲಾ ಟೋಲ್ ಫಿಕ್ಸ್ ಮಾಡಿ ಕಲೆಕ್ಟ್ ಮಾಡಿ ರಸ್ತೆಗಳನ್ನು ಅಭಿವೃದ್ಧಿ ಮಾಡುತ್ತೇವೆಂದು ಹೇಳಿದ್ದಿದೆ. ಬಜೆಟ್ ಭಾಷಣದಲ್ಲೇ ಇದೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಚಿಕ್ಕನಾಯಕನಹಳ್ಳಿ ಹೆಸರು ಹೇಳಿಯೇ ಹೇಳಿದ್ದಿದೆ. ಚಿಕ್ಕನಾಯಕನಹಳ್ಳಿಯಿಂದೇನು ಮೈನ್ಸ್ ಹೋಗುತ್ತದೆ, ಚಿಕ್ಕನಾಯಕನಹಳ್ಳಿಯಿಂದ ಹಾಸನಕ್ಕೆ ನಾನೊಂದು ಹೊಸ ರೋಡ್ ಮಾಡಿ ಟೋಲ್ ಕಲೆಕ್ಟ್ ಮಾಡುತ್ತೇವೆಂದು ಅವತ್ತು ಫೈನಾನ್ಸ್ ಮಿನಿಸ್ಟರ್ ಇಲ್ಲಿ ಹೇಳಿದ್ದರು. ಚೀಫ್ ಮಿನಿಸ್ಟರ್ ಕೂಡ ಅವರೇ ಬಜೆಟ್ ನಾಳೆ, ನಾಡಿದ್ದೋ ಮುಗಿದು ಹೊಸ ಬಜೆಟ್ ಸ್ಟಾರ್ಟ್ ಆದರೂ ಒಂದು ಸರ್ವೆ ಕೂಡ ಮಾಡಲಿಲ್ಲ. ಅದರ ಬಗ್ಗೆ ನಾನು ಬಜೆಟ್ ಮೇಲೆ ಮಾತನಾಡುವಾಗ ಮಾತನಾಡುತ್ತೇನೆ. ಈಗೇನಾಗಿದೆ? ಅಷ್ಟೊಂದು ಲೂಟಿಯಾಗುತ್ತಿದ್ದರೂ, ಅದರಲ್ಲೊಂದು 10 ಭಾಗ ಆ ಭಾಗದ ಜನಕ್ಕೆ ಪ್ರಯೋಜನವಾಗುವಂಥ ಸ್ಥಿತಿ ಇಲ್ಲ, ಮಾಡಿ ಅವರ ಹತ್ತಿರವೇ ಕಲೆಕ್ಟ್ ಮಾಡಿ ನಮಗೆ ಹಂಚಿ. ಕುಡಿಯುವ ನೀರಿನ ಸ್ಕೀಂಗಳನ್ನು

ಫಾರೆಸ್ಟೇಷನ್ ಮಾಡಿ. ಎಲ್ಲಾ ಬಿಟ್ಟು ರಾಷ್ಟ್ರಪತಿಗಳ ಬಾಷಣ ಚರ್ಚೆ ಮಾಡೋಣ ಎಂದರೆ ಏನಾಗಿದೆ? ಇನ್ನು ಟೆಕ್ನಿಕಲ್ ಎಜ್ಯುಕೇಷನ್ ಬಗ್ಗೆ ಅವರು ಮಾತನಾಡಿದ್ದಾರೆ. Nurses, why 5,000 per year? ಕರ್ನಾಟಕಕ್ಕೆ ಹೋದ ಸರ್ಕಾರ ಕೊಟ್ಟಿರುವ ಕಾಲೇಜ್‌ನಲ್ಲಿ we can generate 50,000 nurses. ಪ್ರಶ್ನೆ ಏನು? ಸನ್ಮಾನ್ಯ ರಾಷ್ಟ್ರಪತಿಗಳು ಹೇಳುವುದು, ಅವರಿಗೆ ಅಬ್ರಾಡ್‌ನಲ್ಲಿ ಸ್ಕೋಪ್ ಇದೆ. ಇಲ್ಲಲ್ಲ ಅವರಿಗೆ ನೀವು ಸ್ಪೋಕನ್ ಲಾಂಗ್ವೇಜ್ ಕಲಿಸಬೇಕು ಎಂದು ಹೇಳುತ್ತಾರೆ. ಅವರಿಗೆ ನೀವು ವ್ಯವಹಾರ ಗೊತ್ತಾಗುವ ಹಾಗೆ ಕಲಿಸಬೇಕು. ನರ್ಸಿಂಗ್ ಕೋರ್ಸ್‌ಗೆ ಹೋಗುವವರು, ನರ್ಸ್ ಆಗುವುದಕ್ಕೆ ಹೋಗುವವರು ಸ್ಪೋಕನ್ ಲಾಂಗ್ವೇಜ್ ಕಲಿತು ಅಬ್ರಾಡ್‌ಗೆ ಹೋಗಿ ಸರ್ವೀಸ್ ಮಾಡುತ್ತಾರೆಂದು ನಾವು ನಿರೀಕ್ಷೆ ಮಾಡಿದರೆ, ಅದು ಅವರು ಹುಟ್ಟಿದ ಕೇರಳಕ್ಕೆ ಏನಾದರೂ ಸ್ವಲ್ಪ ಆಗಬಹುದು. ಕರ್ನಾಟಕದಲ್ಲಿ ನಮ್ಮ ಮೇಸ್ಟ್ರುಗಳೇ ಊರು ಬಿಟ್ಟು 10 ಕಿಲೋಮೀಟರ್ ಹೋಗುವುದಿಲ್ಲ. ಇನ್ನು ಹೆಣ್ಣು ಮಕ್ಕಳನ್ನು ಫಾರಿನ್‌ಗೆ ಕಳುಹಿಸುತ್ತೀರಾ? 10 ಕಿಲೋಮೀಟರ್‌ಗೆ ಏನಾದರೂ ಒಬ್ಬ ಮೇಸ್ಟ್ರನ್ನು ಟ್ರಾನ್ಸಫರ್ ಮಾಡಿ ನೋಡಿ. ಏನೋ ಗಂಡಾಂತರ ಬಂತು ಎಂದು 20 ಬಾರಿ ಅವನು ಎಂಎಲ್‌ಎಗಳ ಹತ್ತಿರ ಬರುತ್ತಾನೆ. ಈ ನರ್ಸ್ ಕೋರ್ಸ್ ಅನ್ನು ಎನ್‌ವಿಸೇಜ್ ಮಾಡಿ ಅಬ್ರಾಡ್‌ನಲ್ಲಿ ಇಂಡಿಯಾ ದೇಶಕ್ಕೆ ಭಾರೀ ಬೇಡಿಕೆ ಇದೆ, ಎನ್ನುತ್ತಾರೆ ಸತ್ಯ. ನಾನು ಒಪ್ಪುತ್ತೇನೆ. ನರ್ಸಗಳಿಗೆ ಭಾರೀ ಬೇಡಿಕೆ ಇದೆ. ಇವತ್ತು ಡಾಕ್ಟರ್‌ಗಳಿಗೆ ಬಾರೀ ಬೇಡಿಕೆ ಇದೆ. ಅದರಲ್ಲೂ ಅನಸ್ತಿಟೆಸ್ಟ್‌ಗೆ ಭಾರೀ ಬೇಡಿಕೆ ಇದೆ. ನಾವು ಜನರೇಟ್ ಮಾಡಲಿಲ್ಲ. ನಮಗೆ ಕಾಮನ್ ನಾಲೆಡ್ಜ್ ಇಲ್ಲ. ಯಾವ್ಯಾವ ಕೋರ್ಸ್ ಈವನ ಮೆಡಿಸಿನ್‌ನಲ್ಲಿ ಯಾವ್ಯಾವ ಕೋರ್ಸ್‌ನಲ್ಲಿ ಇವತ್ತು ಹೊರಗಡೆ ಡಿಮ್ಯಾಂಡ್ ಇದೆ, ಯಾವುದರಲ್ಲಿ ಸೀಟ್ ಜಾಸ್ತಿ ಮಾಡಬೇಕು, ಯಾವುದರಲ್ಲಿ ಸೀಟ್ ಕಡಿಮೆ ಮಾಡಬೇಕು ಎಂಬುದು ಗೊತ್ತಿಲ್ಲ, ಅನಸ್ತಿಟೆಸ್ಟ್ ಇವತ್ತು ಸಿಗುತ್ತಿಲ್ಲ. ಜನರಲ್ ಆಸ್ಪತ್ರೆಗಳಿಗೆ ಇಲ್ಲ ಹೊರಗಡೆ ಏನಾದರೂ ಅವರು ಅರ್ಜಿ ಹಾಕಿಕೊಂಡರೆ ಈಜಿಯಾಗಿ ಕೆಲಸ ಸಿಗುತ್ತದೆ. ಮಾಡಲಿಲ್ಲ. ಈ ನರ್ಸ್‌ಗಳ ವ್ಯವಸ್ಥೆ ಏನಿದೆ ತಾವು ಸ್ವಲ್ಪ ನೋಡಬೇಕು. ಭಾರೀ ಕಾಲೇಜಗಳನ್ನು ಕೊಟ್ಟುಬಿಟ್ಟಿದ್ದೀರಿ. ಯಾವ ಲೆವೆಲ್‌ಗೆ ಅವರಿಗೆ ಎಜುಕೇಟ್ ಮಾಡುತ್ತಿದ್ದಾರೆನ್ನುವುದು ಬಹಳ ಮುಖ್ಯ. ಒಂದು ಟ್ರೇನ್ಡ್ ನರ್ಸ್ ಎಂದು ನಾವು ಅವರ ಹತ್ತಿರ ಶುಶ್ರೂಷೆಗೆ ಹೋದರೆ, ಏನೂ ಗೊತ್ತಿಲ್ಲದವರ ಹತ್ತಿರ ಟ್ರೀಟ್‌ಮೆಂಟ್ ತೆಗೆದುಕೊಳ್ಳುತ್ತಿದ್ದೇವೇನೋ ಎನ್ನುವ ಭಾವನೆ ನಮಗೆ ಬಂದಿದೆ. ಆ ಕಾಲೇಜ್‌ಗಳ ಲೆವೆಲ್ ಅನ್ನು ಮೊದಲೇ ಅಸರ್‌ಟೇನ್ ಮಾಡಬೇಕು. ಇನ್ನು,

ಫಾರೆಸ್ಟೇಷನ್ ಪ್ರೋಗ್ರಾಂ. ನಾನು ಹೇಳುತ್ತಿದ್ದೇನೆ, ರಾಜ್ಯದ ಕಾಡನ್ನು ಬಹಳ ಪ್ರಮುಖವಾದದ್ದನ್ನು ನಾವೇ ಕಳೆದು ಬಿಟ್ಟಿದ್ದೇವೆ. ಈಗಲಾದರೂ ಎಚ್ಚರವಹಿಸಿ ಕಾಡನ್ನು ಬೆಳೆಸಲಿಕ್ಕೆ ಮನಸ್ಸು ಮಾಡದೇ ಹೋದರೆ ಮತ್ತೇನಾದರೂ ಗ್ರೀನ್ ಅನ್ನು ಕರ್ನಾಟಕದಲ್ಲಿ ನಾವು ಸೃಷ್ಟಿ ಮಾಡದೇ ಹೋದರೆ ಎಲ್ಲಾ ಸಮಸ್ಯೆಗಳೂ ಜಾಸ್ತಿ ಆಗುತ್ತವೆ ಅನ್ನುವುದು ಬಿಟ್ಟರೆ ಕಡಿಮೆಯಾಗುವುದಿಲ್ಲ. ಇವತ್ತೇನಾದರೂ ನಮಗೆ ಏಕೆ ಸೀಸನಲ್ ರೇನ್ ಇಲ್ಲವೆಂದರೆ, because of deforestaion. ನಾನು ಇವತ್ತು ಇದ್ದ ಕಾಡೆಲ್ಲಾ ಕಳೆದುಬಿಟ್ಟು ಇವತ್ತು ಮಳೆ ಬಾ ಎಂದರೆ ಹೇಗೆ ಬರುತ್ತದೆ? ಯಾವುದೋ ಮಳೆ ಬರುತ್ತದೆ. ಸುನಾಮಿಯಲ್ಲಿ ಬಂದ ಹಾಗೆ ನಮಗೆ ಚಿಕ್ಕನಾಯಕನಹಳ್ಳಿಯಲ್ಲಿ ಈಗ ಮಾರ್ಚ್ ತಿಂಗಳಲ್ಲಿ ಮಳೆ ಬಿದ್ದಿದೆ. ನಾವು ನಿರೀಕ್ಷೆಯೇ ಮಾಡಿರಲಿಲ್ಲ. ಮಂತ್ರವೇ ಆಗಿದೆ ಈಗ ದಿಢೀರ್ ಎಂದು ಮಾರ್ಚ್‌ನಲ್ಲಿ ಮಳೆ ಬಿದ್ದಿದೆ. ಯಾರೂ ಕಾದಿರಲಿಲ್ಲ. ಮಾವು ಹೋಯಿತು. ಹುಣಸೆ ಕಾಯಿಯೆಲ್ಲಾ ಹೋಯಿತು. ಮಳೆಗೆ ಸಿಕ್ಕಿದರೆ ಹೋಗುತ್ತದೆ. ನೀವು ತಪ್ಪು ತಿಳಿದುಕೊಳ್ಳಬೇಡಿ. ಆಲಿಕಲ್ಲು ಮಳೆ ಬಿದ್ದರೆ ಮಾವು ಹೋಗುವುದಿಲ್ಲವೇ? ನಮ್ಮ ಏರಿಯಾದಲ್ಲಿ ಬಿದ್ದಿದೆ ಮಾವೇ ಇರಲಿಲ್ಲ. ಹುಣಸೆಕಾಯಿ ಹೋಗುತ್ತದೆಂದು ಒಪ್ಪುತ್ತೀರಾ ಹೋಗಲಿ, ಇದೆಲ್ಲಾ ಹೋಗಿ ನಾವು ಇವತ್ತು ಬದುಕಿದ್ದೇವೆ. ನಿಜವಾಗಿ ಹಳ್ಳಿಯವರು ಬಹಳ ತಲೆ ಎತ್ತಿ ತಿರುಗಾಡುವ ಸ್ಥಿತಿಯಲ್ಲಿಲ್ಲ? ಒಂದೇ ಒಂದು ಅಂದರೆ 6 ಪರ್ಸೆಂಟ್‌ಗೆ ಬಡ್ಡಿ ಕೊಡುವ ಹೊತ್ತಿಗೆ ಮಾನ ಮರ್ಯಾದೆ ಉಳಿಸಿಕೊಂಡು ನಾವು ಹಳ್ಳಿಯಲ್ಲಿ ಬದುಕಿದ್ದೇವೆ. ತಕ್ಷಣ ಹಾರ್ಟಿಕಲ್ಚರ್ ಬಗ್ಗೆ ಈ ಸರ್ಕಾರ ಗಮನ ಕೊಡಬೇಕು. ತೆಂಗು ವ್ಯಾನಿಷ್ ಆಗುತ್ತಿದೆ, ಇವತ್ತು ಸ್ಪೈಸಸ್ ಕ್ರಾಪ್ಸ್ ವ್ಯಾನಿಷ್ ಆಗುತ್ತಿದೆ, ಇಡೀ ನಮ್ಮ ಕಾಫಿ ಏರಿಯಾದಲ್ಲಿ ಇವತ್ತು ಶುಂಠಿ ಬೆಳೆಯುತ್ತಿದ್ದಾರೆ. ಬಹುಶಃ ಕಾಫಿ ಬೆಳೆಯುವವರಿಗೆ ಗೊತ್ತು, ಎಂಟೈರ್ ಕಾಫಿ ನಾಶವಾಯಿತು, ಅವರೆಲ್ಲರೂ ಇವತ್ತು ಶುಂಠಿಗೆ ಅರಿಶಿಣಕ್ಕೆ ಬಂದಿದ್ದಾರೆ. ಅದೂ ಕೂಡ ಬಿದ್ದು ಹೋಯಿತು. ಇವತ್ತು ಕಾಫಿ ಎಸ್ಟೇಟ್‌ನಲ್ಲಿ ಶುಂಠಿ ಹಾಕಿಕೊಂಡು ಕುಳಿತ್ತಿದ್ದಾರೆ, ನಾವು ತೆಂಗು ಇಟ್ಟು ಕೊಂಡವರು ಇವತ್ತು ತೋಟಕ್ಕೆ ಹೋಗುವುದನ್ನು ಬಿಟ್ಟುಬಿಟ್ಟಿದ್ದೇವೆ. ಏಕೆಂದರೆ, ನೀರು ಕೊಡುವುದಕ್ಕಾಗುವುದಿಲ್ಲ ಎಂದು ಬಿಟ್ಟು ಬಿಟ್ಟಿದ್ದೇವೆ. ಆ ಹಾರ್ಟಿಕಲ್ಚರ್ ಕ್ರಾಪ್ ಅನ್ನು ನೀವು ಡೆವಲಪ್ ಮಾಡಬೇಕು. ಮತ್ತೆ ಫುಡ್ ಪ್ರೋಸೆಸಿಂಗ್ ಬಗ್ಗೆ ಒಂದೆರಡು ಮಾತು ಹೇಳುತ್ತೇನೆ. ಪ್ರೋಸೆಸಿಂಗ್ ಇಂಡಸ್ಟ್ರಿಯನ್ನು ಖಂಡಿತವಾಗಿ ನಾವು ಒಂದು ಕಡೆನೂ ಮಾಡಲಿಲ್ಲ. ಯಾವುದೇ ಒಂದು ಅಗ್ರಿಕಲ್ಚರ್ ಕಮಾಡಿಟಿಯನ್ನು ಪ್ರೋಸೆಸ್ ಮಾಡಿ

ಮಾರುವಂಥ ಎಜುಕೇಷನ್ ಕೊಡಲಿಲ್ಲ, ಅದಕ್ಕೆ ನಾವು ಕೋಲ್ಡ್ ಸ್ಟೋರೇಜ್ ಲಂಕೇಜ್ ಕೊಡಲಿಲ್ಲ, ನಾವೇನಾದರೂ ಬೆಳೆದರೆ ಅದನ್ನು 15 ದಿವಸ, ತಿಂಗಳ ಗಟ್ಟಲೆ ಇಡುವ ಶಕ್ತಿ ನಮಗೆ ಇಲ್ಲ. ಒಂದು ಕ್ವಿಂಟಾಲ್‌ಗೆ ಏಳು ಸಾವಿರ ರೂಪಾಯಿ ಇದ್ದಂಥ ಅಡಿಕೆ ಬೆಲೆ ಇವತ್ತು ಹದಿನೆಂಟು ಸಾವಿರ. ಮಾನ್ಯ ವಾಟಾಳ್ ರವರೇ ರೈತರ ಹತ್ತಿರ ಇವತ್ತು ಒಂದೇ ಒಂದು ಕ್ವಿಂಟಾಲ್ ಅಡಿಕೆ ಇಲ್ಲ. ಇದು ತಮಗೆ ಗೊತ್ತಿದೆ. ಎಲ್ಲಾ ವರ್ತಕರ ಹತ್ತಿರ ಇದೆ, ದುಡ್ಡು ಇಟ್ಟುಕೊಂಡಿರುವವರು 600 ಕ್ವಿಂಟಾಲ್, 700 ಕ್ವಿಂಟಾಲ್ ಅಡಿಕೆ ಇಟ್ಟುಕೊಂಡು 40 ಲಕ್ಷ ರೂ 50 ಲಕ್ಷ ರೂ ಮಾಡಿಕೊಳ್ಳುವ ಸ್ಥಿತಿ ಇದೆ. ಸರ್ಕಾರ ಅಲ್ಲಿ ನಡೆಯುತ್ತಿದಿಯೇ? ಅಡಿಕೆ ಬೆಲೆ ಬಿದ್ದು ಹೋಗಿದೆ, ಇದಕ್ಕೆ ಏನಾದರೂ ಮಾಡಿ ಎಂದು ಬಡಿದುಕೊಂಡೆವು. ಇನ್ನು ತೆಂಗು ಹೋದ ವರ್ಷ ನಾವು ಕ್ವಿಂಟಾಲ್ ಕೊಬ್ಬರಿಗೆ 10 ಸಾವಿರ ರೂಪಾಯಿನಂತೆ ಮಾರುತ್ತಿದ್ದೆವು. ಈಗ ಐದು ಸಾವಿರ ಚಿಲ್ಲರೆಗೆ ಬಂದಿದ್ದೇವೆ. ಯಾರನ್ನು ನಂಬಿಕೊಂಡು ಬೆಳೆ ಬೆಳೆಯಬೇಕು? ಏನು ನಂಬಿಕೊಂಡು ಬೆಳೆ ಬೆಳೆಯಬೇಕು? ಈ ಸ್ಥಿತಿಯಲ್ಲಿ ಇರುವಾಗ, ನಾವು ಏನು ಮಾಡಬೇಕು? ಸಲ್ಯೂಷನ್ ಅವರು ಹೇಳಿದ್ದಾರಲ್ಲವೆ? ನಾವು ನಿಮ್ಮ ರಕ್ಷಣೆಗೆ ಬರುತ್ತೇವೆ, 200 ಕೋಟಿ ಇಟ್ಟಿದ್ದೇವೆ, ಸ್ಟೆಬಲೈಸೇಷನ್ ಫಂಡ್ ಇಟ್ಟಿದ್ದೇವೆ. ನೀವು ಕಾಯಿರಿ ಎಂದು ಹೇಳುತ್ತೀರಿ, ನಾನು ಆಗ ಎಪಿಎಂಸಿ ಯಲ್ಲಿ ಇರುವ ದುಡ್ಡನ್ನೇ ನಮಗೆ ಕೊಟ್ಟು ಒಂದು ವರುಷ, ಆರು ತಿಂಗಳು ಗೋಡೌನ್ ಮಾಡುವಷ್ಟು ಪರ್ಮಿಷನ್ ಕೊಡಿ ಎಂದು ನಾವು ಅವತ್ತು ಹೇಳಿದ್ದೆವು. ಎಪಿಎಂಸಿ ತಿಪಟೂರು, ಎಪಿಎಂಸಿ ದಾವಣಗೆರೆ, ಇವತ್ತು ಹಣ ಇದೆ ಎಂದು ಸುಮ್ಮನೆ ಖರ್ಚು ಮಾಡುವಂಥ ಸ್ಥಿತಿ, ರೋಡ್ ಮಾಡುತ್ತೇವೆ, ಮಾರ್ಕೆಟ್ ಡೆವಲಪ್ ಮಾಡುತ್ತೇವೆಂದು ಹೇಳುತ್ತಾರೆ, ನಮಗೆ ಸ್ಟೆಬಿಲಿಟಿ ಫಂಡ್ ಕೊಡಿಸಿ, ಇಂಟ್ರೆಸ್ಟ್ ಫ್ರೀ ಲೋನ್ ಕೊಡಿಸಿ, ನಮ್ಮ ಮಾಲು ಇಟ್ಟುಕೊಂಡು ಲೋನ್ ಕೊಡಿ ಎಂದರೆ ಯಾರೂ ಕೊಡಲಿಲ್ಲವೆ? ಆರು ತಿಂಗಳು, ಒಂದು ವರ್ಷ ರೈತರ ಕ್ರಾಪ್ ಇಟ್ಟುಕೊಂಡು ನೀವು ಲೋನ್ ಕೊಡಿಸಿದ್ದರೆ ಇವತ್ತು ಅಡಿಕೆ ಬೆಳೆಗಾರರು ನಾವು ಈ ಸ್ಥಿತಿಗೆ ಬರುತ್ತಿದ್ದೇವಾ? ಕೊಬ್ಬರಿ ಬೆಳೆಯುವವರು ಏನಾದರೂ ಈ ಸ್ಥಿತಿಗೆ ಬರುತ್ತಿದ್ದೇವಾ, ಈ ಕಡೆ ಸರ್ಕಾರ 'ಗಮನಕೊಡಬೇಕು, ಯಾರೋ ಬಂದು ಭಾಷಣ ಮಾಡಿ ಹೋದರು ಎನ್ನುವುದಕ್ಕಿಂತ ನಮ್ಮ ಸಮಸ್ಯೆಗಳು ನಮಗೆ ಚೆನ್ನಾಗಿ ಗೊತ್ತಿದೆ. ಇಲ್ಲಿ ಶಾಸಕರಾಗಿರುವವರಿಗೆ ಅನೇಕ ಜನರಿಗೆ ಅವರವರ ಭಾಗದ ಸಮಸ್ಯೆಗಳೇನು ಎಂಬುದು ಗೊತ್ತಿದೆ. ಆ ಕಡೆ ಸರ್ಕಾರ ಏನಾದರೂ ಗಮನಹರಿಸಿಬಿಟ್ಟರೆ ಅದು ನಿಜವಾಗಿಯೂ ಕೂಡ ರಾಷ್ಟ್ರಪತಿಗಳಿಗೆ ಕೊಟ್ಟ

ಗೌರವವೆಂದು ನಾವು ಭಾವಿಸುತ್ತೇವೆ. ಮಾನ್ಯ ಕಲಾ, ಸಾಹೇಬ್ರು ಏನು ಇಲ್ಲಿ ಬಂದು ನಮ್ಮನ್ನು ಉದ್ದೇಶಿಸಿ ಭಾಷಣ ಮಾಡಿ ಕರ್ನಾಟಕಕ್ಕೆ 11 ಅಂಶಗಳ ಸೂತ್ರಗಳನ್ನು ಕೊಟ್ಟು ಹೋಗಿದ್ದಾರೆ. ಆ ಸೂತ್ರ ಗಾಳಿಪಟ ಆಗಬಾರದು, ಗಾಳಿಯಲ್ಲಿ ಹಾರಿ ಹೋಗಿಬಿಟ್ಟರೆ ಅದಕ್ಕೆ ಏನು ಮಹತ್ವ ಉಳಿಯುವುದಿಲ್ಲ, ಅದಕ್ಕೆ ನಾವು ಇಲ್ಲಿ ಕುಳಿತುಕೊಂಡು ವಂದನೆ ಸಲ್ಲಿಸುತ್ತೇವೆಂದರೆ ಆಗುವುದಿಲ್ಲ. ಅವರು ಈ ರಾಜ್ಯದ ಜನಗಳ ಪರವಾಗಿ ಇಲ್ಲಿ ಮಾತನಾಡಿದ್ದಾರೆ, ಅವರಿಗೇನಾದರೂ ರಿಯಲ್ ಸರ್ವೀಸ್ ನಾವು ಕೊಟ್ಟರೆ ಅವರ ಭಾಷಣಕ್ಕೆ ನಾವು ಕೊಟ್ಟ ವಂದನೆ ಎಂದು ಅರ್ಪಿಸಿಬಿಟ್ಟು, ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು: ಈಗ ಊಟವಾದ ನಂತರ ಚರ್ಚೆಗೆ ತೆಗೆದುಕೊಳ್ಳೋಣ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಉಪಾಧ್ಯಕ್ಷರೆ, ಹತ್ತು ನಿಮಿಷ ನಾನು ಶುರುಮಾಡಿ, ನಂತರ ಊಟವಾದ ಮೇಲೆ ನಾನು ಪುನ: ಮಾತನಾಡುತ್ತೇನೆ, ಈಗ ಒಂದಿಷ್ಟು ಶುರು ಮಾಡುತ್ತೇನೆ.

ಉಪಾಧ್ಯಕ್ಷರು : ನೀವು ಊಟವಾದ ನಂತರವೇ ಶುರು ಮಾಡಿಬಿಡಿ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಹಿರಿಯರ ಭಾಷಣವನ್ನು ಕಂತುಗಳಲ್ಲಿ ಕೇಳುವುದು ಬೇಡ, ಈಗಲೇ ಕಂಟಿನ್ಯೂಯಸ್ ಆಗಿ ಮಾತನಾಡಲಿ ಇಲ್ಲವೆಂದರೆ ನಾವು ಅದೇ ರೀತಿ ಮಾತನಾಡುವುದು. ಊಟವಾದ ನಂತರವೇ ಮಾತನಾಡಲಿ.

ಶ್ರೀ ವಾಟಾಳ್ ನಾಗರಾಜ್ : ಈಗ ಹತ್ತು ನಿಮಿಷ ಶುರು ಮಾಡಿ, ನಂತರ ಮುಂದುವರಿಸುತ್ತೇನೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಹಿರಿಯರ ಭಾಷಣ ನಮಗೆ ಕಂತು ಗಳಲ್ಲಿ ಬೇಡ, ಆದುದರಿಂದ ಊಟವಾದ ನಂತರ ತಾವು ಕಂಟಿನ್ಯೂ ಮಾಡಿ.

ಉಪಾಧ್ಯಕ್ಷರು : ಮಾನ್ಯ ನಾಗರಾಜ್‌ರವರೇ, ಊಟವಾದ ಮೇಲೆ ಪೂರ್ತಿ ಮಾತನಾಡಿಬಿಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಈಗ ಐದು ನಿಮಿಷ ಮಾತನಾಡಿ, ನಂತರ ಮಾತನಾಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಈಗ ಆರಂಭ ಮಾಡುವಾಗ ತಾವು ಕುಳಿತಿದ್ದೀರಿ ಮುಂದೆ ಕುಳಿತುಕೊಳ್ಳುತ್ತಿರೋ ಇಲ್ಲವೋ ಎಂದು ಅನುಮಾನ ಅದಕ್ಕಾಗಿ ತಾವು ಈಗ ಕುಳಿತ್ತಿದ್ದೀರಿ, ನಿಮ್ಮ ಎದುರಿಗೆ ಮಾತನಾಡಿ ನಂತರ ಮುಂದಕ್ಕೆ ಹೋಗೋಣ ಅಂತ.

ಉಪಾಧ್ಯಕ್ಷರು : ಐದು ನಿಮಿಷ ಮಾತನಾಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಈಗ ಎರಡೇ ನಿಮಿಷ ಆಮೇಲೆ ಶುರು ಮಾಡುತ್ತಾರೆ.

ಉಪಾಧ್ಯಕ್ಷರು : ಎರಡೇ ನಿಮಿಷ, ಆಯಿತು ಪ್ರಾರಂಭ ಮಾಡಿ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಸುಮಾರು ದಿವಸಗಳ ನಂತರ ತಮ್ಮನ್ನು ಅಲ್ಲಿ ಕಂಡಿದ್ದಾರೆ ಅದಕ್ಕೆ ಅವರು ಮಾತನಾಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ): ಮಾನ್ಯ ಉಪಾಧ್ಯಕ್ಷರೆ, ನಾನು ಊಟಮಾಡಿ ಬಂದಮೇಲೆ ನೀವು ಅಲ್ಲಿ ಇರುತ್ತೀರೋ ಇಲ್ಲವೋ ಎಂದು ನನಗೆ ಅನುಮಾನ, ಅದಕ್ಕೆ ಈಗ ಶುರು ಮಾಡುತ್ತೇನೆ. ಮೊನ್ನೆ ರಾಜ್ಯಪಾಲರ ಭಾಷಣ ಚರ್ಚೆ ಮಾಡಬೇಕೇ ಬಿಡಬೇಕೇ ಎನ್ನುವ ಸಂದರ್ಭ ಬಂದಾಗ, ಏನಾದರೂ ತಮ್ಮನ್ನು ಮೇಲಕ್ಕೆ ಕರೆಯುತ್ತಾರೋ ಏನೋ ಎಂದು ನೋಡುತ್ತಿದ್ದೆ, ಕೊನೆಗೂ ನಿಮ್ಮನ್ನು ಮೇಲಕ್ಕೆ ಮೂರು ದಿವಸ ಕರೆಯಲಿಲ್ಲ. ನಿಜಕ್ಕೂ ನಾವು ಬಹಳ ನಿಮ್ಮನ್ನು ಏನಾದರೂ ಕರೆದು ಅಲ್ಲಿ ಕೂರಿಸುತ್ತಾರೋ ಎಂದು ನೋಡುತ್ತಿದ್ದೆವು. ಇವತ್ತು ಧಾರಾಳವಾಗಿ ನಿಮ್ಮನ್ನು ಅಲ್ಲಿ ಕೂರಿಸಿರುವುದರಿಂದ ನಾವು ನಿಮಗೆ ಅಭಿನಂದನೆಗಳನ್ನು ಸಲ್ಲಿಸಿ, ಅವರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತೇವೆ. ಮಾನ್ಯ ರಮೇಶ್‌ಕುಮಾರ್‌ರವರೇ, ಒಂದ್ನಿಮಿಷ ಕುಳಿತುಕೊಳ್ಳಿ, ಬಹಳ ಪ್ರಾಮುಖ್ಯವಾದ ವಿಚಾರ ಆರಂಭ ಮಾಡುತ್ತೇನೆ, ನೀವು ಆಮೇಲೆ ಹೋಗಿ, ಮಾನ್ಯ ಶ್ರೀರಾಮರೆಡ್ಡಿಯವರು ಬನ್ನಿ, ನಾನು ನಿಮಗೂ ಹೇಳುತ್ತೇನೆ. ಈ ಸಂದರ್ಭದಲ್ಲಿ ಸುವರ್ಣ ಕರ್ನಾಟಕಕ್ಕೆ ನಮ್ಮ ರಾಷ್ಟ್ರಪತಿಗಳು ನವೆಂಬರ್ 20ನೇ ತಾರೀಖು ಇಲ್ಲಿ ಭಾಷಣ ಮಾಡಿದರು. ಈ ಸುವರ್ಣ ಕರ್ನಾಟಕದ ಶಿಲ್ಪಿಗಳು ಯಾರು? ಭಾಷಣದಲ್ಲಿ ಅವರ ಹೆಸರುಗಳು ಬರಬೇಕಾಗಿತ್ತು. ಸುವರ್ಣ ಕರ್ನಾಟಕ ಅಂದರೆ ಏನು? ಅಭಿವೃದ್ಧಿಗಿಂತಲೂ ಹೆಚ್ಚಾಗಿ, ಸುವರ್ಣ ಕರ್ನಾಟಕದ ಶಿಲ್ಪಿಗಳು, ಯಾರು ಅದು ಬರಬೇಕಾಗಿತ್ತು ದಿವಂಗತರುಗಳಾದ ನಿಜಲಿಂಗಪ್ಪನವರ ಹೆಸರು ಬರಬೇಕಾಗಿತ್ತು, ಕೆಂಗಲ್ ಹನುಮಂತಯ್ಯನವರ ಹೆಸರು ಬರಬೇಕಾಗಿತ್ತು, ದೇವರಾಜ್ ಅರಸ್‌ರವರ ಹೆಸರು ಬರಬೇಕಾಗಿತ್ತು, ನಿಜಲಿಂಗಪ್ಪನವರು ಕರ್ನಾಟಕ ಏಕೀಕರಣ ಇತಿಹಾಸದಲ್ಲಿ ಹೋಗುತ್ತಾರೆ, ಕೆಂಗಲ್ ಹನುಮಂತಯ್ಯನವರು ಏಕೀಕರಣಕೋಸ್ಕರ ಅಧಿಕಾರವನ್ನೇ ಕಳೆದುಕೊಳ್ಳುತ್ತಾರೆ, ಕರ್ನಾಟಕ ಎಂಬ ನಾಮಕರಣ ಶ್ರೀಮಾನ್ ದೇವರಾಜ್ ಅರಸುರವರು, ಹೊಸ ಜಿಲ್ಲೆಗಳ ನಿರ್ಮಾಣ ಜೆ.ಹೆಚ್.ಪಟೇಲ್, ಇವರೆಲ್ಲರೂ ಇತಿಹಾಸದಲ್ಲಿ ಹೋಗುತ್ತಾರೆ. ನನಗೆ ಅನಿಸುತ್ತದೆ, ತಾವು ಕರ್ನಾಟಕದ ಪ್ರಗತಿಯ ಸೂತ್ರಗಳೆಂದು ಇಲ್ಲಿ ಭಾಷಣ ಮಾಡುವಾಗ, ನಮ್ಮವರು ರಾಷ್ಟ್ರಪತಿಯವರಿಗೆ

ಇತಿಹಾಸವನ್ನು ಹೇಳುವಾಗ, ಈ ರೀತಿಯಾದಂಥ ಒಂದು ದೊಡ್ಡ ಇತಿಹಾಸವೇ ಇದೆ. ಈ ಸದನವನ್ನು ಕಟ್ಟಿದಂತವರು ಕೆಂಗಲ್ ಹನುಮಂತಯ್ಯನವರು, ಆ ಪೀಠದಲ್ಲಿ ಭಾಷಣ ಮಾಡುವಾಗ, ಅವರ ಹೆಸರು ಬರತಕ್ಕಂಥದ್ದು ಅವಶ್ಯಕತೆ ಇತ್ತು. 1956 ನವೆಂಬರ್ 1ನೇ ತಾರೀಖು ಸೆಂಟ್ರಲ್ ಕಾಲೇಜ್ ಕ್ರಿಕೆಟ್ ಮೈದಾನದಲ್ಲಿ ಆಗ ರಾಷ್ಟ್ರಪತಿಗಳಾಗಿದ್ದ ಶ್ರೀ ರಾಜೇಂದ್ರ ಪ್ರಸಾದ್‌ರವರು, ರಾಜ ಪ್ರಮುಖರಾದ ಜಯಚಾಮರಾಜ ಓಡೆಯರ್‌ರವರು, ನಿಜಲಿಂಗಪ್ಪನವರು, ಆಗ ತಾನೇ ಮೊದಲನೇ ಮುಖ್ಯಮಂತ್ರಿಗಳು, ಕರ್ನಾಟಕ ಏಕೀಕರಣ ಆದನಂತರ "ಉದಯವಾಗಲಿ ಚೆಲುವ ಕನ್ನಡ ನಾಡು" ಹುಯಿಲುಗೋಳರವರು ಆಡಿದಂಥ ಉದಯವಾಗಲಿ, ಚೆಲುವ ಕನ್ನಡ ನಾಡನ್ನು, "ಉದಯವಾಯಿತು ಚೆಲುವ ಕನ್ನಡ ನಾಡು" ಇದನ್ನು ಹಾಡಿದವರು ಪಿ. ಕಾಳಿಂಗರಾಯರು. ಇದೊಂದು ಇತಿಹಾಸ. ಅದೇ ಇತಿಹಾಸವನ್ನು 50ನೇ ವರ್ಷದ ಇತಿಹಾಸವನ್ನು ನಾವು ಮೆಲುಕು ಹಾಕುತ್ತಿದ್ದೇವೆ, ಆ 50ನೇ ವರ್ಷದ ಇತಿಹಾಸವನ್ನು ನಮ್ಮ ರಾಷ್ಟ್ರದ ಒಬ್ಬ ಆದರ್ಶ ರಾಷ್ಟ್ರಪತಿಯವರು ಮಾಡಿದಂಥ ಭಾಷಣದ ಬಗ್ಗೆ ಇಲ್ಲಿ ಚರ್ಚೆ ಆರಂಭವಾಗುತ್ತಿ ನನಗೆ ಅನ್ನಿಸುತ್ತದೆ, ಈ 50 ವರ್ಷದ ಸುವರ್ಣ ಮಹೋತ್ಸವದಲ್ಲಾದರೂ ಕನ್ನಡದ ಬಗ್ಗೆ, ಕನ್ನಡಿಗರ ಬಗ್ಗೆ, ಕರ್ನಾಟಕದ ಬಗ್ಗೆ, ಇವೆಲ್ಲವನ್ನೂ ಚಿಂತನೆ ಮಾಡಬೇಕು. ಹಿಂದೆ ಕೆಂಗಲ್ ಹನುಮಂತಯ್ಯನವರು ವಿಧಾನ ಪರಿಷತ್ತಿಗೆ ನಾಮಕರಣ ಮಾಡಬೇಕಾದರೆ, ನಾಮಕರಣ ಅಂದರೆ, 'ಪಿಟೀಲು ಚೌಡಯ್ಯನವರನ್ನು ನಾಮಕರಣ ಮಾಡಿದ್ದರು, ಗುಬ್ಬಿ ವೀರಣ್ಣನವರನ್ನು ನಾಮಕರಣ ಮಾಡಿದ್ದರು, ಈಗ ನಾಮಕರಣ ಅಂದರೆ ಅದಕ್ಕೆ ಬೆಲೆನೇ ಇಲ್ಲ, ಇವತ್ತು 28ನೇ ತಾರೀಖಿಗೆ ರಾಜ್ಯಸಭಾ ಚುನಾವಣೆ ಬರುತ್ತದೆ, ಈ ರಾಜ್ಯಸಭಾ ಚುನಾವಣೆಗೆ ನಾಲ್ಕನೇ ಅಭ್ಯರ್ಥಿಯನ್ನಾಗಿ ಯಾರನ್ನು ಮಾಡಬೇಕು ಎನ್ನುವ ಬಗ್ಗೆ, ಯಾವ ಪಕ್ಷದಲ್ಲೂ, ಆ ಪಕ್ಷಕ್ಕಾಗಿ ತ್ಯಾಗ ಮಾಡಿದಂಥವರು, ದುಡಿದಂಥವರು, ಹೋರಾಟ ಮಾಡಿದಂಥವರು, ಯಾರೂ ಸಿಕ್ಕಲಿಲ್ಲವೆಂದರೆ ಹೇಗೆ? ತ್ಯಾಗ ಮಾಡಿದಂಥ, ರಾಜ್ಯಕ್ಕೆ ಗೌರವ ತಂದಂಥ ಸಾಹಿತಿಗಳು, ಬರಹಗಾರರು, ಪತ್ರಕರ್ತರು, ಹಿರಿಯರು, ವಿಜ್ಞಾನಿಗಳು, ನಮ್ಮ ರಾಜ್ಯದಲ್ಲಿ ಯಾರೂ ಇಲ್ಲವೇ? ಕಾಂಗ್ರೆಸ್‌ನವರಿಗೂ ಒಬ್ಬರೂ ಸಿಕ್ಕಲಿಲ್ಲ, ಭಾರತೀಯ ಜನತಾ ಪಕ್ಷಕ್ಕೂ ಸಿಕ್ಕಲೇ ಇಲ್ಲ. ಪ್ರಕಾಶ್ ಗುಂಪಿನವರಿಗೂ ಸಿಕ್ಕಲಿಲ್ಲ, ಕುಮಾರಸ್ವಾಮಿ ಗುಂಪಿನವರಿಗೆ ಸಿಕ್ಕಲಿಲ್ಲ, ಹಾಗೆಂದರೆ ಹೇಗೆ? ಕೇರಳದವರು ಒಬ್ಬರು, ನಾಲ್ಕನೇ ಅಭ್ಯರ್ಥಿಯಾಗಿ... ಆಂಧ್ರದವರು. . . ಪ್ರಕಾಶ್‌ರವರ ಗುಂಪು ಇಲ್ಲವೇ?

ಶ್ರೀ ಡಿ.ಟಿ. ಜಯಕುಮಾರ್ : ಮಾನ್ಯ ಪ್ರಕಾಶ್‌ರವರು ಗುಂಪು ಹಾಗೂ ಕುಮಾರಸ್ವಾಮಿರವರ ಗುಂಪು ಎಂದು ಇಲ್ಲ, ಎಲ್ಲಾ ಜೆಡಿ (ಎಸ್) . .

ಶ್ರೀ ವಾಟಾಳ್ ನಾಗರಾಜ್ : ಆಯಿತು ಜಾತ್ಯಾತೀತ ಜನತಾದಳ ದಲ್ಲಾದರೂ ಯೋಚಿಸಿರಿ, ಅವರ ಪಕ್ಷದಲ್ಲಿ ಮಾನ್ಯ ಪ್ರಕಾಶ್‌ರವರನ್ನೇ ಮಾಡಬಹುದಾಗಿತ್ತಲ್ಲಾ; ಪ್ರಕಾಶ್‌ರವರಿಗೆ ನಾವು ಎಲ್ಲಾ ಮತ ಹಾಕುವುದಕ್ಕೆ ತಯಾರಿದ್ದೇವೆ, ನಾವು ರೆಡಿ, ನಾವು ಮಾಧುಸ್ವಾಮಿ ಹಾಗೂ ಶ್ರೀರಾಮರೆಡ್ಡಿಯವರು ಮಾತನಾಡಿದೆವು, ನಾವು ಮತ ಹಾಕುವುದಕ್ಕೆ ತಯಾರಾಗಿದ್ದೇವೆ

ಶ್ರೀ ಸಿ.ಟಿ. ರವಿ : ಅಂದ್ರೆ ನೀವು ಎಷ್ಟು ದಿವಸದಿಂದ ಈ ಪ್ಲಾನ್ ಹಾಕಿಕೊಂಡಿದ್ದಿರಿ? ಮಾನ್ಯ ಪ್ರಕಾಶ್‌ರವರನ್ನು ಇಲ್ಲಿಂದ ಕಳುಹಿಸಬೇಕೆಂದು,

ಡಾ: ಕೆ. ಅನ್ನದಾನಿ : ಒಂದ್ನಿಮಿಷ ಈಲ್ಡ್ ಆಗಿ. ಸಾರ್ ಒಂದೇ ಒಂದು ಸೆಕೆಂಡು...

ಶ್ರೀ ಆರ್. ದಿನೇಶ್ ಗುಂಡೂರಾವ್:ಮಾನ್ಯ ವಾಟಾಳ್ ನಾಗರಾಜ್‌ರವರೆ...

ಡಾ: ಕೆ. ಅನ್ನದಾನಿ : ಮಾನ್ಯ ದಿನೇಶ್‌ರವರೇ, ಒಂದ್ನಿಮಿಷ ನಾನು ಅವರನ್ನು ಕೇಳಿಕೊಂಡಿದ್ದೇನೆ, ಒಂದು ಸೆಕೆಂಡ್ ..... ಸನ್ಮಾನ್ಯ ಹಿರಿಯ ಸದಸ್ಯರಾದ ವಾಟಾಳ್ ನಾಗರಾಜ್ ಸಾಹೇಬರ ಪ್ರತಿ ಚರ್ಚೆಯಲ್ಲಿಯೂ ಕೂಡ ಸ್ವಲ್ಪ ಮಟ್ಟಿಗೆ ರಾಜಕೀಯವನ್ನು ಬೆರೆಸಿಕೊಂಡು ಮಾತನಾಡತಕ್ಕಂಥದ್ದು ಅವರ ಭಾಷಣದ ಶೈಲಿ. ಇವತ್ತಿನದಿವಸ ಇಲ್ಲಿ ಚರ್ಚೆಯಾಗುತ್ತಿರುವುದೇನೆಂದರೆ . .

ಶ್ರೀ ಸಿ.ಟಿ. ರವಿ : ಮಾನ್ಯ ವಾಟಾಳ್ ನಾಗರಾಜ್‌ರವರು ಸ್ವಲ್ಪ ಮಟ್ಟಿನ ರಾಜಕೀಯ ಮಾಡುತ್ತಿಲ್ಲ. ಅವರು ಜಾಸ್ತಿ ಪ್ರಮಾಣದ ರಾಜಕಾರಣ ಮಾಡುತ್ತಿದ್ದಾರೆ.

ಡಾ: ಕೆ. ಅನ್ನದಾನಿ: ಇವತ್ತು ಚರ್ಚೆಯಾಗತಕ್ಕದ್ದು ರಾಷ್ಟ್ರಪತಿಯವರು ಏನೊಂದು ಸೂತ್ರಗಳನ್ನು ಇಲ್ಲಿಟ್ಟಿದ್ದಾರೆಯೋ ಅದರ ಬಗ್ಗೆ ಇವತ್ತಿನ ದಿವಸ ಇಲ್ಲಿ ಚರ್ಚೆಯಾಗಬೇಕಾಗಿದೆಯಷ್ಟೆ. ಆದರೆ, ಇವತ್ತು ರಾಜ್ಯ ಸಭೆಗೆ ಚುನಾವಣೆ ಆಗತಕ್ಕಂಥದ್ದು ಮತ್ತು ನಾವು ಯಾರನ್ನು ಅಭ್ಯರ್ಥಿಮಾಡಿಕೊಳ್ಳುತ್ತೇವೆ ಎನ್ನತಕ್ಕಂಥದ್ದು ನಮ್ಮ ಆಂತರಿಕ ವಿಚಾರ. ಆದ್ದರಿಂದ, ಜಾತ್ಯಾತೀತ ಜನತಾದಳ, ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷದ ಬಗ್ಗೆ ಅವರು ನೇರವಾಗಿ ಟೀಕೆ ಮಾಡತಕ್ಕಂಥದ್ದು ಸರಿಯಲ್ಲ. ಇವತ್ತಿನ ವಿಷಯದ ಬಗ್ಗೆ ಅವರು ಏನು ಚರ್ಚೆಯನ್ನು ಆರಂಭಮಾಡ ಬೇಕಾಗಿದೆಯೋ..

ಶ್ರೀ ಕೆ. ರಮೇಶ್‌ಕುಮಾರ್ : ಮಾನ್ಯ ವಾಟಾಳ್ ನಾಗರಾಜ್‌ರವರು ಆಂತರಿಕ ವ್ಯವಹಾರಗಳ ಮೇಲೆ ಅವರು ಪ್ರವೇಶ ಮಾಡುತ್ತಿಲ್ಲ. ಸಾರ್ವಜನಿಕ ಜೀವನದಲ್ಲಿ ರಾಜಕೀಯ ಮೌಲ್ಯಗಳ ಕುಸಿತ ಹೇಗೆ ಇದೆ ಎಂಬುವುದರ ಬಗ್ಗೆ ಅವರು ಆಂತಕವನ್ನು ವ್ಯಕ್ತಪಡಿಸಿದ್ದಾರೆ. ಆ ಪಕ್ಷ ಈ ಪಕ್ಷ ಎಂದು ಹೇಳಿರತಕ್ಕಂಥದ್ದಲ್ಲ. ಹಣದ ಥೈಲಿ ಹಿಡಿದುಕೊಂಡು ಬರತಕ್ಕಂಥವರ ಮೇಲೆ ನಮಗೆ ಇರತಕ್ಕಂಥ ಮಮಕಾರ ನಮಗಾಗಿ ತ್ಯಾಗ ಮಾಡಿದಂಥವರ ಬಗ್ಗೆ ಇರುವುದಿಲ್ಲ, ನಾವು ರಾಜಕೀಯವಾಗಿ ಈ ಮಟ್ಟಕ್ಕೆ ಇಳಿದಿದ್ದೇವೆ ಎಂದು ಹೇಳುತ್ತಿದ್ದಾರೆಯೇ ಹೊರತು, ಯಾರ ಮೇಲೂ ಅವರು ಆಪಾದನೆ ಮಾಡಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅನ್ನದಾನಿಯವರೆ, ನಾನು ಯಾರ ಮೇಲೂ ಆಪಾದನೆ ಮಾಡಿಲ್ಲ.

ಶ್ರೀ ಆರ್. ದಿನೇಶ್ ಗುಂಡೂರಾವ್ : ಮಾನ್ಯ ವಾಟಾಳ್‌ನಾಗರಾಜ್‌ರವರೆ, ಒಂದು ನಿಮಿಷ. ಮಾನ್ಯ ಉಪಾಧ್ಯಕ್ಷರೆ, ನಾನು ಹೇಳತಕ್ಕಂಥದ್ದು ಏನೆಂದರೆ, ಒಂದು ಸಲ ಕೇರಳದಿಂದ ಬಂದಿದ್ದರೆ, ಇನ್ನೊಂದು ಸಲ ತಮಿಳುನಾಡಿನಿಂದ ಎಂ.ಎ.ಎಂ.ರಾಮಸ್ವಾಮಿ ಎಂಬುವವರು ಬಂದಿದ್ದರು. ಈ ರೀತಿಯಾಗತಕ್ಕಂಥದ್ದು ಸರಿಯಲ್ಲ. ಈ ವಿಷಯಕ್ಕೆ ಸಂಬಂಧಪಟ್ಟಂತೆ ಮಾನ್ಯ ವಾಟಾಳ್‌ನಾಗರಾಜ್‌ರವರು ಹೇಳಿರತಕ್ಕಂಥ ಮಾತಿಗೆ ನಾವು ಸಂಪೂರ್ಣವಾದ ಬೆಂಬಲವನ್ನು ಕೊಡುತ್ತೇವೆ. ಒಂದು ವೇಳೆ ನಮ್ಮ ರಾಜ್ಯದಲ್ಲಿ ಒಳ್ಳೆಯ ಸಾಹಿತಿಗಳು ಅಥವಾ ಗಣ್ಯರು ಇಲ್ಲದೇ ಇದ್ದಂಥ ಸಂದರ್ಭದಲ್ಲಿ ಇಂಥವರನ್ನು ಬೇಕಾದರೆ ಮಾಡಬಹುದು. ಎಂ.ಎ.ಎಂ.ರಾಮಸ್ವಾಮಿ ಅಂತಹವರನ್ನು ಇಲ್ಲಿಂದ ರಾಜ್ಯಸಭಾ ಮೆಂಬರ್ ಮಾಡುತ್ತೇವೆಂದರೆ ಇದರ ಅರ್ಥವೇನು?

ಶ್ರೀ ಡಿ.ಟಿ. ಜಯಕುಮಾರ್ : ಎ.ಕೆ. ಆಂತೋಣಿಯವರು ಇಲ್ಲಿಂದ ಆಗಿರಲಿಲ್ಲವೆ?

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಎಂ.ಎ.ಎಂ. ರಾಮಸ್ವಾಮಿಯವರ ಜೊತೆಗೆ ಎ.ಕೆ. ಆಂತೋಣಿಯವರನ್ನು ತಾವು ಹೋಲಿಕೆ ಮಾಡುತ್ತೀರಾ?

ಶ್ರೀ ಡಿ.ಟಿ.ಜಯಕುಮಾರ್ : ಬೇರೆ ರಾಜ್ಯದಿಂದ ಬಂದು ಇಲ್ಲಿಂದ ರಾಜ್ಯಸಭಾ ಮೆಂಬರ್ಸ್ ಆಗಿರುತಕ್ಕಂಥದ್ದು ಮುಗಿದು ಹೋದಂಥ ಕತೆ. ಅದನ್ನು ಮತ್ತೇಕೆ ಹೇಳತ್ತೀರಿ?

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಮಾನ್ಯ ಉಪಾಧ್ಯಕ್ಷರೆ, I salute you Sir. I salute you. You are a great man. M.A.M. Ramaswamy is compared with A.K. Antony. We salute your genius.

ಉಪಾಧ್ಯಕ್ಷರು : ಮಾನ್ಯ ಅನ್ನದಾನಿಯವರೆ, ತಾವು ಕುಳಿತುಕೊಳ್ಳಿ. ನಿಮಗೆ ಅವಕಾಶ ಕೊಟ್ಟಂಥ ಸಂಧರ್ಭದಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡಿ. ಮಾನ್ಯ ವಾಟಾಳ್‌ನಾಗರಾಜ್‌ರವರೆ, ತಮ್ಮ ಭಾಷಣವನ್ನು ಮುಂದುವರಿಸಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೆ, 50ನೇ ವರ್ಷದ ಸುವರ್ಣ ಕರ್ನಾಟಕ ವರ್ಷದಲ್ಲಿಯಾದರೂ ನಾಲ್ಕನೇ ಅಭ್ಯರ್ಥಿ ಅಚ್ಚ ಕನ್ನಡಿಗರಾಗಲಿ, ಕರ್ನಾಟಕದವರೇ ಆಗಲಿ. ಕರ್ನಾಟಕ ಏಕೀಕರಣಕ್ಕೆ, ಕರ್ನಾಟಕ ನಾಡಿಗೆ, ಕನ್ನಡ ಭಾಷೆಗೆ ಯಾವುದಾದರೊಂದು ವಿಧದಲ್ಲಿ ದುಡಿದಿರತಕ್ಕಂಥವರನ್ನು ತಾವು ಅಭ್ಯರ್ಥಿಯನ್ನಾಗಿ ಮಾಡಿದರೆ ನಿಮಗೆ ಶರಣು, ಶರಣಾರ್ಥಿ, ಇದರ ಬಗ್ಗೆ ನನ್ನದೇನೂ ಅಭ್ಯಂತರವಿಲ್ಲ. ಆದರೆ ನಮ್ಮ ಪಕ್ಷದಲ್ಲಿ ಯಾರೂ ಕೂಡ ಒಬ್ಬ ಅಭ್ಯರ್ಥಿ ಇಲ್ಲ, ಆದ್ದರಿಂದ ನಾವು ಆಂಧ್ರಪ್ರದೇಶದವರನ್ನು, ಕೇರಳ ರಾಜ್ಯದವರನ್ನು ಅಥವಾ ಬೇರೆ ರಾಜ್ಯದವರನ್ನು ಕರೆದುಕೊಂಡು ಬರುತ್ತೇವೆಂದು ಹೇಳಿದರೆ ನಾವೆಲ್ಲರೂ ತಲೆ ತಗ್ಗಿಸಿ ನಮ್ಮ ತಲೆಯನ್ನು ಈ ಕನ್ನಡ ತಾಯಿಯ ಭೂತಲಕ್ಕೆ ತಲೆ ತಗ್ಗಿಸಬೇಕಾಗುತ್ತದೆ. ಇದು ನಿಜವಾಗಿಯೂ ಕೂಡ ಒಳ್ಳೆಯದಲ್ಲ. ನಾನು ಈ ಸಂದರ್ಭದಲ್ಲಿ ಹೇಳುವುದೇನೆಂದರೆ, ಈಗಲೂ ಇನ್ನೂ ಕಾಲ ಮಿಂಚಿಲ್ಲ. ನಾನು, ಮಾನ್ಯ ಮಾಧುಸ್ವಾಮಿ, ಮಾನ್ಯ ಶ್ರೀರಾಮರೆಡ್ಡಿ ಮತ್ತು ಮಾನ್ಯ ಜಯಪ್ರಕಾಶ್ ಹೆಗ್ಡೆಯವರು ಹಾಗೂ ರಾಜೇಂದ್ರನ್ ನಾವೆಲ್ಲರೂ ಕೂಡ ತಯಾರಾಗಿದ್ದೇವೆ ಮತ್ತೆ ನಾವು ಕೇಳುವುದೇನೆಂದರೆ, ಈ ಸಂಧರ್ಭದಲ್ಲಿ ಮಾನ್ಯ ಸಿಂಧ್ಯಾರವರಿಗೆ ಮತ್ತು ಮಾನ್ಯ ಸಿದ್ದರಾಮಯ್ಯನವರಿಗೆ ಹೇಳುವುದೇನೆಂದರೆ, ಇವತ್ತಿನ ದಿವಸ ನಮಗೆ ನಿಜವಾದ ಗೌರವ ಬರಬೇಕೆಂದರೆ, ಹಿಂದೆ ಇಲ್ಲಿಂದ ಮಾನ್ಯ ವೆಂಕಯ್ಯನಾಯ್ಡುರವರು ಮತ್ತು ರಾಮಸ್ವಾಮಿಯವರು ರಾಜ್ಯಸಭಾ ಮೆಂಬರ್ ಆಗಿ ಹೋಗಿದ್ದಾರೆ. ಈಗ ಮತ್ತೊಬ್ಬರನ್ನು ಹೊರಗಡೆಯಿಂದ ತರುತ್ತೇವೆಂದರೆ ಕನ್ನಡಿಗರು ತಲೆತಗ್ಗಿಸಬೇಕಾಗುತ್ತದೆ. ಈಗ ಮಾಡುತ್ತಿರುವ ಸುವರ್ಣ ಕರ್ನಾಟಕ ಯಾರಿಗೋಸ್ಕರ ಮತ್ತು ಯಾವ ಉದ್ದೇಶಕ್ಕಾಗಿ? ಇದು ಯಾರಿಗೂ ಗೌರವ ತರತಕ್ಕಂಥದ್ದು ಅಲ್ಲ. ಮತ್ತೆ ಈ ರಾಜ್ಯಕ್ಕಂತೂ ಅಗೌರವ ಖಂಡಿತವಾಗುತ್ತದೆ. ಕನ್ನಡಕ್ಕಾಗಿ ದುಡಿದಂಥ ಸಾಹಿತಿಗಳು, ಕವಿಗಳು, ಪತ್ರಕರ್ತರು ಮತ್ತು

ಮೇಧಾವಿಗಳ ಹೆಸರುಗಳ ಒಂದು ಪಟ್ಟಿಯನ್ನು ಬೇಕಾದರೆ ನಿಮಗೆ ಕೊಡುತ್ತೇನೆ. ಇದರಲ್ಲಿ ಯಾರನ್ನು ಬೇಕಾದರೂ ನೀವು ಆಯ್ಕೆ ಮಾಡಿಕೊಳ್ಳಿ. ನಾಲ್ಕನೇ ಅಭ್ಯರ್ಥಿ ಪಕ್ಷಾತೀತವಾಗಿ ನಮ್ಮ ರಾಜ್ಯದಲ್ಲಿ ಎಲೆ ಮರೆಯ ಕಾಯಿಯಂತೆ ಕುಳಿತುಕೊಂಡಿರುವ ಒಬ್ಬರನ್ನು ಕರೆದುಕೊಂಡು ಬಂದು, ರಾಜ್ಯಸಭಾ ಮೆಂಬರ್ ಆಗಿ ನಾವು ಮಾಡೋಣ. ಈ ರೀತಿ ಮಾಡಿದರೆ ನಿಜವಾಗಿಯೂ ಕೂಡ ಬಹಳ ಸಂತೋಷವಾಗುತ್ತದೆ. ಆದರೆ, ಸುವರ್ಣ ಕರ್ನಾಟಕದ ಹೆಸರು ಹೇಳಿಕೊಂಡು ನಾವು ಕರ್ನಾಟಕದ ಬಗ್ಗೆ ಮಾತನಾಡುತ್ತೇವೆ ಕನ್ನಡ ಸಾಹಿತ್ಯದ ಬಗ್ಗೆ ಮಾತನಾಡುತ್ತೇವೆ ಮತ್ತು ಕರ್ನಾಟಕ ಇತಿಹಾಸದ ಬಗ್ಗೆ ಮಾತನಾಡುತ್ತೇವೆ. ಆದರೆ, ನಾವು ಇದರ ಬಗ್ಗೆ ಏನು ಮಾಡುತ್ತಿದ್ದೇವೆಂದರೆ ಖಂಡಿತ ಏನೂ ಮಾಡುತ್ತಿಲ್ಲ. ಇದಕ್ಕೆ ಗೌರವ ಬರಬೇಕಾದರೆ ಖಂಡಿತವಾಗಿ ನಾಲ್ಕನೇ ಅಭ್ಯರ್ಥಿ ಕನ್ನಡಿಗರೇ ಆಗಬೇಕು. ನಾಲ್ಕನೇ ಅಭ್ಯರ್ಥಿಗೆ ಈಗ ನಮಗೆ ಗೊತ್ತಿಲ್ಲದೆ ಇರತಕ್ಕಂಥ ಚಂದ್ರಶೇಖರ್ ಅಥವಾ ರಾಜಶೇಖರ್ ಹೆಸರುಗಳು ಕೇಳಿಬರುತ್ತಿವೆ. ಇವರು ಯಾರು ಎಂಬುದು ನಮಗೂ ಗೊತ್ತಿಲ್ಲ. ಆದ್ದರಿಂದ, ಈ ಸಂದರ್ಭದಲ್ಲಿ ತಮ್ಮ ಮೂಲಕ, ಇಲ್ಲಿ ಕುಳಿತಿರತಕ್ಕಂಥ ಎಲ್ಲಾ ಪಕ್ಷದವರಿಗೆ ಹೇಳುವುದೇನೆಂದರೆ, ದ್ರೌಪದಿಯ ಸೀರೆಯನ್ನು ಎಳೆಯುವಾಗ ಮೌನವಾಗಿ ಕುಳಿತುಕೊಂಡಂತೆ ತಾವ್ಯಾರೂ ಕುಳಿತುಕೊಳ್ಳಬಾರದು. ಇವತ್ತಿನ ಪರಿಸ್ಥಿತಿಯಲ್ಲಿ ರಾಜ್ಯಸಭೆಗೆ ಈ ರಾಜ್ಯದವರೇ ಹೋಗಬೇಕು. ಮತ್ತೆ ಈ ರಾಜ್ಯದವರೇ ಗೆಲ್ಲಬೇಕು. ಆದ್ದರಿಂದ ಇಲ್ಲಿರತಕ್ಕಂಥ ಎಲ್ಲಾ ಪಕ್ಷದವರಿಗೆ ಕಳಕಳಿಯಿಂದ ಕೈಮುಗಿದು ಕೇಳುವುದೇನೆಂದರೆ ಯಾವುದೇ ಪಕ್ಷದವರು ಇಲ್ಲಿನ ಅಭ್ಯರ್ಥಿ ಹಾಕಿದರೆ ನಮ್ಮ ಮತವನ್ನು ಅವರಿಗೆ ಕೊಡುತ್ತೇವೆ. ಈ ಸಂದರ್ಭದಲ್ಲಿ ನನ್ನ ಸ್ಪಷ್ಟವಾದ ಅಭಿಪ್ರಾಯವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಕಡೆ ಕಾಂಗ್ರೆಸ್‌ನವರು ಆ ಕಡೆ ಎರಡು ಗುಂಪಿನವರು ಇದ್ದಾರೆ. ಈ ಸಂದರ್ಭದಲ್ಲಿ ಎಲ್ಲರಿಗೂ ಕೈಮುಗಿದು ಕಳಕಳಿಯಿಂದ ಮನವಿ ಮಾಡಿಕೊಳ್ಳುವುದೇನೆಂದರೆ, ರಾಜ್ಯಸಭೆಗೆ ನಾಲ್ಕನೇ ಅಭ್ಯರ್ಥಿಯನ್ನು ಹೊರಗಡೆಯಿಂದ ಕರೆದುಕೊಂಡು ಬಂದು ಗೆಲ್ಲಿಸಿದರೆ ಸುವರ್ಣ ಕರ್ನಾಟಕದ ಈ ಭಾಷಣಕ್ಕೆ ಬೆಲೆ ಇಲ್ಲ. ಮತ್ತೆ ನಿಮ್ಮ ಪಕ್ಷಗಳಿಗೂ ಸಹ ಬೆಲೆ ಬರುವುದಿಲ್ಲ. ಈ ರಾಜ್ಯದ 5 ಕೋಟಿ ಜನರು ಎಲ್ಲೋ ಒಂದು ಕಡೆ ನಿಮ್ಮನ್ನು ಎಚ್ಚರದಿಂದ ನೋಡುತ್ತಾರೆ. ಮತ್ತೆ ನೀವು ಅಪಾಯಕ್ಕೆ ಸಿಲುಕುತ್ತೀರಿ. ಆದ್ದರಿಂದ, ಈಗಲಾದರೂ ನಿಮ್ಮ ತಲೆಯಲ್ಲಿದ್ದರೆ ದಯವಿಟ್ಟು ಬದಲಾವಣೆ ಮಾಡಿ. ನಮ್ಮ ರಾಜ್ಯದಲ್ಲಿರುವವರನ್ನು ಹುಡುಕ ಬೇಕಾದರೆ ನಿಮಗೆ ಹೆಸರು ಹೇಳುತ್ತೇನೆ. ನಮ್ಮವರೇ ಆಗಿರುವ ಗುರುಪಾದಸ್ವಾಮಿ ಅಥವಾ ಪಾಟೀಲ್

ಪುಟ್ಟಪ್ಪ ಅಥವಾ ಡಾ:ಸಿದ್ದಲಿಂಗಯ್ಯನವರನ್ನು ಕರೆದುಕೊಂಡು ಬಂದು ಆಯ್ಕೆ ಮಾಡಿ. ಬೇಕಾದರೆ ಒಂದು ಸಾವಿರ ಜನರ ಹೆಸರುಗಳ ಪಟ್ಟಿಯನ್ನು ನಾನು ನಿಮಗೆ ಕೊಡುತ್ತೇನೆ. ಮತ್ತೆ ಮಾನ್ಯ ನಂಜೇಗೌಡರನ್ನು ಕರೆದುಕೊಂಡು ಮಾಡಿ. ಮಾನ್ಯ ವಿಜಯಸಂಕೇಶ್ವರರವರನ್ನು ಕರೆದುಕೊಂಡು ಬಂದು ನಿಲ್ಲಿಸಿ. ಇದಕ್ಕೂ ನಾನು ಸಂತೋಷಪಡುತ್ತೇನೆ. ಮತ್ತೆ ಅವರಿಗೆ ನಾವೂ ಮತ ಹಾಕುತ್ತೇವೆ. ಬೇಕಾದರೆ ನಾಲ್ಕನೇ ಅಭ್ಯರ್ಥಿಯಾಗಿ ಮಾನ್ಯ ಸಿಂಧ್ಯಾರವರು ಅಥವಾ ಮಾನ್ಯ ಪ್ರಕಾಶ್‌ರವರು ನಿಂತರೂ ನಾವು ಮತ ಕೊಡುತ್ತೇವೆ. ಈ ರೀತಿಯಾಗದಿದ್ದರೆ ನಾವು ನಾಳೆದಿವಸ ತೀವ್ರವಾಗಿ ವಿರೋಧ ಮಾಡುತ್ತೇವೆ. ಮತ್ತೆ ಇದು ಒಳ್ಳೆಯದೂ ಕೂಡ ಅಲ್ಲ. ಮಾನ್ಯ ವಿರೋಧಪಕ್ಷದ ನಾಯಕರು ಇಲ್ಲಿಯೇ ಕುಳಿತುಕೊಂಡಿದ್ದಾರೆ ಮತ್ತು ಅವರು ಕಾಂಗ್ರೆಸ್ ಪಕ್ಷದ ಮುಖಂಡರು ಕೂಡ ಆಗಿದ್ದಾರೆ. ಮಾನ್ಯ ರಮೇಶ್‌ಕುಮಾರ್‌ರವರು ಸಹ ಕಾಂಗೆಸ್ ಪಕ್ಷದ ಮುಖಂಡರು ಆಗಿದ್ದಾರೆ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಈಗ ಇಲ್ಲಿ ಇಲ್ಲ. ಈ ಸಂದರ್ಭದಲ್ಲಿ ನಾನು ಹೇಳುವುದೇನೆಂದರೆ ನೀವುಗಳು ನಿಮ್ಮ ಆತ್ಮ ಶೋಧನೆ ಮಾಡಿಕೊಳ್ಳಿ. ಮತ್ತೆ ಆ ಕಡೆ ಬಿ.ಜೆ.ಪಿ. ಯವರು ಆತ್ಮ ಶೋಧನೆ ಮಾಡಿಕೊಳ್ಳಿ ಹಾಗೆಯೇ ಜೆ.ಡಿ.ಎಸ್. ನವರು ಆತ್ಮ ಶೋಧನೆ ಮಾಡಿಕೊಳ್ಳಿ. ನಿಮ್ಮಗಳ ಆತ್ಮಶೋಧನೆ ಮಾಡಿಕೊಳ್ಳುವುದಕ್ಕೆ ಇವತ್ತು ಒಳ್ಳೆಯ ಕಾಲ ನಿರ್ಮಾಣವಾಗಿದೆ. ನೀವು ಇದನ್ನು ಖಂಡಿತ ಮಾಡಿದರೆ ಸುವರ್ಣ ಕರ್ನಾಟಕ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಊಟ ಆದಮೇಲೆ ಮತ್ತೆ ಮಾತನಾಡುತ್ತೇನೆ.

4. ಪ್ರಕಟಣೆ

ವಿಧಾನ ಪರಿಷತ್ ಸಭಾಪತಿಯವರಿಂದ ಎಲ್ಲಾ ಶಾಸಕರುಗಳಿಗೆ ಭೋಜನಕೂಟ ಏರ್ಪಡಿಸಿರುವ ಬಗ್ಗೆ.

ಉಪಾಧ್ಯಕ್ಷರು : ವಿ.ಆರ್. ಸುದರ್ಶನ್, ಸಭಾಪತಿಗಳು, ವಿಧಾನಪರಿಷತ್ತು ಇವರು ಮಾನ್ಯ ಶಾಸಕರುಗಳು ಹಾಗೂ ಮಾನ್ಯ ಮಾಧ್ಯಮ ಪ್ರತಿನಿಧಿಗಳ ಗೌರವಾರ್ಥ ಈ ದಿವಸ ಮಧ್ಯಾಹ್ನ 2.00 ಗಂಟೆಗೆ ಬಾಂಕ್ವೆಟ್ ಹಾಲ್‌ನಲ್ಲಿ ಭೋಜನಕೂಟವನ್ನು ಏರ್ಪಡಿಸಿರುತ್ತಾರೆ. ದಯವಿಟ್ಟು ತಾವೆಲ್ಲರೂ ಭಾಗವಹಿಸಬೇಕೆಂದು ಕೋರುತ್ತೇನೆ. ಈಗ ಸದನವನ್ನು ಮಧ್ಯಾಹ್ನ 3.30 ಗಂಟೆವರೆಗೆ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 1 ಗಂಟೆ 17 ನಿಮಿಷಕ್ಕೆ ಮುಂದೂಲ್ಪಟ್ಟು ಪುನ: ಮಧ್ಯಾಹ್ನ 3.30 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)